ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 26 | ಜೂನ್ 22-28, 2020, | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com



ಕೊರೊನಾ - ಲಾಕ್‌ಡೌನ್:

ಮೋದಿ ಸರ್ಕಾರದ ವಿಫಲತೆ


ಜೂನ್ 16 ಸಿಪಿಐ(ಎಂ) ದೇಶವ್ಯಾಪಿ ಪ್ರತಿಭಟನೆ



ಪೆಟ್ರೋಲ್-ಡೀಸೆಲ್ ಬೆಲೆಯೇರಿಕೆ: ಕೊಡುವ ಬದಲು ಕಿತ್ತುಕೊಳ್ಳುವ ಸರ್ಕಾರ

ಭಾರತದ ಆಹಾರ ಭದ್ರತೆಗೆ ಕತ್ತರಿ





ಎಲ್.ಜಿ. ಪಾಲಿಮರ್ ಸೋರಿಕೆ ದುರಂತ: ಪರಿಸರದ ಬಗ್ಗೆ ಬೇಜವಾಬ್ದಾರಿತನ



ಗಡಿಗಳು ಇರುವವರೆಗೂ ಗಡಿ ವಿವಾದಗಳು ಇರುತ್ತವೆ



ಜನಗಳ ತುರ್ತು ಬೇಡಿಕೆಗಳನ್ನು ಈಡೇರಿಸಿ–ವಿಫಲರಾದರೆ ಇನ್ನಷ್ಟು ಬಲವಾದ ಪ್ರತಿಭಟನೆಗಳು

ಕೇಂದ್ರ ಸರಕಾರಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಎಚ್ಚರಿಕೆ

ಜೂನ್ 16ರಂದು ಸಿಪಿಐ(ಎಂ)ನ ಎಲ್ಲ ಘಟಕಗಳು, ಸದಸ್ಯರು ಮತ್ತು ಬೆಂಬಲಿಗರು ಪ್ರತಿಭಟನಾ ದಿನಾಚರಣೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದ್ದಾರೆ. ಅವರೆಲ್ಲರಿಗೆ ಅಭಿನಂದನೆ ಸಲ್ಲಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಪ್ರತಿಭಟನೆಯ ಕರೆಗೆ ಸಿಕ್ಕಿರುವ ಉತ್ತಮ ಸ್ಪಂದನೆ ಕೇಂದ್ರ ಸರಕಾರದ ಮುಂದೆ ಎತ್ತಿರುವ ಬೇಡಿಕೆಗಳು ಜನಗಳ ತುರ್ತು ಆವಶ್ಯಕತೆಗಳು ಎಂಬುದನ್ನು ತೋರಿಸಿದೆ ಎಂದಿದೆ.

1) ಆದಾಯ ತೆರಿಗೆ ತೆರುವ ಮಿತಿಗಳ ಹೊರಗಿರುವ ಎಲ್ಲ ಕುಟುಂಬಗಳಿಗೆ ತಿಂಗಳಿಗೆ ರೂ.7500 ರಂತೆ ಆರು ತಿಂಗಳ ವರೆಗೆ ನಗದು ವರ್ಗಾವಣೆ, 2) ಪ್ರತಿವ್ಯಕ್ತಿಗೆ ತಿಂಗಳಿಗೆ 10 ಕೆ.ಜಿ. ಯಂತೆ ಆರು ತಿಂಗಳ ವರೆಗೆ ಉಚಿತ ಆಹಾರಧಾನ್ಯಗಳ ವಿತರಣೆ, 3) ಮನರೇಗದ ಅಡಿಯಲ್ಲಿ ಹೆಚ್ಚಿಸಿದ ಕೂಲಿಗಳೊಂದಿಗೆ ಕನಿಷ್ಟ 200 ದಿನಗಳ ಉದ್ಯೋಗ. ನಗರದ ಬಡವರಿಗೂ ಉದ್ಯೋಗ ಖಾತ್ರಿ ಯೋಜನೆಯ ವಿಸ್ತರಣೆ. ನಿರುದ್ಯೋಗಿ ವ್ಯಕ್ತಿಗಳಿಗೆ ತಕ್ಷಣವೇ ಒಂದು ನಿರುದ್ಯೋಗ ಭತ್ಯೆಯ ಪ್ರಕಟಣೆ, 4) ರಾಷ್ಟ್ರೀಯ ಆಸ್ತಿಗಳ ಲೂಟಿಯನ್ನು, ಸಾರ್ವಜನಿಕ ವಲಯದ ಖಾಸಗೀಕರಣವನ್ನು ಮತ್ತು ಕಾರ್ಮಿಕ ಕಾನೂನುಗಳನ್ನು ರದ್ದು ಮಾಡುವುದನ್ನು ನಿಲ್ಲಿಸಬೇಕು ಮತ್ತು 5) ಕೃಷಿ ಬೆಳೆಗಳನ್ನು ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಟ 50ಶೇ. ಹೆಚ್ಚಿನ ಕನಿಷ್ಟ ಬೆಂಬಲ ಬೆಲೆಗಳಲ್ಲಿ ಖರೀದಿಸಬೇಕು ಮತ್ತು ನಮ್ಮ ಎಲ್ಲ ರೈತರಿಗೆ ಒಂದು ಬಾರಿಯ ಸಾಲಮನ್ನಾ ಕೊಡಬೇಕು ಎಂದು ಈ ಪ್ರತಿಭಟನೆಗಳಲ್ಲಿ ಆಗ್ರಹಿಸಲಾಗಿದೆ.

ಈ ಆಗ್ರಹಗಳನ್ನು ಜಾರಿಗೊಳಿಸಲು ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಸರಕಾರಕ್ಕೆ ಕರೆ ನೀಡಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇವು ನಮ್ಮ ಜನಗಳ ತುರ್ತು ಆವಶ್ಯಕತೆಗಳು, ಇವನ್ನು ಜಾರಿಗೊಳಿಸಲು ವಿಫಲರಾದರೆ ಜನಗಳ ಇನ್ನೂ ಬಲವಾದ ಪ್ರತಿಭಟನೆಗಳನ್ನು ಎದುರಿಸಬೇಕಾಗುತ್ತದೆ ಎಂದು ಸರಕಾರವನ್ನು ಎಚ್ಚರಿಸಿದೆ.

ಲಡಾಖ್ ಗಡಿಯಲ್ಲಿ ಪರಿಸ್ಥಿತಿಯನ್ನು ತಿಳಿಗೊಳಿಸಬೇಕು – ಸಿಪಿಐ(ಎಂ) ಪೊಲಿಟ್‌ಬ್ಯುರೊ

ಲಡಾಖ್‌ನಲ್ಲಿ ವಾಸ್ತವ ಹತೋಟಿ ರೇಖೆಯಲ್ಲಿ ಸನ್ನಿವೇಶವನ್ನು ತಿಳಿಗೊಳಿಸುವ ಪ್ರಕ್ರಿಯೆಯ ವೇಳೆಯಲ್ಲಿಯೇ ಗಾಲ್ವನ್ ಕಣಿವೆಯಲ್ಲಿ ಒಂದು ಘರ್ಷಣೆ ನಡೆದಿರುವುದು ದುರದೃಷ್ಟಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಇದು ಜೂನ್ 6ರಂದು ಘರ್ಷಣೆಯನ್ನು ತಪ್ಪಿಸುವ ಪ್ರಕ್ರಿಯೆಯನ್ನು ಚರ್ಚಿಸಲು ಎರಡೂ ಕಡೆಯಿಂದ ಉನ್ನತ ಮಿಲಿಟರಿ ಮಟ್ಟದಲ್ಲಿ ಮಾತುಕತೆಗಳು ಆರಂಭವಾದ ನಂತರ ನಡೆದಿದೆ. ಎರಡೂ ಕಡೆಗಳಿಂದ ಸಾವು–ನೋವುಗಳು ವರದಿಯಾಗಿದೆ.

ಒಬ್ಬ ಭಾರತೀಯ ಅಧಿಕಾರಿ ಮತ್ತು ಇಬ್ಬರು ಸೈನಿಕರು ಸಾವಿಗೀಡಾಗಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಆಳವಾದ ಸಂತಾಪ ವ್ಯಕ್ತಪಡಿಸಿದೆ. (ಈ ಹೇಳಿಕೆ ಪ್ರಕಟವಾದ ಮೇಲೆ ಈಗ ಸಾವಿಗೀಡಾದವರ ಸಂಖ್ಯೆ 20 ಎಂದು ವರದಿಯಾಗಿದೆ).

ಈ ಸ್ಥಳದಲ್ಲಿ ಎರಡೂ ಕಡೆಯ ಮಿಲಿಟರಿ ಅಧಿಕಾರಿಗಳು ಪರಿಸ್ಥಿತಿಯನ್ನು ಶಮನ ಮಾಡಲು ಸಭೆ ನಡೆಸುತ್ತಿದ್ದಾರೆ ಎಂಬ ಭಾರತೀಯ ಸೇನೆಯ ಹೇಳಿಕೆ ಶಾಂತಿಯ ಕೈಮೇಲಾಗುತ್ತದೆ ಎಂಬುದನ್ನು ಖಾತ್ರಿ ಪಡಿಸಬೇಕು.

ನಿಜವಾಗಿ ಏನು ನಡೆಯಿತು ಎಂಬುದರ ಬಗ್ಗೆ ಭಾರತ ಸರಕಾರ ಒಂದು ಅಧಿಕಾರಿಕ ಹೇಳಿಕೆಯನ್ನು ಪ್ರಕಟಿಸಬೇಕಾಗಿದೆ. ಸನ್ನಿವೇಶವನ್ನು ತಿಳಿಗೊಳಿಸಲು ಮತ್ತು ಗಡಿಯಲ್ಲಿ ಶಾಂತಿ ಹಾಗೂ ಪ್ರಶಾಂತತೆಯನ್ನು ಕಾಯ್ದುಕೊಳ್ಳುವ ಬಗ್ಗೆ ಒಂದು ಪರಸ್ಪರ ಒಪ್ಪಿಗೆಯಾದ ತಿಳುವಳಿಕೆಯ ಆಧಾರದಲ್ಲಿ ಘರ್ಷಣೆಯನ್ನು ತಪ್ಪಿಸುವ ಪ್ರಕ್ರಿಯೆಯನ್ನು ಮುಂದುವರೆಸಲು ಎರಡೂ ಸರಕಾರಗಳು ತಕ್ಷಣವೇ ಉನ್ನತ ಮಟ್ಟದ ಮಾತುಕತೆಗಳನ್ನು ಆರಂಭಿಸುವುದು ಅಗತ್ಯವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ

ಜುಲೈ 2–4: ಕಲ್ಲಿದ್ದಲು ಕಾರ್ಮಿಕರ 3 ದಿನಗಳ ದೇಶವ್ಯಾಪಿ ಐಕ್ಯ ಮುಷ್ಕರ

ಕಲ್ಲಿದ್ದಲು ವಲಯದ ಕಾರ್ಮಿಕರ ಎಲ್ಲ ಸಂಘಗಳು ಮತ್ತು ಒಕ್ಕೂಟಗಳು ಕಲ್ಲಿದ್ದಲು ಗಣಿಗಳ ಖಾಸಗೀಕರಣದ ವಿರುದ್ಧ ಮೂರು ದಿನಗಳ ಮುಷ್ಕರವನ್ನು ನಡೆಸಲು ನಿರ್ಧರಿಸಿವೆ. ಜುಲೈ 2, 3 ಮತ್ತು 4ರಂದು ದೇಶದ ಎಲ್ಲ ಕಲ್ಲಿದ್ದಲು ಗಣಿಗಳಲ್ಲಿ ಮತ್ತು ಕಚೇರಿಗಳಲ್ಲಿ ಈ ಮುಷ್ಕರ ನಡೆಯಲಿದೆ. ವಿದೇಶಿ ಕಂಪನಿಗಳೂ ಸೇರಿದಂತೆ ಖಾಸಗಿ ಕಂಪನಗಳಿಗೆ ವಾಣಜ್ಯ ಗಣಿಗಾರಿಕೆಗೆ ಅವಕಾಶ ಕೊಡುವ, ಸಿಎಂಪಿಡಿಐಎಲ್ ನನ್ನು ಕೋಲ್ ಇಂಡಿಯ ಲಿ. ಯಿಂದ ಪ್ರತ್ಯೇಕಿಸುವ ಮತ್ತು ಈ ಮೂಲಕ ಸಾರ್ವಜನಿಕ ವಲಯದ ಕಲ್ಲಿದ್ದಲು ಗಣಿಗಾರಿಕೆ ಕಂಪನಿಗಳನ್ನು ಖಾಸಗೀಕರಿಸುವ ಮೋದಿ ಸರಕಾರದ ನಿರ್ಧಾರವನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಈ ಮುಷ್ಕರವನ್ನು ಯೋಜಿಸಲಾಗಿದೆ.

ಸರಕಾರ ಕಲ್ಲಿದ್ದಲು ವಲಯದಲ್ಲಿ 100ಶೇ. ಎಫ್‌ಡಿಐ ಗೆ ಅವಕಾಶ ನೀಡಿರುವ ಹಿನ್ನೆಲೆಯಲ್ಲಿ ಈ ನಿರ್ಣಯ ಬಂದಿದೆ. 1970ರ ದಶಕದಲ್ಲಿ ದೇಶದ ಇಂಧನ ಭದ್ರತೆಗಾಗಿ ಕಲ್ಲಿದ್ದಲು ವಲಯವನ್ನು ರಾಷ್ಟ್ರೀಕರಿಸಲಾಗಿತ್ತು. ಮೋದಿ ಸರಕಾರ ಅದನ್ನೀಗ ತಲೆಕೆಳಗಾಗಿಸಿದೆ. ವಾಣಿಜ್ಯ ಗಣಿಗಾರಿಕೆಯ ಉದ್ದೇಶ ಅಂತಿಮವಾಗಿ ಈ ರಾಷ್ಟ್ರೀಯ ಸಂಪನ್ಮೂಲದ ಹತೋಟಿಯನ್ನು ಸಂಪೂರ್ಣವಾಗಿ ದೇಶಿ–ವಿದೇಶಿ ಬಂಡವಳಿಗರಿಗೆ ಒಪ್ಪಿಸುವುದೇ ಆಗಿದೆ. ಈ ಮೂಲಕ ಸ್ವಾವಲಂಬನೆಯ ಮೇಲೆ ಇದು ಭಾರೀ ಹೊಡೆತ ನೀಡುತ್ತದೆ.

ಇದು ದೇಶದ ಕೈಗಾರಿಕಾ ಜಾಲದ ಮತ್ತು ಸಾಮಾನ್ಯ ಬಳಕೆದಾರರ ಅಗತ್ಯಗಳನ್ನು ಸಂಪೂರ್ಣವಾಗಿ ಉಪೇಕ್ಷಿಸಿರುವ ನಿರ್ಣಯ ಎಂದಿರುವ ದೇಶದ ಪ್ರಮುಖ ಕೇಂದ್ರ ಕಾರ್ಮಿಕ ಸಂಘಟನೆ ಸಿಐಟಿಯು ಇದರ ವಿರುದ್ಧ ಈ ವಲಯದ ಕಾರ್ಮಿಕ ಸಂಘಗಳ ಮುಷ್ಕರದ ನಿರ್ಧಾರವನ್ನು ಸ್ವಾಗತಿಸಿದೆ. ಇದು ಸಾರ್ವಜನಿಕ ವಲಯದ ಮತ್ತು ದೇಶದ ಆರ್ಥಿಕ ಸ್ವಾವಲಂಬನೆಯ ರಕ್ಷಣೆಯ ಹೋರಾಟವೂ ಆಗಿದೆ ಎಂದು ಅದು ಹೇಳಿದೆ. ಸಮಸ್ತ ಕಾರ್ಮಿಕ ಆಂದೋಲನ ಕಲ್ಲಿದ್ದಲು ಕಾರ್ಮಿಕರ ಈ ಕಾರ್ಯಾಚರಣೆಯ ಬೆಂಬಲಕ್ಕೆ ನಿಲ್ಲಬೇಕು ಎಂದು ಸಿಐಟಿಯು ಕರೆ ನೀಡಿದೆ.

ಅಸಮರ್ಥತೆಯನ್ನು ಮುಚ್ಚಿಕೊಳ್ಳುವ ಅಪಪ್ರಚಾರ

ಭಾರತ ಮತ್ತು ಚೀನಾ ನಡುವಿನ ಗಡಿ ವಿವಾದ ಉದ್ವಿಗ್ನ ಪರಿಸ್ಥಿತಿಗೆ ತಿರುಗಿರುವುದನ್ನು ದುರುಪಯೋಗ ಪಡಿಸಿಕೊಳ್ಳಲು ಬಲಪಂಥೀಯ ಶಕ್ತಿಗಳು ತಮ್ಮ ಎಂದಿನ ಕುಟಿಲ ತಂತ್ರಗಳ ಮೊರೆ ಹೋಗಿದ್ದಾರೆ. ಇದು ಆಳುವ ಮಂದಿಯ ವಿಫಲತೆಯನ್ನು, ಸಂಪೂರ್ಣ ಅಸಮರ್ಥತೆಯನ್ನು ಮುಚ್ಚಿಕೊಳ್ಳಲು ಕೂಡ ಅವರಿಗೆ ಬೇಕಾಗಿದೆ. ಅದನ್ನು ಪ್ರತಿಭಟಿಸುತ್ತಿರುವ ಕಮ್ಯುನಿಸ್ಟ್ ಪಕ್ಷಗಳ ಅದರಲ್ಲೂ ಸಿಪಿಐ(ಎಂ) ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ.

ಭಾರತ ಮತ್ತು ಚೀನಾ ನಡುವೆ ಗಡಿ ವಿವಾದ ವಸಾಹತುಶಾಹಿ ಆಳ್ವಿಕೆಯಿಂದ ಬಂದಿರುವ ಬಳುವಳಿ. ವಿವಾದ ಆಗಾಗ ಘರ್ಷಣೆ ರೂಪಕ್ಕೆ ತಿರುಗುತ್ತಿದೆ. ಜೊತೆಗೆ ಎರಡು ಯುದ್ಧಗಳಿಗೂ ಕಾರಣವಾಗಿದೆ. ಆರು ತಿಂಗಳಿನಿಂದ ಗಡಿಯಲ್ಲಿ ಇದ್ದ ದ್ವೇಷಮಯ ವಾತಾವರಣ ಜೂನ್ 15ರಂದು ಘರ್ಷಣೆಗೆ ತಿರುಗಿದ್ದು, ಸಾವುನೋವುಗಳಿಗೂ ಕಾರಣವಾಗಿದೆ.

ಈ ಸಂದರ್ಭವನ್ನು ದುರುಪಯೋಗ ಮಾಡಿಕೊಂಡಿರುವ ಈ ದುಷ್ಟ ಶಕ್ತಿಗಳು ಮರುದಿನ, ಜೂನ್ 16ರ ಸಿಪಿಐ(ಎಂ) ಅಖಿಲ ಭಾರತ ಪ್ರತಿಭಟನಾ ದಿನಾಚರಣೆಯ ಫೋಟೋಗಳನ್ನು ತಿರುಚಿ ಭಾರತೀಯ ಸೇನೆಗೆ ಧಿಕ್ಕಾರ ಚೀನಾ ಜಿಂದಾಬಾದ್ ಕೂಗಿದ್ದಾರೆ ಎಂದು ಪ್ರಚಾರ ಮಾಡುವ ಪ್ರಯತ್ನ ನಡೆಸಿದ್ದಾರೆ. ಇದು ಜೂನ್ 2ರಂದು ನಿರ್ಧರಿಸಿದ ಕಾರ್ಯಕ್ರಮದಂತೆ ಅಯೋಜಿತ ಲಾಕ್‌ಡೌನಿನಿಂದ ಬಾಧಿತರಾಗಿರುವ ಕೋಟ್ಯಂತರ ಜನಗಳಿಗೆ ಪರಿಹಾರ ಕೊಡಲಾಗದ ಮೋದಿ ಸರಕಾರದ ವಿರುದ್ಧ ಜೂನ್ 16 ರ ರಾಷ್ಟ್ರೀಯ ಪ್ರತಿಭಟನಾ ದಿನಾಚರಣೆಯ ಭಾಗವಾಗಿ ಸಿಪಿಐ(ಎಂ) ಕೇಂದ್ರ ಸಮಿತಿಯೆದುರು ನಡೆದ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮತ್ತು ಪೊಲಿಟ್‌ಬ್ಯೂರೋ ಸದಸ್ಯರಾದ ಬೃಂದಾ ಕಾರಟ್ ಪ್ರತಿಭಟನೆ ನಡೆಸುವಾಗ ಬಳಸಿದ ಪ್ಲೇಕಾರ್ಡ್‌ಗಳನ್ನು ತಿರುಚಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಈ ಸುಳ್ಳು ಪ್ರಚಾರದ ವಿರುದ್ಧ ದೆಹಲಿ, ಮುಂಬೈ ಆಂಧ್ರಪ್ರದೇಶದಲ್ಲಿ ದೂರು ದಾಖಲಿಸಲಾಗಿದೆ.



ಜೂನ್ 16ರ ರಾಷ್ಟ್ರೀಯ ಪ್ರತಿಭಟನಾ ದಿನಾಚರಣೆಯಂದು ದಿಲ್ಲಿಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಯ ಕಚೇರಿಯೆದುರು (ಪುಟ 8 ಮತ್ತು 16 ನೋಡಿ)





ನ್ಯಾ|| ಹೊಸಬೆಟ್ಟು ಸುರೇಶ್ ನಿಧನ

ಮುಂಬಯಿ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಹಾಗೂ ಪ್ರಖ್ಯಾತ ಮಾನವ ಹಕ್ಕುಗಳ ಪ್ರತಿಪಾದಕ ನ್ಯಾಯಮೂರ್ತಿ ಹೊಸಬೆಟ್ಟು ಸುರೇಶ್ ಅವರು ಜೂನ್ 11ರಂದು ಮುಂಬಯಿಯಲ್ಲಿ ನಿಧನರಾಗಿದ್ದಾರೆ.

ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನ ಹೊಸಬೆಟ್ಟು ಗ್ರಾಮದಲ್ಲಿ ಜುಲೈ 20, 1929 ರಂದು ಜನಿಸಿದ ಇವರು ತಮ್ಮ ವಕೀಲ ವೃತ್ತಿಯನ್ನು ಆರಂಭಿಸಿದ್ದು ಮುಂಬೈನಲ್ಲಿ. 1987ರಿಂದ ಮುಂಬಯಿ ಹೈಕೋರ್ಟಿನ ನ್ಯಾಯಾಧೀಶರಾಗಿದ್ದು ಜುಲೈ 1991ರಲ್ಲಿ ನಿವೃತ್ತರಾದ ಮೇಲೆ ಮಾನವ ಹಕ್ಕುಗಳ ಒಬ್ಬ ಪ್ರಮುಖ ಪ್ರತಿಪಾದಕರಾಗಿ ಹೆಚ್ಚು ಪ್ರಖ್ಯಾತರಾದರು.

ನಿವೃತ್ತರಾದ ಹೊಸದರಲ್ಲೇ ಇವರು ಡಿಸೆಂಬರ್ 1991ರಲಿ ಬೆಂಗಳೂರಿನಲ್ಲಿ ನಡೆದ ಕಾವೇರಿ ಗಲಭೆಗಳ ತನಿಖೆಗೆ ನ್ಯಾಯಮೂರ್ತಿ ತೆವಟಿಯಾರೊಂದಿಗೆ ನೇಮಕಗೊಂಡರು. ನಂತರ ಬಾಬ್ರಿ ಮಸೀದಿ ಧ್ವಂಸದ ಬೆನ್ನಲ್ಲಿ ಮುಂಬೈನಲ್ಲಿ ಡಿಸೆಂಬರ್ 1992–ಜನವರಿ 1993ರಲ್ಲಿ ನಡೆದ ಗಲಭೆಗಳ ತನಿಖೆಗೆ ಭಾರತೀಯ ಮಾನವ ಹಕ್ಕುಗಳ ಜನತಾ ಆಯೋಗ ಇವರನ್ನು ಮತ್ತು ನಿವೃತ್ತ ಹಿರಿಯ ಅಡ್ವೋಕೇಟ್ ಎಸ್.ಎಂ. ದವುದ್‌ರನ್ನು ನೇಮಿಸಿತು. ಇವರಿಬ್ಬರೂ ಸೇರಿ ಈ ಕುರಿತ 'ದಿ ಪೀಪಲ್ಸ್ ವರ್ಡಿಕ್ಟ್' (ಜನತಾ ತೀರ್ಪು) ಪ್ರಕಟಿಸಿದರು.

1995ರಲ್ಲಿ ಇವರಿಬ್ಬರು ಮತ್ತು ನ್ಯಾಯಮೂರ್ತಿ ರಾಜಿಂದರ್ ಸಚಾರ್ ಸೇರಿಕೊಂಡು ಮುಂಬೈ

ಪುಟ 14 ನೋಡಿ

ಸಂಪಾದಕೀಯ

ಗಡಿಗಳು ಇರುವವರೆಗೂ ಗಡಿ ವಿವಾದಗಳು ಇರುತ್ತವೆ

ಭಾರತ ಚೀನಾ ನಡುವಿನ ವಾಸ್ತವ ನಿಯಂತ್ರಣ ರೇಖೆಯಲ್ಲಿ ಕಳೆದ ಸೋಮವಾರ ರಾತ್ರಿ ಎರಡು ದೇಶಗಳ ಸೈನಿಕರ ನಡುವೆ ನಡೆದ ಪರಸ್ಪರ ಹೊಡೆದಾಟದಲ್ಲಿ ಭಾರತದ ಇಪ್ಪತ್ತು ಸೈನಿಕರು ಬರ್ಬರವಾಗಿ ಸಾವಿಗೀಡಾಗಿರುವುದು ಖಂಡನೀಯ. ಅದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಚೀನಾ ಸೈನಿಕರಲ್ಲಿ ಸಾವು ನೋವು ಸಂಭವಿಸಿದೆ ಎಂಬ ವರದಿಯು ಸಹ ಆಘಾತಕಾರಿಯಾಗಿದೆ. ಎರಡು ಸೇನೆಗಳ ನಡುವೆ ಉಂಟಾಗಿದ್ದ ಉದ್ವಿಗ್ನ ಪರಿಸ್ಥಿತಿಯನ್ನು ಶಮನಗೊಳಿಸಲು ಉಭಯ ದೇಶಗಳ ಉನ್ನತ ಮಿಲಿಟರಿ ಅಧಿಕಾರಿಗಳ ನಡುವೆ ಮಾತುಕತೆಗಳು ನಡೆದ ನಂತರ ಎಲ್ಲವೂ ಸರಿ ಹೋಯಿತು ಎಂದುಕೊಳ್ಳಲಾಗಿತ್ತು. ಎರಡೂ ದೇಶಗಳು ತಮ್ಮ ಸೇನೆಯನ್ನು ಹಂತಹಂತವಾಗಿ ಹಿಂತೆಗೆದು ಕೊಳ್ಳಲಾಗುತ್ತಿದೆ ಎಂದು ಹೇಳಲಾಯಿತು. ಆದರೆ ಎಲ್ಲಾ ಶಾಂತಿಪ್ರಿಯ ಜನರ ನಿರೀಕ್ಷೆಗಳನ್ನು ಸುಳ್ಳಾಗಿಸುವ ಘಟನೆ ನಡೆದಾಗ ಇಡೀ ದೇಶವೇ ಬೆಚ್ಚಿಬೀಳುವಂತಾಯಿತು. 1996 ರಲ್ಲಿ ಆಗಿರುವ ದ್ವಿಪಕ್ಷೀಯ ಒಪ್ಪಂದ ಪ್ರಕಾರ ಇಲ್ಲಿ ಗುಂಡು ಮುಂತಾದ ಸ್ಫೋಟಕಗಳನ್ನು ಬಳಸುವಂತಿಲ್ಲ. ಕೇವಲ ಕಲ್ಲು ದೊಣ್ಣೆ ಕಬ್ಬಿಣದ ಸರಳುಗಳನ್ನು ಬಳಸಲಾಗಿದೆ ಎನ್ನಲಾಗುತ್ತದೆ. ಶಸ್ತ್ರಾಸ್ತ್ರಗಳ ಬಳಕೆ ಆಗಿದ್ದರೆ ಸಂಭವಿಸಬಹುದಾದ ಸಾವು ನೋವುಗಳ ಪ್ರಮಾಣ ಊಹಿಸಲಸಾಧ್ಯ. ಇಲ್ಲಿ ಸೈನಿಕರು ಪರಸ್ಪರ ಹತ್ತಿರಕ್ಕೆ ಬಂದು ಕೈ ಕೈ ಮಿಲಾಯಿಸಿ ಕೊಂಡು ಹೊಡೆದಾಡಿದ್ದಾರೆ ಎಂದು ಭಾಸವಾಗುತ್ತದೆ.

ಭಾರತ–ಚೀನಾ ಗಡಿ ವಿವಾದ ಇಂದು ನಿನ್ನೆಯದಲ್ಲ. ಗಡಿಗಳು ಇರುವ ವರೆಗೂ ಗಡಿ ವಿವಾದಗಳಿರುತ್ತವೆ. ಗಡಿ ವಿವಾದಗಳನ್ನು ಇಂತಹ ಹೊಡೆದಾಟ, ಯುದ್ಧಗಳಿಂದ ಬಗೆಹರಿಸಲು ಸಾಧ್ಯವಿಲ್ಲ. ದೇಶಗಳ ನಡುವಿನ ವಿವಾದಗಳನ್ನು ಪರಸ್ಪರ ಮಾತುಕತೆಗಳ ಮೂಲಕ ಹಂತ ಹಂತವಾಗಿ ಇತ್ಯರ್ಥ ಪಡಿಸಬಹುದು. ಇದನ್ನು ಭಾರತ ಹಾಗೂ ಅದರ ನೆರೆಯ ದೇಶಗಳು ಮನಗಾಣಬೇಕಾಗಿದೆ. ನಮ್ಮ ನೆರೆಹೊರೆಯವರನ್ನು ಬದಲಾಯಿಸಲು ಬರುವುದಿಲ್ಲ. ಅವರೊಂದಿಗೆ ಪರಸ್ಪರ ಶಾಂತಿ ಸೌಹಾರ್ದತೆಯಲ್ಲಿ ಬಾಳುವುದೇ ಜಾಣತನ. ಎರಡು ದೇಶಗಳ ನಡುವಿನ ವಿವಾದವನ್ನು ಬಗೆಹರಿಸಲು ಮೂರನೇ ದೇಶವೊಂದಕ್ಕೆ ಮಧ್ಯ ಪ್ರವೇಶ ಮಾಡಲು ಅವಕಾಶ ಕೊಡಬಾರದು. ಭಾರತ–ಚೀನಾ ನಡುವಿನ ವಿವಾದದಲ್ಲಿ ಮಧ್ಯಸ್ಥಿಕೆ ವಹಿಸಲು ಅಮೆರಿಕ ತುದಿಗಾಲ ಮೇಲೆ ನಿಂತಿದೆ. ಅಧ್ಯಕ್ಷ ಟ್ರಂಪ್ ಅಂತಹ ಒಂದು ಘೋಷಣೆಯನ್ನು ಮಾಡಿಯೇ ಬಿಟ್ಟಿದ್ದರು. ಪ್ರಧಾನಿ ಮೋದಿಯವರಿಗೂ ಅದು ಒಪ್ಪಿಗೆಯ ಪ್ರಸ್ತಾಪವಾಗಿತ್ತು. ಆದರೆ ಭಾರತದಲ್ಲಿ ಟ್ರಂಪ್ ಪ್ರಸ್ತಾಪಕ್ಕೆ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಟ್ರಂಪ್–ಮೋದಿ ಜೋಡಿ ಹಿಂದಕ್ಕೆ ಸರಿಯುವಂತಾಯಿತು.

ಸಾಮ್ರಾಜ್ಯಶಾಹಿಯಾಗಿ ಬೆಳೆದಿರುವ ಬಂಡವಾಳಶಾಹಿ ಅಮೆರಿಕಕ್ಕೆ ಚೀನಾದ ಬೆಳವಣಿಗೆಯನ್ನು ಸಹಿಸಿಕೊಳ್ಳಲಾಗುತ್ತಿಲ್ಲ ಚೀನಾದ ಆರ್ಥಿಕ ಪ್ರಗತಿಯನ್ನು ಹೇಗಾದರೂ ಮಾಡಿ ಹತ್ತಿಕ್ಕಬೇಕೆಂಬುದೇ ಅಮೇರಿಕದ ಗುರಿ. ಕೊರೊನಾ ವೈರಾಣುವನ್ನು ಸೃಷ್ಟಿಸಿದ ಆರೋಪವನ್ನು ಚೀನಾದ ಮೇಲೆ ಹೊರಿಸಿ ವಿಶ್ವದಾದ್ಯಂತ ಚೀನಾ ವಿರೋಧಿ ಭಾವನೆಯನ್ನು ಬೆಳೆಸಲು ಅಮೇರಿಕ ತನ್ನ ಗಮನವನ್ನು ಕೇಂದ್ರೀಕರಿಸಿದೆ. ಈಗ ಭಾರತ–ಚೀನಾ ಗಡಿ ವಿವಾದದ ನೆಪವನ್ನು ಮುಂದಿಟ್ಟು ಭಾರತೀಯರಲ್ಲಿ ಚೀನಾ ವಿರುದ್ಧ ದ್ವೇಷವನ್ನು ಕೆರಳಿಸುವ ಪ್ರಯತ್ನ ನಡೆಯುತ್ತಿದೆ. ಗಡಿಯಲ್ಲಿ ಯುದ್ಧದಂತಹ ಪರಿಸ್ಥಿತಿಯನ್ನು ಹುಟ್ಟುಹಾಕಿ ಭಾರತದ ನೆಲದಿಂದ ಚೀನಾದ ಮೇಲೆ ದಾಳಿ ಮಾಡಲು ರಣತಂತ್ರವನ್ನು ರೂಪಿಸಲಾಗುತ್ತಿದೆ. ಅಮೇರಿಕದ ಈ ತಂತ್ರಕುತಂತ್ರವನ್ನು ಅರಿತಿರುವ ಚೀನಾ ತನ್ನ ರಕ್ಷಣೆಗಾಗಿ ತನ್ನದೇಯಾದ ಕಾರ್ಯವ್ಯೂಹವನ್ನು ರೂಪಿಸುತ್ತಿದೆ.

ಭಾರತದ ಹಿತ ಯಾವೂದರಲ್ಲಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಮೋದಿಯವರಿಗೆ ಸಾಧ್ಯವಾಗಬೇಕು. ಚೀನಾ ಸರಕುಗಳನ್ನು ಬಹಿಷ್ಕರಿಸುವ ಸೇಡಿನ ಕ್ರಮಗಳಿಂದ ಪ್ರಯೋಜನವಾಗದು. ಇನ್ನೊಬ್ಬರನ್ನು ಹೆದರಿಸುವ ವ್ಯಕ್ತಿ ಸ್ವತಃ ಹೇಡಿಯಾಗಿರುತ್ತಾನೆ. ಇಂತಹ ಬೆದರಿಕೆಗಳಿಗೆ ಚೀನಾ ಸೊಪ್ಪುಹಾಕುವಂತೆ ಕಾಣುವುದಿಲ್ಲ. ಚೀನಾವಾದರೂ ಇನ್ನೊಂದು ದೇಶದ ಬಲಹೀನತೆಯ ದುರುಪಯೋಗ ಮಾಡುವುದಾಗಬಾರದು. ವಿವಾದವನ್ನು ಮಾತುಕತೆಯ ಮೂಲಕವಷ್ಟೇ ಇತ್ಯರ್ಥಪಡಿಸಲು ಮುಂದಾಗಬೇಕು. ಸದ್ಯದ ಸಮಸ್ಯೆಗೆ ಮಾತುಕತೆ ಪರಿಹಾರವೇ ಹೊರತು ಯುದ್ಧವಲ್ಲ. ಭಾರತ ಮತ್ತು ಚೀನ ನಡುವಣ ವಾಸ್ತವ ನಿಯಂತ್ರಣ ರೇಖೆ(ಎಲ್‌ಎಸಿ)ಯನ್ನು ಬದಲಾಯಿಸಲು ಯಾರೂ ಪ್ರಯತ್ನ ಪಡಬಾರದು. ಗಡಿ ರೇಖೆ ಉಲ್ಲಂಘನೆಗೆ ಎರಡೂ ಕಡೆಯವರು ತಮ್ಮ ಯೋಧರಿಗೆ ಪ್ರಚೋದನೆ ನೀಡಬಾರದು.

ಇಂದು ವಿಶ್ವದ ಎಲ್ಲಾ ದೇಶಗಳು ಒಂದಾಗಿ ನಿಂತು ಕೋವಿಡ್–19 ಎಂಬ ಭಯಂಕರ ಸಾಂಕ್ರಾಮಿಕ ರೋಗವನ್ನು ಎದುರಿಸಬೇಕಾಗಿದೆ. ಇಂತಹ ಆತಂಕದ ಸಮಯದಲ್ಲಿ ದೇಶಗಳ ನಡುವೆ ಹಿಂದಿಗಿಂತಲೂ ಹೆಚ್ಚು ಸಹಕಾರ ಅಗತ್ಯವಾಗಿದೆ. ಗಡಿಗಳ ಉಳುವಿಗಿಂತ ಮಾನವ ಕುಲದ ಉಳಿವು ಮುಖ್ಯವಾಗಿದೆ. ಯುದ್ಧದಾಹ ದೇಶ ಪ್ರೇಮದ ಸಂಕೇತವಲ್ಲ. ಗಡಿಗಳು ಇಲ್ಲದ ವಿಶ್ವವನ್ನು ಕಾಣಲು ನಾವು ಹಾತೊರೆಯಬೇಕು. ಅಲ್ಲಿಯವರೆಗೆ ಗಡಿ ವಿವಾದಗಳನ್ನು ಸೌಹಾರ್ದಯುತ ಮಾತುಕತೆಯ ಮೂಲಕ ಮಾತ್ರ ಬಗೆಹರಿಸಲು ಎಲ್ಲರೂ ಬದ್ಧರಾಗಬೇಕು.

ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ – 2020 ಹಾಗೂ ಕರ್ನಾಟಕ ಭೂ ಸುಧಾರಣಾ ಕಾಯ್ದೆ – 1961 ರ ಕಲಂ, 5, 63, 79 (ಎ)(ಬಿ)(ಸಿ) ಹಾಗೂ 80 ರ ತಿದ್ದುಪಡಿಯ ಪ್ರಸ್ಥಾಪಗಳನ್ನು ಕೈಬಿಡಲು ಒತ್ತಾಯ



ಕರ್ನಾಟಕ ಸರಕಾರ ಮೇ 13, 2020 ರಂದು ಕರ್ನಾಟಕ ಭೂ ಸುಧಾರಣಾ ಕಾಯ್ದೆ– 2020 ನ್ನು ಪ್ರಕಟಿಸಿದೆ ಹಾಗೂ ಕಳೆದ ವಾರ ನಡೆದ ಮಂತ್ರಿ ಮಂಡಲದ ಸಭೆಯಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ– 1961 ರ ಕಲಂ 5, 63, 79 (ಎ)(ಬಿ)(ಸಿ) ಮತ್ತು 80 ಗಳಿಗೆ ತಿದ್ದುಪಡಿ ಮಾಡಲು ನಿರ್ಧರಿಸಿದೆ.

ಸದರಿ ತಿದ್ದುಪಡಿಗಳು ರಾಜ್ಯದ ಅಭಿವೃದ್ದಿಯ ವಿರೋಧಿ ಹಾಗೂ ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಲೂಟಿಗೆ ಮತ್ತು ಕಪ್ಪಹಣದ ಖದೀಮರು ಬಿಳಿಯಾಗಿಸಿಕೊಂಡು, ರೈತರಿಂದ ಬಲವಂತವಾಗಿ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ವ್ಯಾಪಕವಾಗಿ ಕೇಂದ್ರೀಕರಿಸಿಕೊಳ್ಳಲು ಮಾತ್ರವೇ ನೆರವಾಗಲಿವೆ. ಈ ಕ್ರಮಗಳು, ರಾಜ್ಯವನ್ನು ಅತ್ಯಂತ ಗಂಭೀರವಾದ ಸಂಕಷ್ಟಕ್ಕೆ ದೂಡಲಿವೆ. ಇವು ರಾಜ್ಯದ ಮಹಿಳೆಯರು, ದಲಿತರು, ಹಿಂದುಳಿದ ಹಾಗೂ ಮುಂದುವರೆದ ಜಾತಿ ಸಮುದಾಯಗಳ ಮತ್ತು ಅಲ್ಪ ಸಂಖ್ಯಾತ ಬಡವರನ್ನು ತೀವ್ರ ದಬ್ಬಾಳಿಕೆಗೀಡು ಮಾಡುತ್ತವೆ. ಆದ್ದರಿಂದ ಈ ಕ್ರಮಗಳನ್ನು ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿಯು ತೀವ್ರವಾಗಿ ವಿರೋಧಿಸುತ್ತದೆ.

ರಾಜ್ಯದ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ದಿಯ ತಿರುಗಣಿಯಾಗುವಂತೆ, ಸದರಿ ಉಳುಮೆಯಲ್ಲಿ ತೊಡಗಿರುವ ರೈತರು ಹಾಗೂ ಗೇಣಿದಾರನನ್ನು ಭೂ ಒಡೆಯನನ್ನಾಗಿಸುವ ಮತ್ತು ರಕ್ಷಿಸುವ ಭೂಸುಧಾರಣೆಯು ಹಾಗೂ ಅವರ ಕೃಷಿಯು ಲಾಭದಾಯಕವಾಗಿ ನಡೆಯುವಂತೆ ಕೈಗೊಳ್ಳುವ ಕ್ರಮಗಳು ಮಾತ್ರವೇ, ರಾಜ್ಯದ ಆರ್ಥಿಕ ಹಾಗೂ ಸಾಮಾಜಿಕ ಸಂಕಷ್ಟ ನಿವಾರಣೆಗೆ ನಾಂದಿಯಾಗಲಿವೆ.

ಆದರೇ, ಈಗಿನ ತಮ್ಮ ಸರಕಾರದ ಈ ತಿದ್ದುಪಡಿಯ ಕ್ರಮಗಳು, ಮಾತ್ರವಲ್ಲಾ, ಕೇಂದ್ರ ಸರಕಾರ ಈಚೆಗೆ ಪ್ರಕಟಿಸಿದ ಮೂರು ಸುಗ್ರೀವಾಜ್ಞೆಗಳು, ಈ ಎಲ್ಲವೂ ಕಾರ್ಪೋರೇಟ್ ಕಂಪನಿಗಳ ಲೂಟಿಗೆ ದೇಶ ಮತ್ತು ರಾಜ್ಯವನ್ನು ತೆರೆಯಲಿವೆ.

ಮಾತ್ರವಲ್ಲಾ, ಈ ಎಲ್ಲ ಕ್ರಮಗಳು, ಈಗಿನ ಕರ್ನಾಟಕ ಭೂ ಸುಧಾರಣಾ ಕಾಯ್ದೆ– 1961 ನ್ನು ಬುಡಮೇಲು ಮಾಡಲಿವೆ. ಇವೆಲ್ಲವು ಗ್ರಾಮೀಣ ಪ್ರದೇಶಗಳನ್ನು ಮುಂಬರುವ ದಿನಗಳಲ್ಲಿ ಮಸಣಗಳನ್ನಾಗಿ ಪರಿವರ್ತಿಸಲಿವೆ. ಅದೇ ರೀತಿ, ಸಣ್ಣ ಹಾಗೂ ಮದ್ಯಮ ಕೈಗಾರಿಕೆಗಳಿಗೆ ಕಚ್ಚಾ ಮಾಲು ದೊರೆಯದಂತೆ ಮಾಡಿ ಅವುಗಳ ಮುಚ್ಚುವಿಕೆಗೆ ಕಾರಣವಾಗಲಿವೆ. ಚಿಲ್ಲರೆ ವ್ಯಾಪಾರದಲ್ಲಿ ತೊಡಗಿದ್ದ ಸಣ್ಣ ವ್ಯಾಪಾರಿ ವಲಯವನ್ನು ಗುಡಿಸಿ ಹಾಕಲಿವೆ. ಆ ಮೂಲಕ ನಿರುದ್ಯೋಗವನ್ನು ವ್ಯಾಪಕಗೊಳಿಸಲಿವೆ. ದೇಶದ ಹಾಗೂ ರಾಜ್ಯದ ಗ್ರಾಹಕ ಮಾರುಕಟ್ಟೆಯನ್ನ ದೊಡ್ಡ ರೀತಿಯ ಲೂಟಿಗೆ ಒಳಪಡಿಸುತ್ತವೆ.

ಆದ್ದರಿಂದ, ರಾಜ್ಯ ಸರಕಾರ, ಕೇಂದ್ರದ ಸುಗ್ರೀವಾಜ್ಞೆಗಳನ್ನು ರಾಜ್ಯದಲ್ಲಿ ಜಾರಿಗೆ ತರಬಾರದು ಮತ್ತು ಈಗಾಗಲೇ ತಮ್ಮ ಸರಕಾರ ತಿದ್ದುಪಡಿ ಮಾಡಿದ ಕರ್ನಾಟಕ ಭೂ ಸುಧಾರಣಾ ಕಾಯ್ದೆ–2020 ನ್ನು ವಾಪಾಸು ಪಡೆಯಬೇಕು ಹಾಗೂ ಕಳೆದ ಮಂತ್ರಿಮಂಡಲದಲ್ಲಿ ಮೂಲ ಭೂ ಸುಧಾರಣೆ ಕಾಯ್ದೆ– 1961ರ ಕಲಂ 5, 63, 79 (ಎ)(ಬಿ)(ಸಿ) ಹಾಗೂ 80 ಗಳ ತಿದ್ದುಪಡಿಗಳ ಪ್ರಸ್ತಾಪಗಳನ್ನು ವಾಪಾಸ್ಸು ಪಡೆಯಬೇಕೆಂದು ಮುಖ್ಯಮಂತ್ರಿ ಯಡಿಯೂರಪ್ಪರವರಿಗೆ ಬರೆದ ಪತ್ರದ ಮೂಲಕ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಯು. ಬಸವರಾಜ ಕಾರ್ಯದರ್ಶಿ

ಪ್ರಾಥಮಿಕ ಸದಸ್ಯತ್ವದಿಂದ ಚನ್ನರಾಯಪ್ಪ ಉಚ್ಛಾಟನೆ – ಸಿಪಿಐ(ಎಂ)

ನಿರಂತರವಾಗಿ, ಪಕ್ಷದ ಸಂಘಟನಾ ಶಿಸ್ಥನ್ನು ತೀವ್ರವಾಗಿ ಉಲ್ಲಂಘಿಸುತ್ತಾ, ಗುಂಪುಗಾರಿಕೆ ಮಾಡಿಕೊಂಡು, ಪಕ್ಷ ವಿರೋಧಿ ಚಟುವಟಿಕೆಯಲ್ಲಿ ಹಾಗೂ ಪಕ್ಷವನ್ನು ಒಡೆಯುವ ಕೆಲಸದಲ್ಲಿ ತೊಡಗಿದ್ದರಿಂದ ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿಯು, ರಾಜ್ಯ ಸಮಿತಿ ಸದಸ್ಯರಾದ ಚನ್ನರಾಯಪ್ಪ ಇವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಈ ಕ್ಷಣದಿಂದಲೇ ಜಾರಿಗೆ ಬರುವಂತೆ ಉಚ್ಛಾಟಿಸಲಾಗಿದೆ. ಕೇಂದ್ರ ಸಮಿತಿಯ ಅನುಮೋದನೆಯ ನಂತರ ಈ ಶಿಸ್ತು ಕ್ರಮ ಜಾರಿಗೆ ಬರಲಿದೆ. ಅಲ್ಲಿಯವರೆಗೆ ಅವರ ಸದಸ್ಯತ್ವ ಹಾಗೂ ಚಟುವಟಿಕೆಗಳು ಅಮಾನತ್ತಿನಲ್ಲಿರುತ್ತವೆ.

ಈ ನಡುವೆ ಅವರನ್ನು ಸರಿದಾರಿಗೆ ತರುವ ಪ್ರಯತ್ನಗಳು ವಿಫಲವಾಗಿದ್ದರಿಂದ, ಪಕ್ಷದ ಘನತೆ ಹಾಗೂ ಗೌರವವನ್ನು ರಕ್ಷಿಸುವ ಉದ್ದೇಶದಿಂದ ಈ ಕ್ರಮ ವಹಿಸಲಾಗಿದೆ.

ಯು. ಬಸವರಾಜ,
ಕಾರ್ಯದರ್ಶಿ

ದ.ಕ. ಜಿಲೆಯಲ್ಲಿ ಸಿಪಿಐ(ಎಂ) ಪ್ರತಿಭಟನೆ



ಭಾರತದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಪ್ರತಿದಿನವೂ ಏರಿಕೆಯಾಗುತ್ತಾ ಸುಮಾರು 3 ಲಕ್ಷಕ್ಕೆ ಸಮೀಪಿಸುತ್ತಿರುವುದು ಮತ್ತು ಅವರ ಪೈಕಿ ಈಗಾಗಲೆ ಸುಮಾರು 10 ಸಾವಿರ ಸೋಂಕಿತರು ಸರಿಯಾದ ಚಿಕಿತ್ಸೆ ದೊರೆಯದೆ ಸಾವನ್ನಪ್ಪಿರುತ್ತಾರೆ. ಹೊಟ್ಟೆಪಾಡಿಗಾಗಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವಲಸೆ ಬಂದು ದುಡಿಯುತ್ತಿದ್ದ ಲಕ್ಷಾಂತರ ಕಾರ್ಮಿಕರು ಯಾವುದೇ ಮುನ್ಸೂಚನೆ ಇಲ್ಲದೆ ಲಾಕ್‌ಡೌನ್ ಘೋಷಣೆ ಮಾಡಿದ ಕಾರಣದಿಂದ ಕೆಲಸ ಕಳೆದುಕೊಂಡು ಯಾವುದೇ ಆದಾಯವಿಲ್ಲದೆ ಬೀದಿಪಾಲಾಗಿರುತ್ತಾರೆ. ಅನ್ಯ ರಾಜ್ಯದಲ್ಲಿ ನಿರಾಶ್ರಿತರಾದ ಶ್ರಮಿಕರು ತಮ್ಮ ಸ್ವಂತ ಊರುಗಳಿಗೂ ಪ್ರಯಾಣ ಮಾಡಲಾಗದೆ ಕಾಲ್ನಡಿಗೆಯಲ್ಲೇ ತಮ್ಮ ಮಡದಿ ಮಕ್ಕಳೊಂದಿಗೆ ಉರಿ ಬಿಸಿಲಿನಲ್ಲಿ ಹೊರಟಾಗ ಹೊಟ್ಟೆಗೆ ಅನ್ನವಿಲ್ಲದೆ, ಕುಡಿಯಲು ನೀರು ಸಹ ದೊರೆಯದೆ, ಕಾಯಿಲೆಗಳಿಗೆ ಕನಿಷ್ಠ ಚಿಕಿತ್ಸೆ ಸಿಗದೆ ರಸ್ತೆಯಲ್ಲೇ ಬಿದ್ದು ಸಾವೀಗೀಡಾಗಿರುತ್ತಾರೆ. ಈಗಾಗಲೇ ಸುಮಾರು 1000 ವಲಸೆ ಕಾರ್ಮಿಕರು ದಾರಿಯಲ್ಲಿ ಮೃತರಾಗಿದ್ದಾರೆ. ನಡೆನಡೆದು ಸುಸ್ತಾದ ಕಾರ್ಮಿಕರು ರೈಲು ಹಳಿಗಳ ಮೇಲೆ ಮಲಗಿದಾಗ ಅವರ ಮೇಲೆ ಸರಕು ಹೊತ್ತ ರೈಲೊಂದು ಚಲಿಸಿ, ನೂರಾರು ಜನ ಅಮಾಯಕರು ಸಾವನ್ನಪ್ಪಿದ್ದಾರೆ.

ದೇಶಕ್ಕೆ ಅನ್ನ ನೀಡುವ ನೇಗಿಲ ಯೋಗಿಗಳು ಕಷ್ಟಪಟ್ಟು ಸಾಲಮಾಡಿ ಬೆಳೆದ ಫಸಲನ್ನು ಮಾರಾಟ ಮಾಡಲಾಗದೆ ಗದ್ದೆಯಲ್ಲಿ ಕೊಳೆಯಲು ಬಿಡಬೇಕಾದ ಪರಿಸ್ಥಿತಿ ಸೃಷ್ಟಿಯಾಗಿತ್ತು. ಕೆಲಸ ಇಲ್ಲದಂತಾದ ನಿತ್ಯ ದುಡಿಯುವ ಕೂಲಿಕಾರರು ಒಪ್ಪತ್ತಿನ ಗಂಜಿಗಾಗಿ ಪರದಾಡುವಂತೆ ಮಾಡಿದೆ. ಇಡೀ ದೇಶವನ್ನೇ ಕಂಗೆಡಿಸಿದ ಈ ಭೀಕರ ದುರಂತ ಇಷ್ಟೊಂದು ವಿಕೋಪಕ್ಕೆ ಹೋಗಲು ಮೋದಿ ಸರ್ಕಾರ ಯಾವುದೇ ಪೂರ್ವ ತಯಾರಿ ಇಲ್ಲದೆ ದೇಶದ ಮೇಲೆ ಹೇರಿದ ಲಾಕ್‌ಡೌನ್ ಕಾರಣವಾಯಿತು. ಈ ಕ್ರಮ ಜನರಿಗೆ ಅನುಕೂಲಕರವಾಗುವ ಬದಲು ತೀವ್ರ ಸಂಕಷ್ಟಗಳಿಗೆ ಕಾರಣವಾಯಿತು. ಹಿಂದೆ ನೋಟ್ ಅಮಾನ್ಯೀಕರಣ ಮಾಡಿದ್ದು ಸಹ ಇದೇ ರೀತಿ. ವಿವೇಚನೆ ಇಲ್ಲದೆ, ಜನರಿಗೆ ಮುನ್ಸೂಚನೆ ನೀಡದೆ ನೋಟ್ ರದ್ದು ಘೋಷಣೆ ಮಾಡಿದ್ದು ಇದೇ ರೀತಿ ಅನಾಹುತಕ್ಕೆ ಕಾರಣವಾಗಿತ್ತು.

ಭಾರತ ಸರ್ಕಾರ ಈ ಮಹಾ ಪಿಡುಗನ್ನು ಪರಿಣಾಮಕಾರಿಯಾಗಿ ತಡೆಗಟ್ಟುವಲ್ಲಿ ಸಂಪೂರ್ಣ ವಿಫಲವಾಗಿದೆ. ಲಾಕ್‌ಡೌನ್‌ನಿಂದ ಉಂಟಾದ ದುಷ್ಪರಿಣಾಮಗಳನ್ನು ಎದುರಿಸಲು ಯಾವುದೇ ಕ್ರಮ ಜರುಗಿಸಲಿಲ್ಲ. ಕಾರ್ಮಿಕರಿಗೆ ಕೆಲಸ, ಆಹಾರ, ವಸತಿಯನ್ನು ಪೂರೈಸುವ ಬದಲು, ಉದ್ಯೋಗ ಕಡಿತ, ಸಂಬಳ ಕಡಿತ, ಕೆಲಸದ ಅವಧಿ ಹೆಚ್ಚಳದಂತಹ ಕ್ರಮಗಳನ್ನು ಜಾರಿಗೊಳಿಸಲು ಮುಂದಾಗಿದೆ ಮಾತ್ರವಲ್ಲ ಅದಕ್ಕಾಗಿ ಕಾರ್ಮಿಕ ಕಾನೂನುಗಳನ್ನೇ ಕಿತ್ತುಹಾಕಲು ಹೊರಟಿದೆ. ಸರ್ಕಾರ ನೊಂದ ಕುಟುಂಬಗಳಿಗೆ ಯಾವ ಪರಿಹಾರವನ್ನು ನೀಡಲಿಲ್ಲ. ಇದಕ್ಕೆ ಬದಲಾಗಿ ಲಾಕ್‌ಡೌನ್ ಹಿಂತೆಗೆದುಕೊಂಡು ಕೋವಿಡ್-19 ತಡೆಗಟ್ಟುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳಿಗೆ ಹೊರಿಸಲು ಹೊರಟಿದೆ.

ಆದರೆ ಇದಕ್ಕೆ ತದ್ವಿರುದ್ಧವಾಗಿ ಕೇರಳ ರಾಜ್ಯ ವಿಶ್ವಕ್ಕೇ ಮಾದರಿಯಾಗಿದೆ. ಅದೊಂದು ಯೋಜನಾಬದ್ಧವಾಗಿ ಕಾರ್ಯನಿರ್ವಹಿಸುವ ಸರ್ಕಾರ, ಜನರ ಹಿತಾಸಕ್ತಿಗಳನ್ನು ಕಾಪಾಡುವುದೇ ಅದರ ಆದ್ಯತೆ. ಸೋಂಕಿತರ ಸಂಖ್ಯೆಯಲ್ಲಿ ಏರಿಕೆಯನ್ನು ಯಶಸ್ವಿಯಾಗಿ ತಡೆಗಟ್ಟಿದ ಕೀರ್ತಿ ಅದಕ್ಕೆ ಸಲ್ಲುತ್ತದೆ. ಸೋಂಕಿನ ಎರಡನೇ ಸುತ್ತಿನ ಅಲೆಯನ್ನು ಎದುರಿಸಲು ಅದು ಸಿದ್ಧವಾಗಿದೆ. ವಿದೇಶಗಳಿಂದ ಬರುತ್ತಿರುವವರಿಗೆ ಅಗತ್ಯ ಚಿಕಿತ್ಸೆ, ಆರೈಕೆ ನೀಡಲು ಕೇರಳ ಸಜ್ಜಾಗಿದೆ. ಅದರ ಅಪೂರ್ವ ಸಾಧನೆ. ಕೇಂದ್ರ ಸರ್ಕಾರ ಇದರಿಂದ ಪಾಠ ಕಲಿಯಲು ನಿರಾಕರಿಸುತ್ತಿದೆ.

ರಾಷ್ಟ್ರೀಯ ಲಾಕ್‌ಡೌನ್ ಅವಧಿಯಲ್ಲಿ ಸಿಪಿಐ(ಎಂ), ಅದರ ಘಟಕಗಳು ಮತ್ತು ಸದಸ್ಯರು ಎಲ್ಲಾ ರಾಜ್ಯಗಳಲ್ಲಿ ಉದ್ಯೋಗವನ್ನು ಮತ್ತು ಜೀವನೋಪಾಯವನ್ನು ಕಳಕೊಂಡವರಿಗೆ ಪರಿಹಾರವನ್ನು ಮತ್ತು ಹಸಿದವರಿಗೆ ಆಹಾರವನ್ನು ಒದಗಿಸಲು ಸತತ ಪ್ರಯತ್ನ ಮಾಡಿದೆ. ಪ್ರಸಕ್ತ ಸನ್ನಿವೇಶದಲ್ಲಿ, ಎಲ್ಲ ಲಾಕ್‌ಡೌನ್ ನಿರ್ಬಂಧಗಳನ್ನು ಚಾಚೂ ತಪ್ಪದೆ ಪಾಲಿಸುತ್ತಲೇ ಈ ಕೆಳಗಿನ ಬೇಡಿಕೆಗಳಿಗಾಗಿ ಜೂನ್ 16 ರಂದು ಅಖಿಲ ಭಾರತ ಪ್ರತಿಭಟನೆ ನಡೆಸಲು ಸಿಪಿಐ(ಎಂ) ಕರೆ ನೀಡಿದೆ.

1. ಆದಾಯ ತೆರಿಗೆ ತೆರುವ ಮಿತಿಗಳ ಹೊರಗಿರುವ ಎಲ್ಲಾ ಕುಟುಂಬಗಳಿಗೆ ತಿಂಗಳಿಗೆ ರೂ.7500 ರಂತೆ ಆರು ತಿಂಗಳುವರೆಗೆ ನಗದು ವರ್ಗಾವಣೆ ಮಾಡಬೇಕು.
2. ಪ್ರತಿ ವ್ಯಕ್ತಿಗೆ ತಿಂಗಳಿಗೆ 10 ಕೆ.ಜಿ.ಯಂತೆ ಆರು ತಿಂಗಳವರೆಗೆ ಉಚಿತ ಆಹಾರ ದಾನ್ಯಗಳನ್ನು ವಿತರಣೆ ಮಾಡಬೇಕು.
3. ಉದ್ಯೋಗ ಖಾತ್ರಿ ಅಡಿಯಲ್ಲಿ ಹೆಚ್ಚಿಸಿದ ಕೂಲಿಯೊಂದಿಗೆ ಕನಿಷ್ಠ ವರ್ಷದಲ್ಲಿ 200 ದಿನಗಳ ಉದ್ಯೋಗ ನೀಡಬೇಕು. ನಗರದ ಬಡವರಿಗೂ ಉದ್ಯೋಗ ಖಾತ್ರಿ ಯೋಜನೆಯನ್ನು ವಿಸ್ತರಿಸಬೇಕು. ನಿರುದ್ಯೋಗಿಗಳಿಗೆ ತಕ್ಷಣವೇ ಒಂದು ನಿರುದ್ಯೋಗ ಭತ್ಯೆಯನ್ನು ಪ್ರಕಟಿಸಬೇಕು.
4. ರಾಷ್ಟ್ರೀಯ ಆಸ್ತಿಗಳ ಲೂಟಿಯನ್ನು, ಸಾರ್ವಜನಿಕ ವಲಯದ ಖಾಸಗೀಕರಣವನ್ನು ಮತ್ತು ಕಾರ್ಮಿಕ ಕಾನೂನುಗಳ ರದ್ದತಿಯನ್ನು ನಿಲ್ಲಿಸಬೇಕು.
5. ಕರ್ನಾಟಕದಲ್ಲಿ ಆರೋಗ್ಯ ಪರಿಕರಗಳು, ವೆಂಟಿಲೇಟರ್ಸ್, ಅಗತ್ಯ ಔಷಧಿಗಳ ತೀವ್ರ ಕೊರತೆ ಇದ್ದು ಅವುಗಳನ್ನು ಗರಿಷ್ಠ ಪ್ರಮಾಣದಲ್ಲಿ ರಾಜ್ಯಕ್ಕೆ ಪೂರೈಸಬೇಕು.

ಮೇಲಿನ ಬೇಡಿಕೆಗಳನ್ನು ಜಾರಿಗೊಳಿಸಲು ತುರ್ತು ಕ್ರಮ ಜರಗಿಸಬೇಕೆಂದು ಒತ್ತಾಯಿಸಿ ಜೂನ್ 16 ರಂದು ದ.ಕ. ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಮತ್ತು ಮಂಗಳೂರು ತಾಲೂಕಿನ ವಲಯ ಕೇಂದ್ರಗಳಲ್ಲಿ ಪ್ರತಿಭಟನೆಗಳನ್ನು ನಡೆಸಿ ಮನವಿ ನೀಡಲಾಗಿದೆ.

ವಸಂತ ಆಚಾರಿ ಕಾರ್ಯದರ್ಶಿ

ರಕ್ತದಾನ ಮಾಡುವ ಮೂಲಕ ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸಲು ಮುಂದಾಗಬೇಕು: ಡಾ। ಬದರುದ್ದೀನ್.ಎಂ.ಎನ್.

ವಿಟ್ಲದಲ್ಲಿ ಜೂನ್ 14, 2020 ರಂದು ವಿಶ್ವ ರಕ್ತದಾನಿಗಳ ದಿನದ ಅಂಗವಾಗಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್. (ಡಿ.ವೈ.ಎಫ್.ಐ) ವಿಟ್ಲ ವಲಯ ಸಮಿತಿ ಹಾಗೂ ಪ್ರಾದೇಶಿಕ ರಕ್ತ ಪೂರಣಾ ಕೇಂದ್ರ ಮಂಗಳೂರು ಮತ್ತು ದಕ್ಷಿಣ ಕನ್ನಡ ಏಡ್ಸ್ ನಿರ್ಮೂಲನಾ ಘಟಕ ಮಂಗಳೂರು ಇದರ ಜಂಟಿ ಆಶ್ರಯದಲ್ಲಿ ರಕ್ತದಾನ ಶಿಬಿರವು ವಿಟ್ಲ ಆರೋಗ್ಯ ಕೇಂದ್ರದಲ್ಲಿ ಜರುಗಿತು. ಗಿಡಕ್ಕೆ ನೀರು ಹಾಕುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿಕಾರಿಗಳಾದ ಡಾಕ್ಟರ್ ಬದರುದ್ದೀನ್.ಎಂ.ಎನ್ ಮಾತನಾಡಿ ರಕ್ತದಾನ ಎನ್ನುವುದು ಒಂದು ಶ್ರೇಷ್ಠವಾದ ಕೆಲಸವಾಗಿದ್ದು, ರಕ್ತದಾನ ಮಾಡುವ ಮೂಲಕ ಇನ್ನೊಬ್ಬರ ಜೀವ ಉಳಿಸುವ ಕೆಲಸವನ್ನು ಮಾಡುವ ಮೂಲಕ ಜನರ ನಡುವೆ ಮಾನವೀಯ ಸಂಬಂದಗಳನ್ನು ಗಟ್ಟಿಗೊಳಿಸಲು ಮುಂದಾಗಬೇಕೆಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಡಿ.ವೈ.ಎಫ್.ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ವಿಟ್ಲ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ। ವೇದಾವತಿ, ಡಾ। ವಿಶ್ವೇಶ್ವರ ಭಟ್, ಕಾರ್ಮಿಕ ಮುಖಂಡರಾದ ರಾಮಣ್ಣ ವಿಟ್ಲ, ಡಿ.ವೈ.ಎಫ್.ಐ ವಿಟ್ಲ ವಲಯ ಸಮಿತಿ ಮಾರ್ಗದರ್ಶಕರಾದ ಮಹಮ್ಮದ್ ಇಕ್ಬಾಲ್ ಹಳೆಮನೆ, ಡಿ.ವೈ.ಎಫ್.ಐ ಬಂಟ್ವಾಳ ತಾಲೂಕು ಅಧ್ಯಕ್ಷರಾದ ಸುರೇಂದ್ರ ಕೋಟ್ಯಾನ್ ,ಸಾಮಾಜಿಕ ಕಾರ್ಯಕರ್ತರಾದ ರಾಜಾ ಚೆಂಡ್ತಿಮಾರ್, ನ್ಯಾಯವಾದಿ ತುಳಸೀದಾಸ್ ವಿಟ್ಲ, ನ್ಯಾಯವಾದಿ ಮಹಮ್ಮದ್ ಗಝಾಲಿ.ಕೆ.ಬಿ, ಪ್ರಗತಿಪರ ಬರಹಗಾರರಾದ ಅಬ್ದುಲ್ ಕಾದರ್ ಕುಕ್ಕಾಜೆ, ಸಾಧಿಕ್ ಬಂಟ್ವಾಳ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ ಮಂಗಳೂರು ಇದರ ಮುಖ್ಯಸ್ಥರಾದ ಮಹೇಶ್, ಯುವ ನಾಯಕರಾದ ವಿ.ಕೆ.ಎಂ ಹಂಝು, ಉದ್ಯಮಿಗಳಾದ ವಿ.ಎಚ್ ನಿಸಾರ್ ಮುಂತಾದವರು ಉಪಸ್ಥಿತರಿದ್ದರು.

ಅತೀ ಹೆಚ್ಚು ಬಾರಿ ರಕ್ತ ದಾನ ಮಾಡಿದ ಮಹಮ್ಮದ್ ಇಕ್ಬಾಲ್ ಹಳೆಮನೆ, ಇಕ್ಬಾಲ್ ಕೋಲ್ಪೆ, ಇರ್ಫಾನ್ ಒಕ್ಕೆತ್ತೂರು, ಇವರನ್ನು ➔



ಲಡಾಖ್ ಗಡಿಯಲ್ಲಿನ ಉದ್ವಿಘ್ನ ಪರಿಸ್ಥಿತಿಯನ್ನು ತಿಳಿಗೊಳಿಸಬೇಕು – ಸಿಪಿಐ(ಎಂ)

ಲಡಾಖ್‌ನಲ್ಲಿನ ವಾಸ್ತವ ಹತೋಟಿ ರೇಖೆಯಲ್ಲಿನ ಪರಿಸ್ಥಿತಿಯನ್ನು ತಿಳಿಗೊಳಿಸುವ ಪ್ರಕ್ರಿಯೆಯು ಎರಡೂ ಕಡೆಗಳಿಂದ ನಡೆದಿತ್ತು. ಈ ವೇಳೆಯಲ್ಲಿಯೇ ಗಾಲ್ವಾನ್ ಕಣಿವೆಯಲ್ಲಿ ಒಂದು ಘರ್ಷಣೆ ನಡೆದಿರುವುದು ದುರದೃಷ್ಟಕರ ವಿಚಾರವಾಗಿದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಹೇಳಿದೆ. ಕಳೆದ ಜೂನ್ 6 ರಂದು ಇಂತಹ ಘರ್ಷಣೆಯನ್ನು ತಪ್ಪಿಸುವ ಪ್ರಕ್ರಿಯೆಯನ್ನು ಚರ್ಚಿಸಲು ಎರಡೂ ದೇಶಗಳ ಕಡೆಯಿಂದ ಉನ್ನತ ಮಟ್ಟದಲ್ಲಿ ಮಿಲಿಟರಿ ಮಾತುಕತೆಗಳು ಆರಂಭವಾದ ನಂತರ ಈ ದುರ್ಘಟನೆ ನಡೆದಿದೆ. ಎರಡೂ ಕಡೆಗಳಿಂದ ಸಾವು-ನೋವುಗಳು ವರದಿಯಾಗಿವೆ.

ಒಬ್ಬ ಭಾರತೀಯ ಅಧಿಕಾರಿ ಮತ್ತು ಹಲವು ಸೈನಿಕರು ಸಾವಿಗೀಡಾಗಿರುವ ಬಗ್ಗೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ, ಆಳವಾದ ಸಂತಾಪವನ್ನು ವ್ಯಕ್ತಪಡಿಸಿದೆ.

ಈ ಸ್ಥಳದಲ್ಲಿ ಎರಡೂ ಕಡೆಯ ಮಿಲಿಟರಿ ಅಧಿಕಾರಿಗಳು ಪರಿಸ್ಥಿತಿಯನ್ನು ಶಮನ ಮಾಡಲು ಸಭೆ ನಡೆಸುತ್ತಿದ್ದಾರೆ ಎಂಬ ಭಾರತೀಯ ಸೇನೆಯ ಹೇಳಿಕೆ ಶಾಂತಿಯ ಕೈಮೇಲಾಗುತ್ತದೆ ಎಂಬುದನ್ನು ಖಾತ್ರಿ ಪಡಿಸಬೇಕು.

ನಿಜವಾಗಿ ಏನು ನಡೆಯಿತು ಎಂಬುದರ ಬಗ್ಗೆ, ಭಾರತ ಸರಕಾರ ಅಧಿಕೃತ ಹೇಳಿಕೆಯನ್ನು ನೀಡಬೇಕಾಗಿದೆ. ಪರಿಸ್ಥಿತಿಯನ್ನು ತಿಳಿಗೊಳಿಸಲು ಮತ್ತು ಗಡಿಯಲ್ಲಿ ಶಾಂತಿ ಹಾಗೂ ಪ್ರಶಾಂತತೆಯನ್ನು ಕಾಯ್ದುಕೊಳ್ಳುವ ಬಗ್ಗೆ ಒಂದು ಪರಸ್ಪರ ಒಪ್ಪಿಗೆಯಾದ, ತಿಳುವಳಿಕೆಯ ಆಧಾರದಲ್ಲಿ ಘರ್ಷಣೆಯನ್ನು ತಪ್ಪಿಸುವ ಪ್ರಕ್ರಿಯೆಯನ್ನು ಮುಂದುವರೆಸಲು ಎರಡೂ ದೇಶಗಳು ತಕ್ಷಣವೇ ಉನ್ನತ ಮಟ್ಟದ ಮಾತುಕತೆಗಳನ್ನು ಆರಂಭಿಸುವುದು ಅಗತ್ಯವಾಗಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಪುನರುಚ್ಚರಿಸುತ್ತದೆ. ಕೇಂದ್ರ ಸರ್ಕಾರ ಈ ಕುರಿತು ಸೂಕ್ತ ಕ್ರಮ ವಹಿಸಲು ಆಗ್ರಹಿಸುತ್ತದೆ.

ಯು. ಬಸವರಾಜ ಕಾರ್ಯದರ್ಶಿ, 17-06-2020

ಎಪಿಎಂಸಿ ಕಾಯ್ದೆ, ಭೂ ಸುಧಾರಣೆ ಕಾಯ್ದೆ, ವಿದ್ಯುತ್ ಕಾಯ್ದೆ, ಬೀಜ ಕಾಯ್ದೆ ತಿದ್ದುಪಡಿಗಳನ್ನು ವಿರೋಧಿಸಿ, ರೈತಾಪಿ ಕೃಷಿಗಾಗಿ ಜೂನ್ 27-30, 2020 ರಲ್ಲಿ ರಾಜ್ಯಾದ್ಯಂತ ಗ್ರಾಮ ಪಂಚಾಯತಿ ಕಛೇರಿಗಳ ಎದುರು ಪ್ರತಿಭಟನಾ ಧರಣಿ

"ಕಾರ್ಪೋರೇಟ್ ಕೃಷಿಯನ್ನು ಹಿಮ್ಮೆಟ್ಟಿಸಿ-ರೈತಾಪಿ ಕೃಷಿಯನ್ನು ರಕ್ಷಿಸಿ"

ಬಿಜೆಪಿಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಕೊರೊನಾ ರೋಗವನ್ನು ನಿಯಂತ್ರಿಸಲು ಸಂಪೂರ್ಣವಾಗಿ ವಿಫಲವಾಗಿವೆ. ಮಾರ್ಚ್ 2020 ಲಾಕ್‌ಡೌನ್ ಘೋಷಣೆ ಮಾಡುವ ಸಂದರ್ಭದಲ್ಲಿ ಇದ್ದ ಕೇವಲ 500 ರಷ್ಟಿದ್ದ ಸೋಂಕಿತರ ಸಂಖ್ಯೆಯು ಈಗ 3 ಲಕ್ಷ ಗಡಿದಾಟಿ, ಜಗತ್ತಿನಲ್ಲಿ ಭಾರತ 4 ನೇ ಸ್ಥಾನಕ್ಕೆ ತಲುಪಿದೆ. ಮುಂದಿನ ಒಂದೆರಡು ತಿಂಗಳಗಳಲ್ಲಿ ಈ ಸಂಖ್ಯೆಯು ಹತ್ತಾರು ಪಟ್ಟು ಹೆಚ್ಚಾಗಿ ಜಗತ್ತಿನಲ್ಲಿಯೇ ಪ್ರಥಮ ಸ್ಥಾನವನ್ನು ಪಡೆಯಲಿದ್ದೇವೆಂದು ವೈದ್ಯಕ್ಷೀಯ ವಿಜ್ಞಾನಿಗಳು ಹೇಳುತ್ತಿದ್ದಾರೆ. ಇಡೀ ದೇಶ ಇಂತಹ ಅಂತಕದ ಸ್ಥಿತಿಯಲ್ಲಿರುವಾಗ ಈ ಬಗ್ಗೆ ಸಂಪೂರ್ಣವಾಗಿ ಗಮನವನ್ನು ಹರಿಸಿ, ರೋಗ ನಿಯಂತ್ರಣಕ್ಕೆ ಅಗತ್ಯವಿರುವ ಕ್ರಮಗಳು ಹಾಗೂ ಈಗಾಗಲೇ ಸಂಕಷ್ಟದಲ್ಲಿದವರ ಜೊತೆಗೆ ಲಾಕ್‌ಡೌನ್ ಪರಿಣಾಮವಾಗಿ ಕೋಟಿಗಟ್ಟಲೆ ಜನ ಮರಳಿ ಗ್ರಾಮಗಳಿಗೆ ವಾಪಸ್ ಬಂದಿರುವುದರಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಹೀಗೆ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಜನರ ಸಮಸ್ಯೆಗಳಿಗೆ ಸ್ಪಂದಿಸುವಂತ ಕ್ರಮಗಳನ್ನು ಕೈಗೊಳ್ಳುವುದನ್ನು ಬಿಟ್ಟು, ಈ ಭಯಾನಕ ರೋಗ ಹಾಗೂ ಲಾಕ್‌ಡೌನ್ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ಇಡೀ ದೇಶದ "ಕೃಷಿ ಉತ್ಪಾದನೆ ಮತ್ತು ಕೃಷಿ ಮಾರುಕಟ್ಟೆ"ಯನ್ನು ಕಾರ್ಪೋರೇಟ್ ಕಂಪನಿಗಳಿಗೆ ಒಪ್ಪಿಸಲು ಅಗತ್ಯವಿರುವ ಹಲವು ಕಾನೂನು ತಿದ್ದುಪಡಿಗಳು, ಕಾನೂನುಗಳನ್ನು ಮಾಡುತ್ತಿವೆ. ಸಂವಿಧಾನದ ಮೌಲ್ಯಗಳನ್ನು ಗಾಳಿಗೆ ತೂರಿ ಸಂಸತ್‌ನಲ್ಲಿ ಹಾಗೂ ವಿಧಾನ ಮಂಡಲಗಳಲ್ಲಿ ಯಾವೂದೇ ಚರ್ಚೆ ಸಹ ನಡೆಸದೇ ಎಲ್ಲವನ್ನು ಸುಗ್ರೀವಾಜ್ಞೆಗಳ ಮೂಲಕ ಜಾರಿ ಮಾಡುತ್ತಿವೆ.

ಸಾಮ್ರಾಜ್ಯ ಶಾಹಿಗಳು, ಕಾರ್ಪೋರೇಟ್ ಕಂಪನಿಗಳ ಗುಲಾಮರಾಗಿರುವ ಸರ್ಕಾರಗಳು, ದೇಶದ ರೈತರು, ಕೃಷಿ ಕೂಲಿಕಾರರು ಹಾಗೂ ಗ್ರಾಮೀಣಾ ಕಸುಬುದಾರರನ್ನು ಈ ಶಕ್ತಿಗಳಿಗೆ ಗುಲಾಮರನ್ನಾಗಿ ಮಾಡಲು ಎಪಿಎಂಸಿ ಕಾಯ್ದೆ ತಿದ್ದುಪಡ್ಡಿಯನ್ನು ಮಾಡಿ, ಸರ್ಕಾರದ ನಿಯಂತ್ರಿತ ಎಪಿಎಂಸಿ ಮಾರುಕಟ್ಟೆ ವ್ಯವಸ್ಥೆಯನ್ನು ನಾಶಮಾಡಿ, ಯಾವುದೇ ನಿಯಂತ್ರವಿಲ್ಲದೆ ಕಾರ್ಪೋರೇಟ್ ಕಂಪನಿಗಳು ಇನ್ನು ಮುಂದೆ ಎಲ್ಲಿ ಬೇಕಾದರೂ, ಎಷ್ಟು ಬೇಕಾದರೂ, ಯಾವ ದರಕ್ಕೆ ಬೇಕಾದರೂ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡಲು ಅವಕಾಶ ಕೊಟ್ಟಿವೆ.

ಇದರಿಂದ ಇನ್ನು ಮುಂದೆ ಮೆಟ್ರೋ, ಮೋರ್, ರಿಲೆಯನ್ಸ್ ಪ್ರೆಶ್, ಡಿ ಮಾರ್ಟ್, ಬಿಗ್‌ಬಾಸಕಟ್ ನಂತಹ ದೈತ್ಯ ಕಾರ್ಪೋರೇಟ್ ಕಂಪನಿಗಳು ಖರೀದಿಯನ್ನು ಶುರು ಮಾಡಲಿವೆ. ಲಕ್ಷ ಲಕ್ಷ ಕೋಟಿ ರೂಗಳ ಹೂಡಿಕೆ ಮಾಡಿ, ಉತ್ಪನ್ನಗಳನ್ನು ಖರೀದಿ ಮಾಡಿದ ಮೇಲೆ ಅವುಗಳನ್ನು ದೊಡ್ಡ ಪ್ರಮಾಣದಲ್ಲಿ ದಾಸ್ತಾನು ಮಾಡಬೇಕು, ಯಾವುದೇ ನಿಯಂತ್ರಣವಿಲ್ಲದೆ ದೇಶ ವಿದೇಶಿಗಳಿಗೆ ಸಾಗಾಣಿಕೆ ಮಾಡಬೇಕು, ಇಷ್ಟ ಬಂದ ದರಗಳಿಗೆ ಮಾರಾಟ ಮಾಡಬೇಕು. ಇದಕ್ಕೆ ಅಗತ್ಯ ವಸ್ತುಗಳನ್ನು ಇವರೇ ಖರೀದಿ ಮಾಡಬೇಕು, ಇಷ್ಟೇ ಖರೀದಿ ಮಾಡಬೇಕು, ಇಷ್ಟೇ ದಾಸ್ತಾನು ಮಾಡಬೇಕು ಮತ್ತು ಇಷ್ಟೇ ದರಕ್ಕೆ ಮಾರಾಟ ಮಾಡಬೇಕೆನ್ನುವ "ಅಗತ್ಯ ವಸ್ತುಗಳ ಕಾಯ್ದೆ-1955" ಈ ಪ್ರಕ್ರಿಯೆಗೆ ಅಡ್ಡಿ ಉಂಟು ಮಾಡುತ್ತದೆ. ಆದರಿಂದಲ್ಲೇ 'ಅಗತ್ಯ ವಸ್ತುಗಳ ಕಾಯ್ದೆ (ತಿದ್ದುಪಡಿ) 2020' ಸುಗ್ರೀವಾಜ್ಞೆಯನ್ನು ಕೇಂದ್ರ ಸರ್ಕಾರ ತಕ್ಷಣ ಜಾರಿಗೆ ತಂದಿದೆ, ಮಾತ್ರವಲ್ಲ ಡಾ॥ ಎಂ.ಎಸ್. ಸ್ವಾಮಿನಾಥನ್ ವರದಿಯನ್ವಯ ಉತ್ಪಾದನಾ ವೆಚ್ಚದ ಮೇಲೆ ಶೇ. 50 ರಷ್ಟು ಲಾಭವನ್ನು ಸೇರಿಸಿ 'ಕನಿಷ್ಠ ಬೆಂಬಲ ಬೆಲೆ' ನಿಗಧಿಯ ಪ್ರಶ್ನೆಯನ್ನು ಬಿಡಿ, ಈಗ ಸದ್ಯದ 'ಕನಿಷ್ಟ ಬೆಂಬಲ ಬೆಲೆ' ಖಾತರಿ ಮಾಡುವ ಪ್ರಸ್ತಾಪವೇ ಇಲ್ಲದೆ "ಬೆಲೆ ಭರವಸೆ ಹಾಗೂ ಕೃಷಿ ಸೇವೆಗಳ ಕುರಿತ ರೈತರ (ಸಶಕ್ತೀಕರಣ ಮತ್ತು ರಕ್ಷಣೆ) ಒಪ್ಪಂದ ಸುಗ್ರೀವಾಜ್ಞೆ - 2020", ಹಾಗು ಮುಕ್ತ ಸಾಗಾಣಿಕೆ, ಇ-ಮಾರುಕಟ್ಟೆ, ರೈತರು ಮತ್ತು ಕಂಪನಿಗಳ ನಡುವೆ ಉಂಟಾಗುವ ವ್ಯಾಜ್ಯಗಳನ್ನು ಕಂಪನಿಗಳ ಪರವಾಗಿ ಇತ್ಯರ್ಥ ಮಾಡುವ ಇತ್ಯಾದಿ ಅಂಶಗಳಿಗೆ ಪೂರಕವಾಗಿ 'ರೈತರ ಉತ್ಪನ್ನ ಮಾರಾಟ ಹಾಗು ವಾಣಿಜ್ಯ (ಉತ್ತೇಜನ ಮತ್ತು ಬೆಂಬಲ) - 2020 ರ ಮತ್ತೊಂದು ಸುಗ್ರೀವಾಜ್ಞೆಯನ್ನು ಸಹ ಒಂದೇ ದಿನ ಘೋಷಣೆ ಮಾಡಿದೆ.



"ಈ ಮೂರು ಸುಗ್ರೀವಾಜ್ಞೆಗಳ ಮೂಲಕ ರೈತರು ಎಲ್ಲಿ ಬೇಕಾದರೂ, ಯಾರಿಗೆ ಬೇಕಾದರೂ, ಯಾವ ದರಕ್ಕೆ ಬೇಕಾದರೂ ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ಅವಕಾಶವನ್ನು ಒದಗಿಸಿದ್ದೇವೆ. ಈ ದಿನ ದೇಶದ ಚರಿತ್ರೆಯಲ್ಲಿ ಐತಿಹಾಸಿಕ ದಿನ, 1947 ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದರೂ ರೈತರಿಗೆ ಸ್ವಾತಂತ್ರ್ಯ ಸಿಕ್ಕಿದ್ದು ಇವತ್ತು ಎಂದು ಜೂನ್ 3, 2020 ರಂದು ಪತ್ರಿಕಾಗೋಷ್ಠಿಯಲ್ಲಿ ದೇಶದ ಕೃಷಿ ಸಚಿವರು ಘೋಷಣೆ ಮಾಡಿದ್ದಾರೆ". ಆದರೆ ವಾಸ್ತವವಾಗಿ ಈ ಮೂರು ಸುಗ್ರೀವಾಜ್ಞೆಗಳು ಮತ್ತು ಎಪಿಎಂಸಿ ಕಾಯ್ದೆಯ ತಿದ್ದುಪಡಿಗಳು ದೇಶದ ರೈತರನ್ನು ಲೂಟಿ ಮಾಡಲು ಜಗತ್ತಿನ ಕಾಪೋರೇಟ್ ಕಂಪನಿಗೆ ಮುಕ್ತ ಅವಕಾಶ ಒದಗಿಸಿಕೊಟ್ಟ "ಕರಾಳ ದಿನ" ವಾಗಿದೆ.

ಇಂತಹ ನೀತಿಗಳ ಮುಂದುವರಿದ ಭಾಗವಾಗಿಯೇ ಬೀಜೋದ್ದಿಮೆಯನ್ನು ಸಂಪುರ್ಣವಾಗಿ ಕಾರ್ಪೋರೇಟ್ ಕಂಪನಿಗಳಿಗೆ ಒಪ್ಪಿಸುವ ಉದ್ದೇಶದಿಂದ ಬೀಜ ಕಾಯ್ದೆ-2019, ರೈತರ ನೀರಾವರಿ ಪಂಪಸೆಟ್‌ಗಳು, ಬಡವರ ಮನೆಯ ಭಾಗ್ಯಜ್ಯೋತಿ, ಕುಟೀರ ಜ್ಯೋತಿ ವಿದ್ಯುತ್ ಸಂಪರ್ಕಗಳಿಗೆ ಕಡ್ಡಾಯವಾಗಿ ಮೀಟರ್‌ಗಳನ್ನು ಅಳವಡಿಸಬೇಕು. ಇವರು ಎಲ್ಲರಂತೆ ವಿದ್ಯುತ್ ಚಾರ್ಜ್‌ಗಳನ್ನು ಪಾವತಿ ಮಾಡಬೇಕು. ರಾಜ್ಯ ಸರ್ಕಾರಗಳು ಸಬ್ಸಿಡಿ ಕೊಡುವುದಾದರೆ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡಬಹುದು, ಅಲ್ಲದೆ ವಿದ್ಯುತ್ ಉತ್ಪಾದನೆ, ಪ್ರಸರಣೆ ಹಾಗು ಸರಬರಾಜನ್ನು ಖಾಸಗೀಕರಣ ಮಾಡುವ ಅಧಿಕಾರವನ್ನು ರಾಜ್ಯಗಳಿಂದ ಕೇಂದ್ರ ಸರ್ಕಾರ ಪಡೆದುಕೊಳ್ಳುವ ಉದ್ದೇಶದಿಂದ "ವಿದ್ಯುತ್ ಕಾಯ್ದೆ-2003" ಕ್ಕೆ "ವಿದ್ಯುತ್ ಕಾಯ್ದೆ (ತಿದ್ದುಪಡಿ)-2020" ನ್ನು ಜಾರಿ ಮಾಡಲು ಹೊರಟಿದೆ.

ಕಾರ್ಪೋರೇಟ್ ಕಂಪನಿಗಳ ಗುಲಾಮಗಿರಿಯಲ್ಲಿ ಕೇಂದ್ರ ಸರ್ಕಾರಕ್ಕಿಂತ ತಾನು ಮುಂದೆ ಎನ್ನುವ ರೀತಿಯಲ್ಲಿ ರಾಜ್ಯ ಸರ್ಕಾರ ಮೂರು ತಿಂಗಳ ಹಿಂದೆ ಬಂಡವಾಳಗಾರರು ಸುಲಭವಾಗಿ ಕೃಷಿ ಭೂಮಿಯನ್ನು ಪಡೆಯಲು 'ಕರ್ನಾಟಕ ಭೂಸುಧಾರಣೆ ಕಾಯ್ದೆ"ಗೆ ತಿದ್ದುಪಡಿಯನ್ನು ತಂದಿದ್ದರು. ಈಗ ಮತ್ತಷ್ಟು ಮಾನ ಮಾರ್ಯಾದೆ ಬಿಟ್ಟು "ಉಳುವವನೇ ಹೊಲದೊಡೆಯ" ಎನ್ನುವುದರ ವಿರುದ್ಧವಾಗಿ "ಕಾಸು ಉಳ್ಳವನೇ ಹೊಲದೊಡೆಯ" ಎನ್ನುವಂತೆ "ಕರ್ನಾಟಕ ಭೂಸುಧಾರಣಾ ಕಾಯ್ದೆ-1961"ಕ್ಕೆ ತಿದ್ದುಪಡಿಗಳನ್ನು ತಂದು ಇಲ್ಲಿವರೆಗೂ ರೈತರು ಮಾತ್ರ ಕೃಷಿ ಭೂಮಿ ಖರೀದಿ ಮಾಡಬಹುದೆಂದು ಇದ್ದ ಕಾನೂನ್ನನ್ನು ರದ್ದು ಮಾಡಿ, ದುಡ್ಡು ಇರುವ ಯಾರೂ ಬೇಕಾದರೂ ಕೃಷಿ ಭೂಮಿ ಖರೀದಿ ಮಾಡಬಹುದೆಂದು, ಅಲ್ಲದೆ ಒಂದು ರೈತ ಕುಟುಂಬ ಗರಿಷ್ಠ 54 ಎಕರೆ ಮಾತ್ರ ಭೂಮಿಯನ್ನು ಹೊಂದಬಹುದು ಎಂಬುದನ್ನು ಬದಲಿಸಿ ಐದು ಜನರಿಗಿಂತ ಹೆಚ್ಚಿರುವ ಕುಟುಂಬ 216 ಎಕರೆ ಭೂಮಿಯನ್ನು ಹೊಂದಬಹುದೆಂದು ತಿದ್ದುಪಡಿಯನ್ನು ತರಲು ಸಚಿವ ಸಂಪುಟ ತೀರ್ಮಾನಿಸಿದೆ.

ಇದರ ಪರಿಣಾಮವಾಗಿ ಇನ್ನೂ ಕೇಲವೇ ವರ್ಷಗಳಲ್ಲಿ ಐದು ಎಕರೆಗಿಂತ ಕಡಿಮೆ ಭೂಮಿ ಇರುವ ಶೇ. 85 ರಷ್ಟು ಸಣ್ಣ, ಅತಿ ಸಣ್ಣ ರೈತರು ಮತ್ತಿತರು ತಕ್ಷಣಕ್ಕೆ ಕಾಣುವ ಹಣದಾಸೆಗೆ ಮೋಸಹೋಗಿ ತಮ್ಮ ಭೂಮಿಗಳನ್ನು ಮಾರಾಟ ಮಾಡಿ ಈಗಾಗಲೇ ಶೇ. 40 ಕ್ಕಿಂತ ಹೆಚ್ಚಿಗೆ ಇರುವ ಭೂಹೀನರ ಕುಟುಂಬಗಳ ಪಟ್ಟಿಗೆ ಸೇರ್ಪಡೆಯಾಗಲಿದ್ದಾರೆ. ಈ ಮೂಲಕ ಹಲವು ದಶಕಗಳ ಹೋರಾಟಗಳ ಫಲವಾಗಿ ರಾಜ್ಯದಲ್ಲಿ "ಉಳುವವನೇ ಹೊಲದೊಡೆಯ" ಎನ್ನುವ ತತ್ವದಡಿಯಲ್ಲಿ ರೂಪಗೊಂಡಿದ್ದ "ಭೂ ಸುಧಾರಣಾ ಕಾನೂನು" ಗಳನ್ನು ಸಂಪುರ್ಣ ನಾಶ ಮಾಡಿದಂತೆ ಆಗುತ್ತದೆ. ರೈತರು, ಕೃಷಿ ಕೂಲಿಕಾರರ ಒಡೆತನದಲ್ಲಿ ಇರುವ ಭೂಮಿಗಳನ್ನೆ ಕಿತ್ತುಕೊಳ್ಳಲು ಹೀಗೆ ಅನೇಕ ಕಾನೂನುಗಳನ್ನು ಮಾಡುತ್ತಿರುವ ಸರ್ಕಾರಗಳು ಬಗರ್‌ಹುಕ್ಕುಂ ಸಾಗುವಳಿಯ ಸಕ್ರಮ, ಅರಣ್ಯ ಭೂಮಿ ಸಕ್ರಮದಂತಹ ಪಶ್ನೆಗಳನ್ನು ಮತ್ತಷ್ಟು ಸಂಕಿರಣಗೊಳಿಸಿದೆ. ಆದರೆ ವ್ಯಾಪಕ ಮತ್ತು ಸಮರಶೀಲ ಹೋರಾಟಗಳಿಂದ ಈ ಭೂಮಿಗಳನ್ನು ಉಳಿಸಿಕೊಳ್ಳಬೇಕಿದೆ. ಉದ್ಯೋಗ ಖಾತ್ರಿ ಯೋಜನೆ ಜಾರಿ ಬಿಟ್ಟರೆ ಇನ್ಯಾವುದೇ ಪರಿಹಾರವನ್ನು ಗ್ರಾಮೀಣ ಜನತೆಗೆ ಸರ್ಕಾರಗಳು ಒದಗಿಸುತ್ತಿಲ್ಲ. ಮುಂಗಾರು ಪ್ರಾರಂಭವಾಗಿದ್ದು ಉಚಿತ ಬೀಜ, ಗೊಬ್ಬರ ಹಾಗೂ ಬಡ್ಡಿ ರಹಿತ ವ್ಯಾಪಕ ಕೃಷಿ ಸಾಲಗಳನ್ನು ಸಂಕಷ್ಟದಲ್ಲಿರುವ ರೈತರು ಮತ್ತು ಕೃಷಿ ಕೂಲಿಕಾರರಿಗೆ ನೀಡಬೇಕೆಂದು ನಾವು ಆಗ್ರಹಿಸಬೇಕಾಗಿದೆ. ಹೀಗೆ ಗ್ರಾಮೀಣ ಭಾರತವನ್ನು ಬಲಪಡಿಸುವ ಬದಲಿಗೆ ಸರ್ವನಾಶ ಮಾಡಲು ಹೊರಟಿರುವುದನ್ನು ನಾವು ಹಿಮ್ಮೆಟ್ಟಿಸಬೇಕಿದೆ.

ಒಟ್ಟಾರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹತ್ತು ಹಲವು ಕಾನೂನುಗಳನ್ನು ತರುವುದರ ಮೂಲಕ ದೇಶದ ಶೇ. 50 ಕ್ಕಿಂತ ಹೆಚ್ಚು ಜನರು ಅವಲಂಬನೆಯಾಗಿರುವ "ಕೃಷಿ" ಯನ್ನು ಕಾರ್ಪೋರೇಟ್ ಕಂಪನಿಗಳ ಹಾಗು ಅವರ ಬಾಲಬುಡಕರಿಗೆ ಒಪ್ಪಿಸುತ್ತದೆ ಮಾತ್ರವಲ್ಲ ಇದರ ಜೊತೆ ಜೊತೆ "ಕೃಷಿ ಮಾರುಕಟ್ಟೆ" ಯನ್ನು ಸಹ ಕಾಪೋರೇಟ್ ಕಂಪನಿಗಳ ವಶಕ್ಕೆ ನೀಡುತ್ತಿದೆ. ಕೊರೊನಾ - ಲಾಕ್‌ಡೌನ್ ಹಿನ್ನೆಲೆಯಲ್ಲಿ ಘೋಷಿಸಲಾದ 20 ಲಕ್ಷ ಕೋಟಿ ರೂ. ಗಳ ವಿಶೇಷ ಪ್ಯಾಕೇಜ್‌ನ ಸುಮಾರು 2 ಲಕ್ಷ ಕೋಟಿ ರೂ. ಗಳನ್ನು ಈ ಪ್ರಕ್ರಿಯೇಯನ್ನು ಪೂರ್ಣಗೊಳಿಸಲು ಮೀಸಲಿರಿಸಿದೆ. ಇದರ ಪರಿಣಾಮವಾಗಿ ಮುಂದಿನ ದಿನಗಳಲ್ಲಿ ಬದಲಾಗುವ ಬೆಳೆ ಪದ್ಧತಿ, ಆಹಾರ ಭದ್ರತೆಯ ನಾಶದಿಂದ ಗ್ರಾಮೀಣ ಬಡತನ, ನಿರುದ್ಯೋಗ, ಕೃಷಿ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಳಲಿದೆ. ಮಾತ್ರವಲ್ಲ ಗ್ರಾಮೀಣ ಜನರ ಜೊತೆಗೆ ನಗರದ ಕಾರ್ಮಿಕರು, ಸಾಮಾನ್ಯ ಜನರು ಅಗತ್ಯ ವಸ್ತು ಬೆಲೆ ಏರಿಕೆ, ನಿರುದ್ಯೋಗ, ಬಡತನದಿಂದ ನರಳುವ ಸ್ಥಿತಿಯನ್ನು ಮತ್ತಷ್ಟು ತೀವ್ರಗೊಳಿಸಲಾಗುತ್ತದೆ.

ಇಷ್ಟೆಲ್ಲ ಅವಾಂತರಗಳು ಸಂಭವಿಸುತ್ತಿದ್ದರೂ 'ಸ್ವದೇಶಿ' 'ಸ್ವದೇಶಿ' ಎಂದು ಸದಾ ಭಜನೆ ಮಾಡುವ "ಸಂಘ ಪರಿವಾರದ ಸಂಘಟನೆ"ಗಳು ಬಾಯಿ ಮುಚ್ಚಿಕೊಳ್ಳುತ್ತಿರುವುದನ್ನು ನೋಡಿದರೆ ಇವರ ನಿಜ ಸ್ವರೂಪ ಸ್ಪಷ್ಟವಾಗುತ್ತಿದೆ. ಇವರೇ ಈ ನೀತಿಗಳ ಜನ್ಮಕರ್ತರು, ಹೀಗಾಗಿ "ಸ್ವದೇಶಿ" ಎನ್ನುವುದು ಸುಳ್ಳು, ಇವರು ಸಹ ಕಾರ್ಪೋರೇಟ್ ಕಂಪನಿಗಳ ಏಜೆಂಟರೆಂದು ಬಹಿರಂಗವಾಗಿದೆ. ಈಗಲಾದರು "ಸ್ವದೇಶಿ" ಭಜನೆ ನಾಟಕವನ್ನು ನಿಲ್ಲಿಸಬೇಕೆಂದು ಆಗ್ರಹಿಸಬೇಕಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ರೈತ ಸಂಘಗಳು, ಕೃಷಿ ಕೂಲಿಕಾರರ ಸಂಘಗಳು ಒಟ್ಟಿಗೆ ಸೇರಿ "ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (AIKSCC) ಎಂಬ ವೇದಿಕೆಯ ಮೂಲಕ "ಕಾರ್ಪೋರೇಟ್ ಕೃಷಿಯನ್ನು ಹಿಮ್ಮೆಟ್ಟಿಸಿ-ರೈತಾಪಿ ಕೃಷಿಯನ್ನು ರಕ್ಷಿಸಿ" ಎನ್ನುವ ಘೋಷಣೆಯೊಂದಿಗೆ ವ್ಯಾಪಕ, ಸಮರಶೀಲ ಹೋರಾಟಗಳನ್ನು ಸಂಘಟಿಸಲು ನಿರ್ಣಯಿಸಿದ್ದೇವೆ. ಮೊದಲನೇಯ ಹಂತದ ಹೋರಾಟವಾಗಿ ಜೂನ್ 27-30, 2020 ರ ನಾಲ್ಕು ದಿನಗಳಲ್ಲಿ ರಾಜ್ಯದ ಕನಿಷ್ಟ 1000 ಗ್ರಾಮ ಪಂಚಾಯಿತಿ ಕಛೇರಿಗಳ ಎದುರು ಪ್ರತಿಭಟನಾ ಧರಣಿಗಳನ್ನು ಸಂಘಟಿಸುತ್ತಿದ್ದೇವೆ. ಈ ಹೋರಾಟದಲ್ಲಿ ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಕೂಡಲೇ ಚುನಾವಣೆಗಳನ್ನು ನಡೆಸಬೇಕೆಂದು ಬೇಡಿಕೆಯನ್ನು ಆಗ್ರಹಿಸಲಾಗುತ್ತಿದೆ. ಈ ಹೋರಾಟದಲ್ಲಿ ರಾಜ್ಯದ ರೈತರು, ಕೃಷಿ ಕೂಲಿಕಾರರು, ಕಾರ್ಮಿಕರು ಹಾಗೂ ಚಿಂತಕರು ದೊಡ್ಡ ರೀತಿಯಲ್ಲಿ ಭಾಗವಹಿಸಬೇಕೆಂದು ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (AIKSCC) ರಾಜ್ಯ ಸಮಿತಿ ವಿನಂತಿಸುತ್ತದೆ.

ಕಾರ್ಪೋರೇಟ್ ಜಗತ್ತಿನ ವಿರುದ್ಧದ ಹೋರಾಟ ಒಂದು ದೇಶ ಪ್ರೇಮಿ ಹೋರಾಟವಾಗಿದ್ದು, ಮುಂದಿನ ಹಂತಗಳಲ್ಲಿ ಕಾರ್ಮಿಕ ವರ್ಗ ಇತ್ಯಾದಿ ಜನ ವಿಭಾಗಗಳನ್ನು ಒಳಗೊಂಡ ವಿಶಾಲವಾದ ಹೋರಾಟವನ್ನು ಸಂಘಟಿಸಲು ತೀರ್ಮಾನಿಸಿದ್ದೇವೆ. ಈ ನಿಟ್ಟಿನಲ್ಲಿ ಎಲ್ಲರೂ ಈ ಹೋರಾಟವನ್ನು ಬೆಂಬಲಿಸಬೇಕೆಂದು ಕೋರುತ್ತೇವೆ.

➔ ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ ದಿಂದ ಸನ್ಮಾನಿಸಲಾಯಿತು. ಹಾಗೂ ಡಿ' ಗ್ರೂಪ್ ವಿಟ್ಲ ಮೇಗಿನ ಪೇಟೆ, ಇದರ ಆಂಬ್ಯುಲೆನ್ ಚಾಲಕರಾದ ಉಬೈದ್ ಮತ್ತು ಸುಹೈಬ್ ಇವರನ್ನು ಡಿ.ವೈ.ಎಫ್.ಐ ವಿಟ್ಲ ವಲಯ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ಡಿ.ವೈ.ಎಫ್.ಐ ಸಾಯ ಘಟಕದ ಮುಖಂಡರುಗಳಾದ ಅಶೋಕ್ ಚವರ್ಕಾಡ್ ಸುರೇಶ್ ಕುಂಞಪಾರೆ, ಯೋಗೀಶ್, ವಿಟ್ಲ ವಲಯ ಸಮಿತಿ ಅಧ್ಯಕ್ಷರಾದ ನುಜುಂ ಅಳಿಕೆ, ಕಾರ್ಯದರ್ಶಿ ಜಮೀಲ್.ಎಂ, ಕೋಶಾಧಿಕಾರಿ ಆರೀಫ್ ಬಿ.ಕೆ ಇರ್ಫಾನ್ ಒಕ್ಕೆತ್ತೂರು, ಸಪ್ವಾನ್, ತಮೀಮ್, ರಾಘವೇಂದ್ರ, ಶೌಕತ್ ಆಲಿ ಖಾನ್, ಸಲ್ಮಾನ್.ವಿ, ಶಹೀದ್ ಶೈನ್, ಸಮ್ಮಾಸ್ ಮುಂತಾದವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ●



ಎಲ್.ಜಿ. ಪಾಲಿಮರ್ ಸ್ಟೈರಿನ್ ಸೋರಿಕೆ ದುರಂತ

ಡಾ. ಅನಿಲ್ ಕುಮಾರ್

ಈ ದುರಂತ ಸಂಭವಿಸಲು ಮುಖ್ಯ ಕಾರಣ ಸ್ಟೈರಿನ್ ದ್ರವ್ಯವನ್ನು ಶೇಖರಿಸುವಾಗ ತೆಗೆದುಕೊಳ್ಳಬೇಕಾದ ಮೇಲೆ ಹೇಳಿದ ಪ್ರಾಥಮಿಕ ಕ್ರಮಗಳ ಬಗ್ಗೆ ಎಲ್.ಜಿ. ಕಂಪೆನಿ ಆಡಳಿತ ವರ್ಗದ ನಿರ್ಲಕ್ಷ ಎಂಬುದು ಸ್ಪಷ್ಟ. ಇಂತಹ ಸ್ಥಾವರದಲ್ಲಿ ಉಷ್ಣತೆ, ಇತರ ರಾಸಾಯನಿಕಗಳ ಪೂರೈಕೆ, ಟ್ಯಾಂಕಿನಲ್ಲಿರುವ ರಾಸಾಯನಿಕದ ಸ್ಥಿತಿ – ಇವೆಲ್ಲದರ ಸತತ ನಿಗಾ ಇಡುವ ಸ್ವಯಂ–ಚಾಲಿತ ವ್ಯವಸ್ಥೆನೂ ಇರಬೇಕು. ಇಂತಹ ವ್ಯವಸ್ಥೆ ಕೆಲಸ ಮಾಡುತ್ತಿದೆ ಎಂದು ನೋಡಿಕೊಳ್ಳುವ ನುರಿತ ಸಿಬ್ಬಂದಿ ಸಹ ಇರಬೇಕು. ಇಂತಹ ವ್ಯವಸ್ಥೆಯ ನಿಯಮಿತ ನಿರ್ವಹಣೆ, ದುರಸ್ತಿ, ಪರೀಕ್ಷಣೆಗಳೂ ಇರಬೇಕು. ಸುರಕ್ಷತೆ ಡ್ರಿಲ್ ಗಳನ್ನು ಮಾಡಬೇಕು. ಇವೆಲ್ಲವನ್ನೂ ಮಾಡಿದ್ದರೆ ಈ ದುರಂತ ಸಂಭವಿಸುತ್ತಿರಲಿಲ್ಲ. ಇವುಗಳಲ್ಲಿ ಹಲವು ಕ್ರಮಗಳಲ್ಲಿ ಚ್ಯುತಿ ಆತದ್ದರಿಂದ ಈ ದುರಂತ ಸಂಭವಿಸಿದೆ ಎಂಬುದು ಸ್ಪಷ್ಟ. ಇದಲ್ಲದೆ ಅವೈಜ್ಞಾನಿಕವಾಗಿ ತರಾತುರಿಯಲ್ಲಿ ಹೇರಲಾದ ಲಾಕ್ ಡೌನ್ ಸಹ ಇದರಲ್ಲಿ ಪಾತ್ರ ವಹಿಸಿರುವ ಸಾಧ್ಯತೆಯಿದೆ.

ಆಂಧ್ರಪ್ರದೇಶದ ವಿಶಾಖಪಟ್ಟಣಂನಲ್ಲಿ ಮೇ 7, 2020 ರ ಮುಂಜಾನೆ. ಇದ್ದಕ್ಕಿದ್ದಂತೆ ನಗರದ ಹೊರ ವಲಯದಲ್ಲಿರುವ ಹಲವರಿಗೆ ದಟ್ಟ ಹೊಗೆ, ಕೆಟ್ಟ ವಾಸನೆ ಬರಲಾರಂಭಿಸಿತು ಮತ್ತು ಉಸಿರಾಟದ ತೊಂದರೆ ಕಾಣಿಸಿಕೊಂಡಿತು. ಜನ ಮನೆಗಳಿಂದ ಹೊರ ಬಂದು ದಿಕ್ಕಾಪಾಲಾಗಿ ಓಡಲಾರಂಭಿಸಿದರು. ಸ್ವಲ್ಪ ಸಮಯದ ನಂತರವಷ್ಟೇ ಇದು ಎಲ್.ಜಿ. ಪಾಲಿಮರ್ ಕಾರ್ಖಾನೆಯಿಂದ ಬರುತ್ತಿರುವ ರಾಸಾಯನಿಕ ಒಂದರ ಹಬೆಯಿಂದ ಎಂದು ಗೊತ್ತಾಯಿತು. ಈ ಕಾರ್ಖಾನೆಯ ಸುತ್ತ 2–3 ಕಿ.ಮಿ ವರೆಗೆ ಈ ಸಮಸ್ಯೆಗಳು ಕಾಣಿಸಿಕೊಂಡವು. ಆಮೇಲೆ ಗೊತ್ತಾಗಿದ್ದು ಕಾರ್ಖಾನೆಯ ಸ್ಟೈರಿನ್ ಹಬೆ ಸೋರಿಕೆಯಿಂದ ಇವೆಲ್ಲ ಆಗಿತ್ತು. ಒಂದು ವಾರದೊಳಗೆ ಕನಿಷ್ಠ 14 ಜನರು ಸಾವನ್ನಪ್ಪಿದ್ದರು. ಕಾರ್ಖಾನೆಯ ಸುತ್ತಮುತ್ತಲು ವಾಸಿಸುತ್ತಿದ್ದ 350ಕ್ಕೂ (53 ಮಕ್ಕಳು ಸೇರಿದಂತೆ) ಹೆಚ್ಚು ಜನರನ್ನು ಆಸ್ಪತ್ರೆಗೆ ಸೇರಿಸಬೇಕಾಯಿತು. ಅದರ ನಂತರವೂ ರಾಸಾಯನಿಕದ ಪರಿಣಾಮವಾಗಿ ಜನ ಆಸ್ಪತ್ರೆಗೆ ದಾಖಲಾಗುತ್ತಿರುವುದು ಮುಂದುವರೆದಿದೆ.

ಜನ ಮೂರ್ಛೆಹೋಗಿ ಪಟಪಟನೆ ಬೀಳುವುದು ಕುಖ್ಯಾತ 1984ರ ಭೋಪಾಲ್ ದುರಂತ ನೆನಪಿಸುವಂತಿತ್ತು. ಭೋಪಾಲ್ ಸಾವು–ನೋವುಗಳ ಮತ್ತು ದುರಂತದ ಪ್ರಮಾಣ ಇದಕ್ಕೆ ಹೋಲಿಸಿದರೆ ಎಷ್ಟೋ ಪಟ್ಟು ದೊಡ್ಡದಿತ್ತು, ನಿಜ. ಆದರೆ ಭೋಪಾಲ್ ದುರಂತದಿಂದ ರಾಸಾಯನಿಕ ಕಂಪನಿಗಳು, ಸರಕಾರ, ಆಳುವವರು ಯಾವುದೇ ಪಾಠ ಕಲಿತಿಲ್ಲ ಎಂಬ ನಗ್ನ ಸತ್ಯ ಕಣ್ಣಿಗೆ ರಾಚುತ್ತಿತ್ತು. ಲಾಭದ ದಾಹದಲ್ಲಿ ಪರಿಸರ ನಿಯಮಾಮವಳಿಗಳ ಕುರಿತು ದಿವ್ಯನಿರ್ಲಕ್ಷದ, ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಲು ಹಿಂದೇಟು ಹಾಕುವ, ಜನವಸತಿಗಳ ಹತ್ತಿರ ಅಪಾಯಕಾರಿ ರಾಸಾಯನಿಕ ಕಾರ್ಖಾನೆಗಳನ್ನು ಸ್ಥಾಪಿಸುವ, ಕಾರ್ಖಾನೆಗಳ ಬಳಿ ಜನವಸತಿ ಪ್ರದೇಶಕ್ಕೆ ಅವಕಾಶ ನೀಡುವ ಮತ್ತು ಇತರ ಉಲ್ಲಂಘನೆಗಳನ್ನು ಭ್ರಷ್ಟ ಸರಕಾರ ಮತ್ತು ಅಧಿಕಾರಶಾಹಿಗಳ ಜತೆ ಶಾಮೀಲಾಗಿ ಎಗ್ಗಿಲ್ಲದೆ ನಡೆಸುವ, ಭೀಕರ ಅಘಘಾತವಾದಾಗಲೂ ಅದರ ಜವಾಬ್ದಾರಿಯಿಂದ ನುಣುಚಿಕೊಳ್ಳುವ – ಅಪಾಯಕಾರಿ ರಾಸಾಯನಿಕ ತಯಾರಿಕೆಯಲ್ಲಿ ತೊಡಗಿರುವ ಬಹುರಾಷ್ಟ್ರೀಯ ಕಂಪನಿಗಳ ಪ್ರವೃತ್ತಿಯ ಅಪಾಯಗಳ ಭೀಕರತೆ ಭೋಪಾಲ್ ದುರಂತದಲ್ಲಿ ಬಯಲಾಗಿತ್ತು. ಅದನ್ನು ತಡೆಯಲು ಹಲವು ಕಾನೂನುಗಳು, ನಿಯಮಾವಳಿಗಳು, ನಿಬಂಧನಾ ಸಂಸ್ಥೆಗಳು, ಉಪಕ್ರಮಗಳನ್ನು ತರಲಾಗಿತ್ತು. ಆದರೆ ಅವೆಲ್ಲಾ ಏನೇನೂ ಪರಿಣಾಮಕಾರಿಯಾಗಿಲ್ಲ ಎಂಬುದನ್ನು ಈ ಎಲ್.ಜಿ ಪಾಲಿಮರ್ಸ್ ದುರಂತ ಮತ್ತೆ ಮುನ್ನೆಲೆಗೆ ತಂದಿದೆ.

ಆರೋಗ್ಯದ ಮೇಲೆ ಸ್ಟೈರಿನ್ ಪರಿಣಾಮಗಳು

ಸ್ಟೈರಿನ್ ವಾಸ್ತವದಲ್ಲಿ ಸಾಮಾನ್ಯ ಉಷ್ಣತೆಯಲ್ಲಿ ಒಂದು ದ್ರವ, ಅನಿಲವಲ್ಲ. ಆದರೆ ಅದು ಬಹಳ ಕಡಿಮೆ ಉಷ್ಣತೆಯಲ್ಲಿಯೇ ಆವಿಯಾಗಬಲ್ಲದು. ಅದು ನೈಸರ್ಗಿಕವಾಗಿ ಹಣ್ಣು, ತರಕಾರಿ, ಮಾಂಸ, ಕಾಫಿ ಮತ್ತು ಶೇಂಗ ಬೀಜಗಳಲ್ಲಿ ಇರುತ್ತದೆ. ಇದು ವಾಹನಗಳು ಹೊರಹಾಕುವ ಹೊಗೆಯಲ್ಲಿ ಹಾಗೂ ಧೂಮಪಾನದ ಹೊಗೆಯಲ್ಲಿ ಸಹ ಇರುತ್ತದೆ. ಸ್ಟೈರಿನ್ ಅನ್ನು ಪ್ಲಾಸಿಕ್, ಫೈಬರ್‌ಗಾಜು, ರೆಫ್ರಿಜರೇಟರ್ ಭಾಗಗಳು ಇತ್ಯಾದಿಗಳನ್ನು ತಯಾರಿಸಲು ಬಳಸುತ್ತಾರೆ. 1989ರ ರಾಸಾಯನಿಕಗಳ ನಿರ್ವಹಣೆಯ ನಿಯಮಾವಳಿಯಲ್ಲಿ ಇದನ್ನು 'ವಿಷಕಾರಿ ಮತ್ತು ಅಪಾಯಕಾರಿ' ರಾಸಾಯನಿಕ ಎಂದು ವರ್ಗೀಕರಿಸಲಾಗಿದೆ.

ಈ ಸ್ಟೈರಿನ್ ಆವಿಯನ್ನು ಸೇವಿಸಿದಾಗ ಇದು ನರಮಂಡಲದ ಮೇಲೆ ಪರಿಣಾಮವನ್ನು ಬೀರುತ್ತದೆ. ಅದರಿಂದ ಮನುಷ್ಯರು ಏಕಾಗ್ರತೆಯನ್ನು ಸಮತೋಲನವನ್ನು ಕಳೆದುಕೊಳ್ಳುತ್ತಾರೆ. ಹೆಚ್ಚು ಬಳಲಿಕೆ ಇದ್ದು, ಮದ್ಯಪಾನದ ಅಮಲಿನಲ್ಲಿ ತೂರಾಡುವಂತೆ ಇರುತ್ತದೆ. ಆದರೆ ಕೇವಲ ಸ್ಟೈರಿನ್‌ನಿಂದ ಸಾವು ಸಂಭವಿಸುವ ಸಾಧ್ಯತೆ ಕಡಿಮೆ. ಆದ್ದರಿಂದ ಇದರ ಒಟ್ಟಿಗೆ ಬೇರೆ ರಾಸಾಯನಿಕ ಪದಾರ್ಥವು ಇರಬಹುದು ಎಂಬ ಸಂಶಯವೂ ಇದೆ. ಸ್ಟೈರಿನ್ ಸಾಮಾನ್ಯವಾಗಿ ದ್ರವ ರೂಪದಲ್ಲಿ ಇರುವುದರಿಂದ, ಆವಿಯಾದಾಗ ಬೇರೆ ಬೇರೆ ಸಾಂದ್ರತೆಯ ಪ್ರಮಾಣದಲ್ಲಿ ಮನುಷ್ಯರ ಆರೋಗ್ಯದ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬುದರ ಕುರಿತು ಅಧ್ಯಯನ ಮಾಡಲಾಗಿಲ್ಲ.

ಸ್ಟೈರಿನ್ ಬಳಸುವ ಕಾರ್ಖಾನೆಗಳಲ್ಲಿ ಅದನ್ನು ನಿಭಾಯಿಸುವ ಕಾರ್ಮಿಕರು ಎದುರಿಸಬಹುದಾದ ಸಣ್ಣ ಪ್ರಮಾಣದ ಹಬೆಯ ಸಾಂದ್ರತೆಯ (ಸುಮಾರು 20 ಪಿ.ಪಿ.ಎಂ) ಅಲ್ಪಾವಧಿಯ ಪರಿಣಾಮವನ್ನು ಉದ್ಯೋಗನಿರತ ಕಾರ್ಮಿಕರ ರಕ್ಷಣೆ ದೃಷ್ಟಿಯಿಂದ ಮಾತ್ರ ಅಧ್ಯಯನ ಮಾಡಲಾಗಿದೆ. ಅಮೆರಿಕದ ಸುರಕ್ಷತಾ ನಿಯಮ ಇದರ 100 ಪಿ.ಪಿ.ಎಂ ಕ್ಕಿಂತ ಹೆಚ್ಚು ಸಾಂದ್ರತೆ ಅಪಾಯಕಾರಿ ಎನ್ನುತ್ತದೆ. ಆದರೆ ಎಲ್.ಜಿ.ಪಾಲಿಮರ್ಸ್ ಪ್ರಕರಣದಲ್ಲಿ ಗಂಟೆಗಳ ಕಾಲ ಭಾರೀ ಪ್ರಮಾಣದ ಸಾಂದ್ರತೆಯ (ಕಾರ್ಖಾನೆಯ ಸಮೀಪ ಸುಮಾರು 1100 ಪಿ.ಪಿಎಂನಷ್ಟು ಅಂದರೆ ಅಪಾಯದ ಮಿತಿಗಿಂತ 11 ಪಟ್ಟು ಹೆಚ್ಚು, 2–3 ಕಿ,ಮಿ ದೂರದ ವರೆಗೆ ಸಹ ಅಪಾಯದ ಮಿತಿಗಿಂತ ಹೆಚ್ಚು) ಸ್ಟೈರಿನ್ ಆವಿ ಬೀಸಿದೆ. ಅದರ ಸಮೀಪಗಾಮಿ, ದೂರಗಾಮಿ (ಅದರಲ್ಲೂ ಗರ್ಭಿಣಿಯರ ಮತ್ತು ಮಕ್ಕಳ ಮೇಲೆ) ಪರಿಣಾಮಗಳ ಬಗ್ಗೆ ಯಾವುದೇ ಮಾಹಿತಿಯಿಲ್ಲ.

ದುರಂತ ಹೇಗೆ ಸಂಭವಿಸಿರಬಹುದು?

ಈ ದುರಂತ ಹೇಗೆ ಸಂಭವಿಸಿತು ಎಂಬುದರ ಬಗ್ಗೆ ನಿಖರವಾದ ಮಾಹಿತಿ ಇಲ್ಲ, ಸ್ಪಷ್ಟತೆ ಇಲ್ಲ. ಆದರೆ ಸ್ಟೈರಿನ್ ದ್ರವ್ಯದ ರಾಸಾಯನಿಕ ಗುಣ ಮತ್ತು ಸಾರ್ವಜನಿಕವಾಗಿರುವ ಕೆಲವು ಮಾಹಿತಿಗಳಿಂದ ದುರಂತ ಹೇಗೆ ಸಂಭವಿಸಿರಬಹುದು ಎಂದು ಅಂದಾಜು ಮಾಡುವುದು ಕಷ್ಟವೇನಲ್ಲ.

ಸ್ಟೈರಿನ್ ದ್ರವ್ಯವನ್ನು 20 ಡಿಗ್ರಿ ಸೆಂಟಿಗ್ರೇಡಿನಲ್ಲಿ ತಣ್ಣಗಿರಿಸಬೇಕು. ಮಾತ್ರವಲ್ಲ ಹೆಚ್ಚಿನ ಉಷ್ಣತೆಯಲ್ಲಿ ತನ್ನಿಂತಾನೇ ರಾಸಾಯನಿಕ ಬದಲಾವಣೆಗಳನ್ನು ಕಾಣುವ ಮತ್ತು ಅದರಿಂದ ಇನ್ನೂ ಹೆಚ್ಚಿನ ಉಷ್ಣತೆ ಉಂಟು ಮಾಡುವುದರಿಂದ ಆವಿಯಾಗುವ ಅದರ ರಾಸಾಯನಿಕ ಗುಣವನ್ನು ತಡೆಯಲು, ಇತರ ಕೆಲವು ರಾಸಾಯನಿಕಗಳನ್ನು ಅದರ ಜತೆಗೆ ಬೆರೆಸಬೇಕು. ಸ್ಟೈರಿನನ್ನು ದ್ರವ ರೂಪದಲ್ಲಿ ಕಾಪಿಡಲು ಬೇಕಾದ ಈ ಎರಡೂ ಸ್ಥಿತಿಗಳಲ್ಲಿ ವ್ಯತ್ಯಯ ಉಂಟಾಗಿರುವುದರಿಂದ ಉಷ್ಣತೆ ಹೆಚ್ಚುತ್ತಾ ಹೋಗಿ ಅದು ಆವಿಯಾಗಿ ಟ್ಯಾಂಕಿನಲ್ಲಿ ಒತ್ತಡ ಉಂಟಾಗಿರಬೇಕು. ಆವಿಯ ಒತ್ತಡ ಹೆಚ್ಚಿದಂತೆ (ಪ್ರೆಶರ್ ಕುಕ್ಕರ್ ನಲ್ಲಿ ಇರುವ ರೀತಿಯ) ಸೇಫ್ಟಿ ವಾಲ್ವ್ ತೆರೆದಿದೆ. ಇಲ್ಲದಿದ್ದರೆ ಟ್ಯಾಂಕ್ ಸ್ಫೋಟವಾಗಿ ಇನ್ನಷ್ಟು ಭೀಕರ ದುರಂತವಾಗುತ್ತಿತ್ತು. ಈ ಸ್ಟೈರಿನ್ ದ್ರವ್ಯವನ್ನು ಶೇಖರಿಸಿ ಇಟ್ಟಿರುವ ಟ್ಯಾಂಕಿನಲ್ಲಿ ಉಷ್ಣತೆಯನ್ನು ನಿಯಂತ್ರಿಸುವ ಸಲಕರಣೆಗಳು ಕೆಲಸ ಮಾಡಿಲ್ಲ ಎಂಬುದು ಸ್ವಯಂವಿದಿತ. ಇದಲ್ಲದೆ ಉಷ್ಣತೆ ಹೆಚ್ಚಿದರೂ ರಾಸಾಯನಿಕ ಬದಲಾವಣೆ ಆಗದಂತೆ ಮಾಡುವ ಇತರ ರಾಸಾಯನಿಕಗಳು ಇರಲಿಲ್ಲ ಅಥವಾ ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿದ್ದಾಗ ಮಾತ್ರ ಇಂತಹ ದುರಂತ ಸಂಭವಿಸಿರಲಿಕ್ಕೆ ಸಾಧ್ಯ.

ಈ ದುರಂತೆ ಸಂಭವಿಸಲು ಮುಖ್ಯ ಕಾರಣ ಸ್ಟೈರಿನ್ ದ್ರವ್ಯವನ್ನು ಶೇಖರಿಸುವಾಗ ತೆಗೆದುಕೊಳ್ಳಬೇಕಾದ ಮೇಲೆ ಹೇಳಿದ ಪ್ರಾಥಮಿಕ ಕ್ರಮಗಳ ಬಗ್ಗೆ ಎಲ್.ಜಿ. ಕಂಪೆನಿ ಆಡಳಿತ ವರ್ಗದ ನಿರ್ಲಕ್ಷ ಎಂಬುದು ಸ್ಪಷ್ಟ. ಇಂತಹ ಸ್ಥಾವರದಲ್ಲಿ ಉಷ್ಣತೆ, ಇತರ ರಾಸಾಯನಿಕಗಳ ಪೂರೈಕೆ, ಟ್ಯಾಂಕಿನಲ್ಲಿರುವ ರಾಸಾಯನಿಕದ ಸ್ಥಿತಿ – ಇವೆಲ್ಲದರ ಸತತ ನಿಗಾ ಇಡುವ ಸ್ವಯಂ–ಚಾಲಿತ ವ್ಯವಸ್ಥೆನೂ ಇರಬೇಕು. ಇಂತಹ ವ್ಯವಸ್ಥೆ ಕೆಲಸ ಮಾಡುತ್ತಿದೆ ಎಂದು ನೋಡಿಕೊಳ್ಳುವ ನುರಿತ ಸಿಬ್ಬಂದಿ ಸಹ ಇರಬೇಕು. ಇಂತಹ ವ್ಯವಸ್ಥೆಯ ನಿಯಮಿತ ನಿರ್ವಹಣೆ, ದುರಸ್ತಿ, ಪರೀಕ್ಷಣೆಗಳೂ ಇರಬೇಕು. ಸುರಕ್ಷತೆ ಡ್ರಿಲ್ ಗಳನ್ನು ಮಾಡಬೇಕು. ಇವೆಲ್ಲವನ್ನೂ ಮಾಡಿದ್ದರೆ ಈ ದುರಂತ ಸಂಭವಿಸುತ್ತಿರಲಿಲ್ಲ. ಇವುಗಳಲ್ಲಿ ಹಲವು ಕ್ರಮಗಳಲ್ಲಿ ಚ್ಯುತಿ ಆಗಿದ್ದರಿಂದ ಈ ದುರಂತ ಸಂಭವಿಸಿದೆ ಎಂಬುದು ಸ್ಪಷ್ಟ.

ಇದಲ್ಲದೆ ಅವೈಜ್ಞಾನಿಕವಾಗಿ ತರಾತುರಿಯಲ್ಲಿ ಹೇರಲಾದ ಲಾಕ್ ಡೌನ್ ಸಹ ಇದರಲ್ಲಿ ಪಾತ್ರ ವಹಿಸಿರುವ ಸಾಧ್ಯತೆಯಿದೆ. ಲಾಕ್ ಡೌನ್ ಸಮಯದಲ್ಲಿ ಈ ಕಾರ್ಖಾನೆಯನ್ನು ಬಂದ್ ಮಾಡಲಾಗಿತ್ತು. ಇಂತಹ ರಾಸಾಯನಿಕಗಳನ್ನು (ಅದರಲ್ಲೂ 'ಅಪಾಯಕಾರಿ'ಯಾದವುಗಳನ್ನು) ತಯಾರಿಸುವ, ನಿರ್ವಹಣೆ ಮಾಡುವ, ಸತತ ರಾಸಾಯನಿಕ ಪ್ರಕ್ರಿಯೆಗಳು ಜರುಗುವ ಕಾರ್ಖಾನೆ ನಡೆಸಲು ಲಾಕ್ ಡೌನ್ ನಿಂದ ವಿನಾಯಿತಿ ಕೊಡಬೇಕಾಗಿತ್ತು. ಬಂದ್ ಮಾಡಿದ ಸಂದರ್ಭದಲ್ಲೂ ಅಗತ್ಯ ದುರಸ್ತಿ, ನಿರ್ವಹಣೆಗೆ ಅಗತ್ಯ ಸಿಬ್ಬಂದಿಗೆ ಕಾರ್ಖಾನೆಗೆ ಹೋಗಲು ಪರವಾನಿಗಿ ಕೊಡಬೇಕಾಗಿತ್ತು. ಇಂತಹ ದುರಸ್ತಿ, ನಿರ್ವಹಣೆಗೆ ಸಿಬ್ಬಂದಿ ಇರಲಿಲ್ಲ ಎಂಬುದು ಸ್ಪಷ್ಟ. ಇದು ಆಡಳಿತ ವರ್ಗದ ನಿರ್ಲಕ್ಷದಿಂದ ಮಾತ್ರವಲ್ಲದೆ ಲಾಕ್ ಡೌನ್ ನ ಕಠಿಣ ನಿಯಮಗಳಿಂದ ಆಗಿರುವ ಸಾಧ್ಯತೆ ಸಹ ಇದೆ. ಲಾಕ್ ಡೌನ್ ಸಡಿಲಿಸಿದಾಗಲೂ ಕಾರ್ಖಾನೆ ಪುನರಾರಂಭಿಸುವಾಗ ತೆಗೆದುಕೊಳ್ಳುವ ಕ್ರಮವನ್ನು ತೆಗೆದುಕೊಳ್ಳಲು ಇತರ ಅಡಚಣೆಗಳು (ಉದಾ: ಕೆಟ್ಟ ಸುರಕ್ಷ ಉಪಕರಣಗಳ ಬಿಡಿಭಾಗಗಳು, ಇತರ ರಾಸಾಯನಿಕಗಳ ಪೂರೈಕೆ, ಪರಿಣತರ ಭೇಟಿ) ಸಹ ಲಾಕ್ ಡೌನ್ ಪರಿಣಾಮವಾಗಿ ಆಗಿರುವ ಸಾಧ್ಯತೆಯಿದೆ. ಇವೆಲ್ಲ ತನಿಖೆಯಿಂದ ಮಾತ್ರ ಗೊತ್ತಾಗುವಂತಹುದು.


ನಿಯಂತ್ರಣ ನಿಯಮಗಳ ಉಲ್ಲಂಘನೆ

1965 ರಲ್ಲಿ ಹಿಂದೂಸ್ಥಾನ ಪಾಲಿಮರ್ಸ್ ಎನ್ನುವ ಹೆಸರಿನಲ್ಲಿ ಶ್ರೀರಾಮ್ ಗ್ರೂಪ್‌ನ ಮಾಲಿಕತ್ವದಲ್ಲಿ ಈ ಕಾರ್ಖಾನೆಯನ್ನು ಪ್ರಾರಂಭಿಸುತ್ತಾರೆ. ಹಾಗೂ ಪ್ಲಾಸ್ಟಿಕ್ ಅನ್ನು ತಯಾರಿಸಿರುತ್ತಾರೆ. 1978ರಲ್ಲಿ ಈ ಕಂಪೆನಿಯನ್ನು ಯುನೈಟೆಡ್ ಬ್ರಿವರೀಸ್ ಎಂಬ ಕಂಪೆನಿಯ ಜೊತೆ ವಿಲೀನ ಮಾಡುತ್ತಾರೆ. ನಂತರ 1997 ರಲ್ಲಿ ದಕ್ಷಿಣ ಕೊರಿಯ ಮೂಲದ ಎಲ್.ಜಿ. ಪಾಲಿಮರ್ಸ್ ಕಂಪೆನಿಗೆ ಮಾರಾಟ ಮಾಡಲಾಗುತ್ತದೆ. ಅಂದಿನಿಂದ ಇದು ಅವರ ಆಡಳಿತದಲ್ಲಿಯೇ ಇದೆ. ಈ ಕಂಪೆನಿಯು ಆಮದು ಮಾಡಿಕೊಂಡಿರುವ ಸ್ಟೈರೀನ್ ಉಪಯೋಗಿಸುತ್ತಿದೆ.

ನವೆಂಬರ್ 2001 ರಲ್ಲಿ ಈ ಕಾರ್ಖಾನೆಯನ್ನು ಸ್ಥಾಪಿಸಲು ಹಾಗೂ ಮೇ 2002 ರಲ್ಲಿ ಇದನ್ನು ಕಾರ್ಯರೂಪಕ್ಕೆ ತಂದು ಪ್ರಾರಂಭಿಸಲು ಆಂಧ್ರಪ್ರದೇಶ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಒಪ್ಪಿಗೆಯನ್ನು ಪಡೆದಿದೆ. ಆದರೆ 2006 ರಲ್ಲಿ ಪರಿಸರ ಪರಿಣಾಮದ ಮೌಲ್ಯಮಾಪನ (Environment Impact Assessment - EIA) ಅಧಿಸೂಚನೆ (ನೊಟಿಫಿಕೇಶನ್) ಜಾರಿಯಾದ ನಂತರ ಇಂತಹ ಕಾರ್ಖಾನೆಗಳಿಗೆ ಪರವಾನಗಿ ಕೊಡುವ ಮೊದಲು ಪರಿಸರ ಪರಿಣಾಮದ ಮೌಲ್ಯಮಾಪನ

ಪುಟ 14 ನೋಡಿ





ವ್ಯಂಗ್ಯಚಿತ್ರ ಕೃಪೆ:
ಅಲೋಕ್ ನಿರಂತರ್

ಪೆಟ್ರೋಲ್–ಡೀಸೆಲ್ ಬೆಲೆಯೇರಿಕೆ

ಜನರಿಗೆ ಕೊಡುವ ಬದಲು ಜನರಿಂದಲೇ ಕಿತ್ತುಕೊಳ್ಳುವ ಸರಕಾರ

ಮೋದಿ ಸರಕಾರ ಲಾಕ್‌ಡೌನಿನಿಂದಾಗಿ ಆದಾಯ ಕಳಕೊಂಡಿರುವ ಜನಸಾಮಾನ್ಯರ ಕೈಗಳಲ್ಲಿ ಒಂದಿಷ್ಟು ಹಣವನ್ನು ಕೊಡಬೇಕಾಗಿದ್ದ ಸಮಯದಲ್ಲಿ, ಅವರಿಂದಲೇ ತೆರಿಗೆಗಳ ಮೂಲಕ ಕಿತ್ತುಕೊಳ್ಳುವ ಧೋರಣೆ ತಳೆದಿದೆ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ನಿರ್ಧಾರದಲ್ಲಿ ಇಂತಹ ಮಧ್ಯಪ್ರವೇಶ ಅದರ ಎಂದಿನ ಸರ್ವಾಧಿಕಾರಶಾಹೀ ಛಾಪನ್ನು ಹೊಂದಿದೆ. ಸರಕಾರದ ಆದಾಯಗಳು ತೀವ್ರವಾಗಿ ಇಳಿಯುತ್ತಿರುವಾಗ ಅದನ್ನು ತುಂಬಿಸಿಕೊಳ್ಳಲು ಅದು ಈ ಜನ–ವಿರೋಧಿ ಕ್ರಮಕ್ಕೆ ಕೈಹಾಕಿದೆ. ಆದರೆ ಇದರಿಂದ ಕೊನೆಗೆ ಸರಕಾರದ ಆದಾಯಗಳ ಪುನಶ್ಚೇತನಕ್ಕೇ ಏಟು ಬೀಳುತ್ತದೆ. ಸರಕಾರ ತನ್ನ ಆದಾಯಗಳನ್ನು ತುರ್ತಾಗಿ ಹೆಚ್ಚಿಸಿಕೊಳ್ಳಬೇಕು ಎಂದಿದ್ದರೆ, ಅತಿಶ್ರೀಮಂತರ ಮೇಲೆ 2ಶೇ. ಸಂಪತ್ತು ತೆರಿಗೆ ಮತ್ತು 33ಶೇ. ವಾರಸುದಾರಿಕೆ ತೆರಿಗೆಯನ್ನು ಹಾಕಬೇಕಾಗಿತ್ತು. ಇದರಿಂದ, ಜನಗಳಿಂದ ಹಣವನ್ನು ಕಿತ್ತುಕೊಳ್ಳದೆಯೇ ಸರಕಾರ ತನ್ನ ಆದಾಯಗಳನ್ನು ಹೆಚ್ಚಿಸಿಕೊಳ್ಳುವ ಉದ್ದೇಶವನ್ನು ಈಡೇರಿಸಿಕೊಳ್ಳಬಹುದಿತ್ತು.

ಪ್ರಕಾಶ ಕಾರಟ್

ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಜುಲೈ 7 ರಿಂದ 17 ರ ವರೆಗೆ ಸತತವಾಗಿ ಹನ್ನೊಂದು ದಿನಗಳ ಕಾಲ ಏರಿಸಲಾಗಿದೆ. ಇದರಿಂದಾಗಿ ಪೆಟ್ರೋಲ್ ಬೆಲೆಯಲ್ಲಿ ಲೀಟರಿಗೆ ರೂ.6.02 ಹೆಚ್ಚಳವಾಗಿದ್ದರೆ, ಡೀಸೆಲ್ ಬೆಲೆಯಲ್ಲಿ ರೂ.6.40 ಹೆಚ್ಚಳವಾಗಿದೆ.

ಈ ದೈನಂದಿನ ಏರಿಕೆಗಳನ್ನು ತೈಲ ಕಂಪನಿಗಳು, ಅರ್ಥವ್ಯವಸ್ಥೆಯಲ್ಲಿ ಹಿಂದೆಂದೂ ಕಾಣದ ನಿರುದ್ಯೋಗ ಮತ್ತು ಆದಾಯಗಳು, ಜೀವನೋಪಾಯಗಳನ್ನು ಕಳೆದು ಕೊಂಡಿರುವುದರಿಂದಾಗಿ ಬೇಡಿಕೆ ಹಿಂದೆಂದೂ ಕಾಣದಂತಹ ಮಟ್ಟಕ್ಕೆ ಇಳಿದಿರುವ ಸಮಯದಲ್ಲಿ ಮಾಡಿವೆ. ಇದನ್ನು ಅವು ಸರಕಾರದ ಬಯಕೆಯಂತೆ ಮಾಡಿವೆ ಎಂಬುದರಲ್ಲಿ ಸಂದೇಹವಿಲ್ಲ.

ಪೆಟ್ರೋಲ್, ಡೀಸೆಲ್‌ಗಳನ್ನು ತುಟ್ಟಿ ಮಾಡುವ ಮೋದಿ ಸರಕಾರದ ಧೋರಣೆ ವಾಸ್ತವವಾಗಿ ಹಣವನ್ನು ಜನಗಳಿಗೆ ಅದು ಅತ್ಯಂತ ಅಗತ್ಯವಿರುವಾಗ, ಅವರ ಕೈಗಳಲ್ಲಿ ಇಡುವ ಬದಲು ಅವರ ಕೈಗಳಿಂದಲೇ ಅದನ್ನು ಕಿತ್ತುಕೊಳ್ಳುವ ಧೋರಣೆಯಾಗಿದೆ.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ನಿರ್ಧಾರದಲ್ಲಿ ಮೋದಿ ಸರಕಾರ ಮನಸೋ–ಇಚ್ಛೆ ಮಧ್ಯಪ್ರವೇಶಿಸಿರುವ ಈ ವಿಧಾನ ಅದರ ಎಂದಿನ ಸರ್ವಾಧಿಕಾರಶಾಹೀ ಛಾಪನ್ನು ಹೊಂದಿದೆ. ಮಹಾಮಾರಿ ಮತ್ತು ಲಾಕ್‌ಡೌನ್ ಅವಧಿಯಲ್ಲಿ ನಾವು ಇದರ ನಗ್ನ ಪ್ರದರ್ಶನವನ್ನು ಕಂಡಿದ್ದೇವೆ.

ಸರಕಾರ ಮೇ 5ರಂದು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕೇಂದ್ರೀಯ ಅಬಕಾರಿ ಸುಂಕಗಳು ಮತ್ತಿತರ ಸುಂಕಗಳನ್ನು ಭಾರೀ ದೊಡ್ಡ ಪ್ರಮಾಣದಲ್ಲಿ ಏರಿಸಲು ನಿರ್ಧರಿಸಿತು. ಇದರಿಂದಾಗಿ ಪೆಟ್ರೋಲ್ ಮೇಲಿನ ತೆರಿಗೆಗಳಲ್ಲಿ ಲೀಟರಿಗೆ 10ರೂ. ಹೆಚ್ಚಳ, ಮತ್ತು ಡೀಸೆಲ್‌ನಲ್ಲಿ 13 ರೂ. ಹೆಚ್ಚಳ ಉಂಟಾಯಿತು. ಇದರಲ್ಲಿ ಬಹುಪಾಲು ರಸ್ತೆ ಸೆಸ್ ಸ್ವರೂಪದಲ್ಲಿದೆ. ಇದಕ್ಕೆ ಮೊದಲು, ಮಾರ್ಚ್ 14ರಂದು ಅಬಕಾರಿ ಸುಂಕ ಮತ್ತು ರಸ್ತೆ ಸೆಸ್‌ಗಳಲ್ಲಿ ಲೀಟರಿಗೆ 3ರೂ.ನಷ್ಟು ಏರಿಕೆಯಾಗಿತ್ತು. ಒಟ್ಟಾಗಿ ಈ ಎಲ್ಲ ತೆರಿಗೆ ಏರಿಕೆಗಳಿಂದ ಕೇಂದ್ರ ಸರಕಾರ 2ಲಕ್ಷ ಕೋಟಿ ರೂ.ಗಳ ಹೆಚ್ಚುವರಿ ಆದಾಯವನ್ನು ದಕ್ಕಿಸಿಕೊಂಡಿದೆ.

ಅಬಕಾರಿ ಸುಂಕ ಮತ್ತು ಇತರ ತೆರಿಗೆಗಳ ಎರಡನೇ ಪರಿಷ್ಕರಣೆಯ ನಂತರ ಸರಕಾರ ಪೆಟ್ರೋಲಿನ ಮೂಲ ಬೆಲೆಯ ಮೇಲೆ 260ಶೇ. ಮತ್ತು ಡೀಸೆಲ್ ಮೂಲಬೆಲೆಯ ಮೇಲೆ 256ಶೇ. ತೆರಿಗೆಗಳಾಗಿ ಸಂಗ್ರಹಿಸುತ್ತಿದೆ. ಕೇಂದ್ರೀಯ ತೆರಿಗೆಗಳಲ್ಲಿನ ಈ ಏರಿಕೆ ಅಂತರ್ರಾಷ್ಟ್ರೀಯವಾಗಿ ಕಚ್ಚಾ ತೈಲದ ಬೆಲೆ ಅತ್ಯಂತ ಕೆಳಕ್ಕೆ ಇಳಿದಿದ್ದ ಸಂದರ್ಭದಲ್ಲಿ ಆಗಿದೆ. ಮೇ ತಿಂಗಳ ಆರಂಭದಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ ಸುಮಾರು 28 ಡಾಲರ್ ಇತ್ತು, ಎಪ್ರಿಲ್ ತಿಂಗಳಲ್ಲಿ ಇದು 20 ಡಾಲರುಗಳಿಗಿಂತಲೂ ಕೆಳಕ್ಕೆ ಇಳಿದಿತ್ತು. ತೈಲ ಬೆಲೆಗಳಲ್ಲಿ ಇಳಿಕೆಗಳಿಂದಾಗಿ ತೈಲ ಕಂಪನಿಗಳು ಪಡೆದಿದ್ದ ಪ್ರಯೋಜನಗಳು ಪೆಟ್ರೋಲ್, ಡೀಸೆಲ್ ಬೆಲೆಗಳನ್ನು ಇಳಿಸುವ ಮೂಲಕ ಬಳಕೆದಾರರಿಗೆ ತಲುಪದಂತೆ ತಡೆಯಲು, ಮತ್ತು ಆ ಪ್ರಯೋಜನಗಳನ್ನು ತನ್ನತ್ತ ಸೆಳೆಯಲು ಸರಕಾರ ಈ ತೆರಿಗೆ ಏರಿಕೆಗಳನ್ನು ಮಾಡಿತು.

ಇಂತಹ ಸನ್ನಿವೇಶದಲ್ಲಿ ಕೇಂದ್ರ ಸರಕಾರ ಒಂದು ಕೈಚಳಕವನ್ನು ನಡೆಸಿತು. ಲಾಕ್‌ಡೌನ್ ಅವಧಿಯಲ್ಲಿ ಚಿಲ್ಲರೆ ಬೆಲೆಗಳ ದೈನಂದಿನ ಪರಿಷ್ಕರಣೆಗಳನ್ನು ತಡೆ ಹಿಡಿಯಲಾಗುವುದು ಎಂದಿತು. ಈ ಮೂಲಕ ಅದು ತೈಲ ಕಂಪನಿಗಳು ಅಂತರ್ರಾಷ್ಟ್ರೀಯ ತೈಲ ಬೆಲೆಗಳು ಇಳಿಯುತ್ತಿದ್ದಾಗ ಅದರ ಪ್ರಯೋಜನ ಬಳಕೆದಾರರಿಗೆ ಸಿಗದಂತೆ ತಡೆಯಿತು. ಕೇಂದ್ರೀಯ ತೆರಿಗೆಗಳಲ್ಲಿ ಏರಿಕೆಯನ್ನು ಪ್ರಕಟಿಸಿದಾಗ ಅದನ್ನು ಬಳಕೆದಾರರ ಮೇಲೆ ಹಾಕುವುದಿಲ್ಲ ಎಂದು ಸರಕಾರ ಹೇಳಿತು. ತೈಲ ಕಂಪನಿಗಳು ಅದನ್ನು ಅನುಸರಿಸಿದವು, ಏಕೆಂದರೆ ಅವುಗಳು ಅತ್ಯಂತ ಕಡಿಮೆ ಬೆಲೆಗಳಲ್ಲಿ ತೈಲವನ್ನು ಆಮದು ಮಾಡಿಕೊಳ್ಳುತ್ತಿದ್ದು, ಹೆಚ್ಚಿನ ಮಟ್ಟದಲ್ಲಿದ್ದ ಚಿಲ್ಲರೆ ಮಾರಾಟ ಬೆಲೆಗಳನ್ನು ಹಾಗೆಯೆ ಉಳಿಸಿಕೊಂಡದ್ದರಿಂದಾಗಿ ಈ ಹೆಚ್ಚುವರಿ ತೆರಿಗೆಗಳನ್ನು ತೆರಲು ಅದರ ಬಳಿ ಹಣ ಸಂಗ್ರಹವಿತ್ತು.

ಜೂನ್‌ನಲ್ಲಿ ಲಾಕ್‌ಡೌನನ್ನು ತೆಗೆದ ತಕ್ಷಣ, ಕಚ್ಚಾತೈಲದ ಬೆಲೆಗಳು ಏರುತ್ತಿವೆ ಎಂಬ ನೆವವೊಡ್ಡಿ ದೈನಂದಿನ ಬೆಲೆ ಏರಿಕೆಗಳು ಆರಂಭವಾಗಿವೆ. ಸದ್ಯ ಇಂಧನ ಬೆಲೆಗಳು ಅಕ್ಟೋಬರ್ 2018ರ ನಂತರ ಅತ್ಯುನ್ನತ ಮಟ್ಟವನ್ನು ತಲುಪಿವೆ. ಆಗ ಅಂತರ್ರಾಷ್ಟ್ರೀಯ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ ಸರಾಸರಿ 80 ಡಾಲರುಗಳಷ್ಟಿತ್ತು. ಈಗ ಅದು ಬ್ಯಾರೆಲ್‌ಗೆ 35 ರಿಂದ 36 ಡಾಲರುಗಳಷ್ಟಿದೆ. ಈ ಕ್ರಮಗಳು ತೈಲ ಬೆಲೆಗಳು ನಿಯಂತ್ರಣಮುಕ್ತ ಎನ್ನುವ ಧೋರಣೆಯನ್ನು ಒಂದು ಪ್ರಹಸನವಾಗಿ ಮಾಡಿ ಬಿಟ್ಟಿವೆ.

ಜಾಗತಿಕ ತೈಲ ಬೆಲೆಗಳು ಕೆಳ ಮಟ್ಟದಲ್ಲಿದ್ದಾಗ ತೆರಿಗೆಗಳನ್ನು ತರ್ಕಬದ್ಧಗೊಳಿಸುವ ಬದಲು . ಸರಕಾರ ವಿಪರೀತ ಏರಿಕೆಗಳನ್ನು ಮಾಡಿತು. ಇಂಧನ ಬೆಲೆಗಳನ್ನು ಸತತವಾಗಿ ಏರಿಸುತ್ತ ಹೋದರೆ ಜನಗಳ ಬಳಿ ಖರ್ಚು ಮಾಡಲು ಉಳಿಯಬಹುದಾದ ಹಣದ ಮೊತ್ತವೂ ಇಳಿಯುತ್ತದೆ. ಇದರಿಂದಾಗಿ ಅದಾಗಲೇ ಕಡಿಮೆ ಇರುವ ಬೇಡಿಕೆಯ ಪ್ರಮಾಣ ಮತ್ತಷ್ಟು ಇಳಿಯುತ್ತದೆ.


ರಸ್ತೆ ಸೆಸ್ ಮತ್ತು ವಿಶೇಷ ಅಬಕಾರಿ ಸುಂಕವನ್ನು ಏರಿಸುವುದು ಎಂದರೆ ರಾಜ್ಯಗಳು ಹೆಚ್ಚಿಸಿದ ತೆರಿಗೆಗಳಲ್ಲಿ ಏನನ್ನೂ ಪಡೆಯುವುದಿಲ್ಲ ಎಂದಾಗುತ್ತದೆ. ಅದೂ ರಾಜ್ಯಗಳು ಹಣಕಾಸಿನ ವಿಷಯದಲ್ಲಿ ತಿಣುಕಾಡುತ್ತಿರುವ ಸಮಯದಲ್ಲಿ. ಕೇಂದ್ರ ಸರಕಾರದ ನಡೆಯನ್ನು ಅನುಸರಿಸಿ ಕೆಲವು ರಾಜ್ಯಗಳು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಮೌಲ್ಯವರ್ಧಿತ ತೆರಿಗೆ(ವ್ಯಾಟ್) ಮತ್ತಿತರ ತೆರಿಗೆಗಳನ್ನು ಹೆಚ್ಚಿಸಿವೆ. ಇದು ಮಹಾಮಾರಿಯ ಸಮಯದಲ್ಲಿ ಜನಗಳ ಮೇಲಿನ ಹೊರೆಯನ್ನು ಮತ್ತಷ್ಟು ಹೆಚ್ಚಿಸುತ್ತದೆಯಷ್ಟೇ.

ಉತ್ತೇಜನಾ ಪ್ಯಾಕೇಜ್ ಎಂದು ಸರಕಾರ ಪ್ರಕಟಿಸಿದ್ದು ಟೊಳ್ಳು ಎಂದು ಸಾಬೀತಾಗಿದೆ. ಅದರಲ್ಲಿ ಜನಗಳ ಕೈಗಳಲ್ಲಿ ಹಣವನ್ನಿಟ್ಟು ಬೇಡಿಕೆಯನ್ನು ಉತ್ತೇಜಿಸಲು ಸಾಕಷ್ಟು ಮೊತ್ತವನ್ನು ಕೊಟ್ಟೇ ಇಲ್ಲ. ಬಿಜೆಪಿ ಸರಕಾರ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಬೇಸರವಾಗಬಾರದೆಂದು ವಿತ್ತೀಯ ಸಂಪ್ರದಾಯಶರಣತೆಗೆ ಬಲವಾಗಿ ಆತುಕೊಂಡೇ ಇದೆ. ಈಗ ಹಣದ ಬಹಳ ಅಗತ್ಯ ಇರುವ ಜನಗಳ ಕೈಗಳಿಗೆ ಹಣದ ವರ್ಗಾವಣೆಯ ಯಾವುದೇ ಪರಿಣಾಮಕಾರೀ ಕ್ರಮವಿಲ್ಲದೆ , ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಏರಿಸುತ್ತಿರುವುದು ಜನಗಳ ಮೇಲೆ ಒಂದು ಹಾನಿಕಾರಕ ಹೊರೆಯಾಗುತ್ತದೆ.

ಇಂಧನಗಳ ಬೆಲೆಯೇರಿಕೆಯಿಂದ ಒಟ್ಟಾರೆಯಾಗಿ ಎಲ್ಲ ಸರಕುಗಳ ಬೆಲೆಗಳೂ ಏರುತ್ತವೆ. ಟ್ರಕ್ಕುಗಳಲ್ಲಿ, ಲಾರಿಗಳಲ್ಲಿ ಸಾಮಾನುಗಳನ್ನು ಸಾಗಿಸುವ ವೆಚ್ಚ ಏರುತ್ತದೆ. ರೈತರ ಲಾಗುವಾಡುಗಳ ಖರ್ಚುಗಳು ಹೆಚ್ಚುತ್ತವೆ, ಇದು ಅವರ ಆದಾಯಗಳ ಮೇಲೆ ದುಷ್ಪರಿಣಾಮ ಬೀರುತ್ತದೆ; ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆ ವಲಯದ ಪುನಶ್ಚೇತನ ಒಟ್ಟು ಆರ್ಥಿಕ ವ್ಯವಸ್ಥೆಗೆ ಬಹಳ ಮುಖ್ಯವಾಗಿರುವಾಗ ಅದರ ಮೇಲೂ ಇಂಧನ ಬೆಲೆಯೇರಿಕೆಗಳು ದುಷ್ಪರಿಣಾಮ ಬೀರುತ್ತವೆ; ಸಾರ್ವಜನಿಕ ಸಾರಿಗೆ ತುಟ್ಟಿಯಾಗುತ್ತದೆ. ಇಂಧನದ ಬೆಲೆಗಳಲ್ಲಿ ಲೀಟರಿಗೆ 50 ಪೈಸೆ ಏರಿಕೆಯಾದರೆ, ಒಬ್ಬ ಆಟೋರಿಕ್ಷಾ ಚಾಲಕನ ದೈನಂದಿನ ಆದಾಯ 30 ರಿಂದ 40 ರೂ.ಗಳಷ್ಟು ಕಡಿಮೆಯಾಗುತ್ತದೆ.

ಸರಕಾರದ ಆದಾಯಗಳು ತೀವ್ರವಾಗಿ ಇಳಿಯುತ್ತಿರುವಾಗ ಅದನ್ನು ತುಂಬಿಸಿಕೊಳ್ಳಲು ಅದು ಈ ಜನ–ವಿರೋಧಿ ಕ್ರಮಕ್ಕೆ ಕೈಹಾಕಿದೆ. ಆದರೆ ಇದು ಕೊನೆಗೆ ಆರ್ಥಿಕ ಪುನಶ್ಚೇತನವನ್ನೇ ದುರ್ಬಲಗೊಳಿಸುವುದರಿಂದಾಗಿ ಸರಕಾರದ ಆದಾಯಗಳ ಪುನಶ್ಚೇತನಕ್ಕೇ ಏಟು ಬೀಳುತ್ತದೆ. ಸರಕಾರ ತನ್ನ ಆದಾಯಗಳನ್ನು ತುರ್ತಾಗಿ ಹೆಚ್ಚಿಸಿಕೊಳ್ಳಬೇಕು ಎಂದಿದ್ದರೆ, ಅದು ಅತಿಶ್ರೀಮಂತರ ಮೇಲೆ 2ಶೇ. ಸಂಪತ್ತು ತೆರಿಗೆ ಮತ್ತು ಅವರು ತಮ್ಮ ವಾರಸುದಾರರಿಗೆ ಕೊಡಮಾಡುವ ಸಂಪತ್ತುಗಳ ಮೇಲೆ 33ಶೇ. ವಾರಸುದಾರಿಕೆ ತೆರಿಗೆಯನ್ನು ಹಾಕಬೇಕಾಗಿತ್ತು. ಇದರಿಂದ, ಜನಗಳಿಂದ ಹಣವನ್ನು ಕಿತ್ತುಕೊಳ್ಳದೆಯೇ ಸರಕಾರ ತನ್ನ ಆದಾಯಗಳನ್ನು ಹೆಚ್ಚಿಸಿಕೊಳ್ಳುವ ಉದ್ದೇಶವನ್ನು ಈಡೇರಿಸಿಕೊಳ್ಳಬಹುದಿತ್ತು.

ಸರಕಾರದಿಂದ ಜನಗಳಿಗೆ ಪರಿಹಾರ ಒದಗಿಸಲು ಅಗತ್ಯ ಮತ್ತು ತಕ್ಷಣದ ಕ್ರಮಗಳನ್ನು ಪಡೆಯಲು ಈಗ ನಡೆಯುತ್ತಿರುವ ಹೋರಾಟದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಅಬಕಾರಿ ಮತ್ತು ಕೇಂದ್ರೀಯ ತೆರಿಗೆಗಳನ್ನು ಹಿಂದಕ್ಕೆ ಪಡೆಯಬೇಕು ಎನ್ನುವ ಬೇಡಿಕೆ ಒಂದು ಮಹತ್ವದ ಸ್ಥಾನ ಪಡೆಯಲೇ ಬೇಕಾಗಿದೆ.




ಮಾರ್ಚ್ 14 ರಂದು ಅಬಕಾರಿ ಸುಂಕ ಮತ್ತು ರಸ್ತೆ ಸೆಸ್‌ಗಳಲ್ಲಿ ಲೀಟರಿಗೆ 3 ರೂ.ನಷ್ಟು ಏರಿಕೆಯಾಗಿತ್ತು.

ಮೇ 5ರಂದು ಲೀಟರಿಗೆ 10ರೂ. ಹೆಚ್ಚಳ, ಮತ್ತು ಡೀಸೆಲ್‌ನಲ್ಲಿ 13 ರೂ. ಹೆಚ್ಚಳ ಉಂಟಾಯಿತು.

ಎರಡನೇ ಪರಿಷ್ಕರಣೆಯ ನಂತರ ಸರಕಾರ ಪೆಟ್ರೋಲಿನ ಮೂಲ ಬೆಲೆಯ ಮೇಲೆ 260ಶೇ. ಮತ್ತು ಡೀಸೆಲ್ ಮೂಲಬೆಲೆಯ ಮೇಲೆ 256ಶೇ. ತೆರಿಗೆಗಳಾಗಿ ಸಂಗ್ರಹಿಸುತ್ತಿದೆ. ಕೇಂದ್ರೀಯ ತೆರಿಗೆಗಳಲ್ಲಿನ ಈ ಏರಿಕೆ ಅಂತರ್ರಾಷ್ಟ್ರೀಯವಾಗಿ ಕಚ್ಚಾ ತೈಲದ ಬೆಲೆ ಅತ್ಯಂತ ಕೆಳಕ್ಕೆ ಇಳಿದಿದ್ದ ಸಂದರ್ಭದಲ್ಲಿ ಆಗಿದೆ ಎಂಬುದು ಗಮನಾರ್ಹ

ಮಾರ್ಚ್ 14ರಂದು ಕೇಂದ್ರೀಯ ಸುಂಕಗಳಲ್ಲಿ ಲೀಟರಿಗೆ 3ರೂ.ನಷ್ಟು ಏರಿಕೆ ಮಾಡಿದಾಗಿನ
ವ್ಯಂಗ್ಯಚಿತ್ರ ಕೃಪೆ: ಸಂದೀಪ ಅಧ್ವರ್ಯು,
ಟೈಂಸ್ ಆಫ್ ಇಂಡಿಯ



ಇಂಧನ ಬೆಲೆಗಳು ಮತ್ತು ಕೊರೊನಾ ಕೇಸುಗಳು
ವ್ಯಂಗ್ಯಚಿತ್ರ ಕೃಪೆ:
ಸತೀಶ ಆಚಾರ್ಯ


ತ್ರಿಪುರ್


ತೆಲಂಗಾಣ



ಕೊರೊನ–ಲಾಕ್‌ಡೌನ್ ಸಂತ್ರಸ್ತರಿಗೆ ತಕ್ಷಣ ಪರಿಹಾರಗಳು ಜೂನ್16 ರ ಪ್ರತಿಭಟನೆಯಲ್ಲಿ ಲಕ್ಷಾಂತರ ಜನಗಳ ಆಗ್ರಹ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆಗೆ ಓಗೊಟ್ಟು ಜೂನ್ 16ರಂದು ದೇಶಾದ್ಯಂತ ನಡೆದ ರಾಷ್ಟ್ರೀಯ ಪ್ರತಿಭಟನೆಯಲ್ಲಿ ಲಕ್ಷಾಂತರ ಜನರು ಭಾಗವಹಿಸಿದ್ದಾರೆ. ಸಿಪಿಐ(ಎಂ) ಕಾರ್ಯಕರ್ತರು ಮತ್ತು ಬೆಂಬಲಿಗರು ತಂತಮ್ಮ ಪ್ರದೇಶದಲ್ಲಿರುವ ನಿಬಂಧನೆಗಳು ಮತ್ತು ನಿರ್ಬಂಧಗಳನ್ನು ಚಾಚೂ ತಪ್ಪದೆ ಪಾಲಿಸುತ್ತಲೇ ಪ್ರತಿಭಟನೆ ನಡೆಸಿದರು. ಆರು ತಿಂಗಳ ವರೆಗೆ 7500 ರೂ. ಮಾಸಿಕ ನಗದು ವರ್ಗಾವಣೆ, ಪ್ರತಿಯೊಬ್ಬರಿಗೆ ತಿಂಗಳಿಗೆ 10 ಕೆ.ಜಿ. ಆಹಾರಧಾನ್ಯಗಳ ಉಚಿತ ವಿತರಣೆ, ಮನರೇಗದ ಅಡಿಯಲ್ಲಿ ಕನಿಷ್ಟ 200 ದಿನಗಳ ಕೆಲಸ ಮತ್ತು ನಗರಗಳಿಗೂ ಉದ್ಯೋಗ ಖಾತ್ರಿ ಯೋಜನೆಯ ವಿಸ್ತರಣೆ ಹಾಗೂ ರಾಷ್ಟ್ರೀಯ ಆಸ್ತಿಗಳ ಲೂಟಿಯನ್ನು ಮತ್ತು ಕಾರ್ಮಿಕ ಕಾನೂನುಗಳ ರದ್ಧತಿಯನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿ ಈ ಪ್ರತಿಭಟನಾ ದಿನಾಚರಣೆ ನಡೆದಿದೆ.

ದಿಲ್ಲಿಯಲ್ಲಿ ಪಕ್ಷದ ಕೇಂದ್ರ ಸಮಿತಿ ಕಚೇರಿ ಮುಂದೆ ಯೆಚುರಿಯವರು ಇದಕ್ಕೆ ನೇತೃತ್ವ ನೀಡಿದರು. ಅವರ ಜತೆಗೆ ಪಕ್ಷದ ಹಿರಿಯ ಮುಖಂಡರಾದ ಪ್ರಕಾಶ ಕಾರಟ್, ಬೃಂದಾ ಕಾರಟ್, ನೀಲೋತ್ಪಲ ಬಸು, ತಪನ್ ಸೆನ್ ಮತ್ತಿತರ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದರು.

ಕೇರಳದಲ್ಲಿ ಸುಮಾರು 1.5ಲಕ್ಷ ಕೇಂದ್ರಗಳಲ್ಲಿ 10ಲಕ್ಷಕ್ಕೂ ಹೆಚ್ಚು ಮಂದಿ ಪ್ರತಿಭಟನೆಗಳಲ್ಲಿ ಭಾಗವಹಿಸಿದರು.

ಪಶ್ಚಿಮ ಬಂಗಾಲದಲ್ಲಿ ರಾಜ್ಯ ಸಿಪಿಯ9ಎಂ) ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ ಮತಿತ್ತರ ೦50 ಮುಖಂಡರು ಮತ್ತು ಕಾರ್ಯಕರ್ತರನ್ನು ಪ್ರತಿಭಟನೆ ನಡೆಸಿದ್ದಕ್ಕಾಗಿ ಬಂಧಿಸಲಾಯಿತು. ತ್ರಿಪುರಾದಲ್ಲಿ ಪೋಲಿಸರ ಅಡಚಣೆ ಮತ್ತು ಬಿಜೆಪಿ ಗೂಂಡಾಗಳ ದಾಳಿಗಳನ್ನೂ ಲೆಕ್ಕಿಸದೆ ಪ್ರತಿಭಟನೆಗಳು ನಡೆದವು. ಎಲ್ಲ ರಾಜ್ಯಗಳಲ್ಲೂ ಪ್ರತಿಭಟನೆಗಳು ನಡೆದವು. ಕರ್ನಾಟಕಜ 23 ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿವೆ.


ಪಶ್ಚಿಮ ಬಂಗಾಳ್

"ಜನಗಳಿಗೆ ತಿನ್ನಲು ಆಹಾರವಿಲ್ಲ, ಹಸಿದಿದ್ದಾರೆ. ಹಸಿವಿನಿಂದ ಸಾವುಗಳು ಸಂಭವಿಸುತ್ತಿರುವಾಗ ಸ್ವಾವಲಂಬೀ ಭಾರತ ಎಂಬುದು ಸಾಧ್ಯವಿಲ್ಲ, ನೀವು (ಮೋದಿ ಸರ್ಕಾರ) ಸಾರ್ವಜನಿಕ ವಲಯವನ್ನು ಖಾಸಗೀಕರಿಸಿ ದೇಶದ ಆಸ್ತಿಗಳನ್ನು ಮಾರಿಕೊಳ್ಳುತ್ತಿದ್ದೀರಿ, ಕಾರ್ಮಿಕ ಕಾನೂನುಗಳನ್ನು ರದ್ದು ಮಾಡುತ್ತಿದ್ದೀರಿ, ಇದು ಭಾರತವನ್ನು ಸ್ವಾವಲಂಬಿಯಾಗಿಸುವುದಿಲ್ಲ" ಎಂದು ಸೀತಾರಾಂ ಯೆಚುರಿ ಈ ಸಂದರ್ಭದಲ್ಲಿ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತ ಹೇಳಿದರು..

ಸತತವಾಗಿ ಪೆಟ್ರೋಲ್, ಡೀಸೆಲ್ ಬೆಲೆಗಳನ್ನು ಏರಿಸುತ್ತಿರುವ ಬಗ್ಗೆ ಟಿಪ್ಪಣಿ ಮಾಡುತ್ತ ಅವರು, ಕಳೆದ ಮೂರು ತಿಂಗಳಲ್ಲಿ 15 ಕೋಟಿಗಿಂತಲೂ ಹೆಚ್ಚು ಮಂದಿ ಉದ್ಯೋಗ ಕಳಕೊಂಡಿದ್ದಾರೆ, ಅವರಿಗೆ ಬದುಕಲು ಸಂಪನ್ಮೂಲಗಳನ್ನು ಒದಗಿಸುವ ಬದಲು ಸರಕಾರ ತನ್ನ ಆದಾಯಗಳನ್ನು ಹೆಚ್ಚಿಸಿಕೊಳ್ಳುವದರ ಮೇಲೆಯೇ ಗಮನ ಕೇಂದ್ರೀಕರಿಸಿದೆ, ಅದಕ್ಕಾಗಿ ತೆರಿಗೆಗಳನ್ನು ಹೆಚ್ಚಿಸುತ್ತಿದೆ. ಇದಕ್ಕಿಂತ ದೊಡ್ಡ ಕ್ರಿಮಿನಲ್ ಕೃತ್ಯ ಬೇರೆ ಇಲ್ಲ ಎಂದು ಅವರು ಕಟುವಾಗಿ ಟೀಕಿಸಿದರು.

ಅಯೋಜಿತವಾಗಿ, ಏಕಪಕ್ಷೀಯವಾಗಿ ಲಾಕ್‌ಡೌನನ್ನು ಹಾಕಿದ ಮೋದಿ ಸರಕಾರ ಈ ಅವಧಿಯನ್ನು ಮಹಾಮಾರಿಯನ್ನು ಎದುರಿಸಲು ಬೇಕಾಗುವ ಆರೋಗ್ಯ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳಲೂ ಬಳಸಲಿಲ್ಲ, ಅತ್ತ ಲಾಕ್‌ಡೌನಿನ ದುಷ್ಪರಿಣಾಮಗಳಿಂದಾಗಿ ಕಂಗಾಲಾದ ಜನಗಳಿಗೆ ಪರಿಹಾರವನ್ನೂ ಒದಗಿಸಲಿಲ್ಲ. ಈಗ ಅಷ್ಟೇ ಅಯೋಜಿತವಾಗಿ ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸುತ್ತ ಜನಗಳನ್ನು ಮಹಾಮಾರಿಯ ಎದುರು ಅವರ ಪಾಡಿಗೆ ಬಿಟ್ಟು ತೆಪ್ಪಗಾಗುವಂತೆ ಕಾಣುತ್ತಿದೆ, ಎಲ್ಲ ಹೊಣೆಗಳನ್ನೂ ರಾಜ್ಯ ಸರಕಾರಗಳ ಹೆಗಲಿಗೆ ದಾಟಿಸಿದೆ. ಸಾಲದ್ದಕ್ಕೆ, ತಾನು ಮಾತ್ರ ಕೋಮು ಧ್ರುವೀಕರಣದ ಮತ್ತು ನವ–ಉದಾರವಾದಿ ಆರ್ಥಿಕ ಧೋರಣೆಗಳನ್ನು ಅನುಸರಿಸುವ ತನ್ನ ಆಕ್ರಮಣಕಾರೀ ಅಜೆಂಡಾವನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸುವುದರಲ್ಲೇ ತೊಡಗಿದೆ.

ನಮ್ಮ ಜನಗಳ ಒಂದು ವಿಶಾಲ ವಿಭಾಗ ಜೀವನೋಪಾಯದ ಎಲ್ಲ ಸಾಧನಗಳನ್ನೂ ಕಳಕೊಂಡಿದೆ. ತಮ್ಮ ಮನೆಗಳಿಗೆ ಹಿಂದಿರುಗಲು ಬೀದಿಗಳಲ್ಲಿ ಸಾಗಿರುವ ಹಸಿದ ವಲಸೆ ಕಾರ್ಮಿಕರ ಹೃದಯವೇದಕ ಅನುಭವಗಳು ನಮ್ಮ ಜನಗಳ ಗಮನಾರ್ಹ ವಿಭಾಗಗಳು ಇಂದು ಎಷ್ಟೊಂದು ಹಸಿವಿನಿಂದ ಪೀಡಿತರಾಗಿದ್ದಾರೆ ಎಂಬುದನ್ನು ತೋರಿಸಿದೆ. ಇಂತಹ ಪರಿಸ್ಥಿತಿಗಳ ವಿರುದ್ದ ಪ್ರತಿಭಟಿಸಲೇ ಬೇಕಾಗಿದೆ ಎಂದು ಜೂನ್ 2ರಂದು ಸಭೆ ಸೇರಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಜೂನ್ 16ರಂದು ರಾಷ್ಟ್ರೀಯ ಬೇಡಿಕೆ ದಿನಾಚರಣೆ ನಡೆಸಬೇಕು ಎಂದು ಕರೆ ನೀಡಿತ್ತು.


ಒಡಿಶಾ


ಗುಜರಾತ್

ಕೊವಿಡ್ ಮಹಾಮಾರಿಯ ವಿರುದ್ಧ ಸಮರದ ಮರೆಯಲ್ಲಿ ಮೋದಿ ಸರಕಾರ ಅನುಸರಿಸುತ್ತಿರುವ ಕೇವಲ ದೊಡ್ಡ ಕಾರ್ಪೊರೇಟ್‌ಗಳು ಮತ್ತು ಬಂಡವಳಿಗರನ್ನು ಸಂತುಷ್ಟಗೊಳಿಸುವ ಧೋರಣೆಗಳನ್ನು ಜನಗಳು ಇನ್ನು ಮುಂದೆ ಮೌನವಾಗಿ ಸಹಿಸುವುದಿಲ್ಲ ಎಂಬ ಸಂಕೇತವನ್ನು ನೀಡಿರುವ ಈ ದೇಶವ್ಯಾಪಿ ಪ್ರತಿಭಟನೆ ದೇಶವನ್ನು ಆವರಿಸಿರುವ ಕರಿಮೋಡಗಳ ನಡುವೆ ಒಂದು ಆಶಾಕಿರಣವನ್ನು ಹೊಮ್ಮಿಸಿದೆ.

ಕೊರೊನಾ ನಿಯಂತ್ರಿಸುವಲ್ಲಿ ಮೋದಿ ಸರ್ಕಾರ ವಿಫಲ: ರಾಜ್ಯದಲ್ಲಿ ವ್ಯಾಪಕ ಪ್ರತಿಭಟನೆ

ಕರ್ನಾಟಕದಲ್ಲಿ ಕೊರೊನಾ ಸೋಂಕು ನಿಯಂತ್ರಿಸುವಲ್ಲಿ ವಿಫಲವಾಗಿರುವ ಮೋದಿ ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿ ರಾಷ್ಟ್ರವ್ಯಾಪಿ ನಡೆದ ಪ್ರತಿಭಟನೆಗೆ ಕರ್ನಾಟಕದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಒಟ್ಟು 23 ಜಿಲ್ಲೆಗಳ 60 ತಾಲೂಕುಗಳ 180 ಸ್ಥಳಗಳಲ್ಲಿ 5 ರಿಂದ 50 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ಪ್ರತಿಭಟನೆಗಳು ನಡೆದಿವೆ. ಹೆಚ್ಚಿನ ಪ್ರತಿಭಟನೆಗಳು ಡಿಸಿ, ತಾಲೂಕು, ಗ್ರಾಮ ಪಂಚಾಯತ್ ಕಚೇರಿಗಳ ಎದುರು ನಡೆದವು. ನಗರಗಳಲ್ಲಿ ಮುನಿಸಿಪಲ್/ಕಾರ್ಪೊರೇಶನ್ ಮತ್ತು ವಾರ್ಡ್ ಕಚೇರಿಗಳ ಮುಂದೆ ನಡೆದಿದೆ. ಇನ್ನೂ ಕೆಲವು ಕಡೆ ಜನರ ಗಮನ ಸೆಳೆಯಲು ಜನನಿಬಿಡ ಪ್ರದೇಶಗಳಲ್ಲಿ ನಡೆಸಲಾಗಿದೆ. ಎಲ್ಲ ಕಡೆ 5 ಪ್ರಮುಖ ಹಕ್ಕೊತ್ತಾಯಗಳ ಪೋಸ್ಟರ್, ಪ್ಲೇಕಾರ್ಡ್, ಬ್ಯಾನರ್ ಹಾಗೂ ಘೋಷಣೆಗಳು, ಹಾಡುಗಳು ಮುಂತಾದವುಗಳ ಜತೆಗೆ ಪ್ರತಿಭಟನೆಯನ್ನು ನಡೆಸಲಾಯಿತು.


ಬೆಂಗಳೂರು

ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಜಿಲ್ಲೆಗಳಲ್ಲಿ ಒಟ್ಟು 35 ಸ್ಥಳಗಳಲ್ಲಿ ನಡೆದಿದೆ. 22 ಬಿಬಿಎಂಪಿ ವಾರ್ಡ್ ಆಫೀಸು, 2 ಬಿಬಿಎಂಪಿ ಜಂಟಿ ಕಮಿಶನರ್ ಆಫೀಸು, ಬಿಬಿಎಂಪಿ ಹೆಡ್ ಆಫೀಸು, ಆನೇಕಲ್ ತಾಲೂಕು ಆಫೀಸು, 3 ಮುನಿಸಿಪಲ್ ಆಫೀಸು (ಆನೇಕಲ್ ತಾ.) ರಾಮನಗರ ಡಿಸಿ ಆಫೀಸು, 2 (ಆನೇಕಲ್ ತಾಲೂಕು, ರಾಮನಗರ) ಗ್ರಾ.ಪಂ. ಆಫೀಸುಗಳ ಮುಂದೆ ಪ್ರತಿಭಟನೆ ನಡೆದಿದೆ. ಬೆಂಗಳೂರಿನಲ್ಲಿರುವ ರಾಜ್ಯ ಕೇಂದ್ರ ಕಚೇರಿಯ ಎದುರು ಸಹ ಪ್ರತಿಭಟನೆಯನ್ನು ನಡೆಸಲಾಯಿತು.





ಶಂಕರ ಮಠ

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮೂರು ತಾಲೂಕುಗಳಲ್ಲಿ – ಬಾಗೇಪಲ್ಲಿ (20), ಗುಡಿಬಂಡೆ (7), ಗೌರಿಬಿದನೂರು (1) – ಒಟ್ಟು 28 ಸ್ಥಳಗಳಲ್ಲಿ ಪ್ರತಿಭಟನೆ ನಡೆದಿದೆ. ಬಾಗೇಪಲ್ಲಿಯಲ್ಲಿ 19 ಮತ್ತು ಗುಡಿಬಂಡೆಯಲ್ಲಿ 6 ಗ್ರಾಮಪಂಚಾಯಿತಿಗಳ ಮುಂದೆ ಪ್ರತಿಭಟನೆ ಆಗಿದೆ. ಮೂರು

ಪುಟ 16 ನೋಡಿ



ಕರೋನಾ ಫ್ರಂಟ್ ಲೈನ್ ವಾರಿಯರ್ಸ್ ಗಳ ನಿಜ ಕಥೆ-ವ್ಯಥೆ: ಭಾಗ-2

ಪ್ರಧಾನಿ ಅವರಿಂದ ಹಿಡಿದು ಸ್ಥಳೀಯ ಪುಡಾರಿಯ ವರೆಗೆ ಎಲ್ಲರೂ ಕರೋನಾ ಒಂದು ಯುದ್ಧ ಎಂದೂ, ಅದರ ಮುಂಚೂಣಿಯಲ್ಲಿರುವ ವೈದ್ಯಕೀಯ ಮತ್ತಿತರ ಸಿಬ್ಬಂದಿ, ಕರೋನಾ ವಿರುದ್ಧ ಹೋರಾಡುತ್ತಿರುವ ಯೋಧರೆಂದೂ ಹಾಡಿ ಹೊಗಳುತ್ತಾ ಬಂದಿದ್ದಾರೆ. ಅವರ ಮೇಲೆ ಮಾತುಗಳ ಹೂವುಗಳ ಮಳೆಗರೆಯುತ್ತಾ ಬಂದಿದ್ದಾರೆ. ಆದರೆ ಭಾವನಾತ್ಮಕವಾಗಿ ಮಾತಾಡುವ ನಾಯಕರು ಅವರಿಗೆ ಅಗತ್ಯ ಭೌತಿಕ ಬೆಂಬಲ ನೀಡಿದ್ದಾರೆಯೇ? ಈ ಕರೋನಾ ವಾರಿಯರ್ಸ್ ಗಳ ನಿಜವಾದ ಕಥೆಯೇನು? ವ್ಯಥೆಯೇನು? ಈ ವಾರಿಯರ್ಸ್ ಗಳು ಸರಿಯಾದ ವೇತನ ಇಲ್ಲದೆ, ಇದ್ದ ವೇತನ ಪಾವತಿಯಾಗದೆ, ಸೂಕ್ತ ರಕ್ಷಣಾ ಉಪಕರಣಗಳಿಲ್ಲದೆ, ಕನಿಷ್ಟ ದೈಹಿಕ ರಕ್ಷಣೆಯಿಲ್ಲದೆ ಸಾಯುತ್ತಿರುವುದು, ಸತ್ತಾಗ ವಿಮೆ-ಪರಿಹಾರ ಸಹ ಒದಗಿಸದೆ ಇರುವುದರತ್ತ ಗಮನ ಸೆಳೆಯುವ ಸರಣಿ ಲೇಖನ. ಈ ವಾರಿಯರ್ಸ್ ಗಳ ಗಮನಾರ್ಹ ಭಾಗವಾದ ಸ್ಕೀಂ ಮತ್ತಿತರ ಕಾರ್ಮಿಕರ ನಾಯಕರಾದ ಮತ್ತು ರಾಜ್ಯ ಸಿಐಟಿಯು ಅಧ್ಯಕ್ಷರಾದ ಎಸ್.ವರಲಕ್ಷ್ಮಿ ಅವರಿಂದ.

ಈ ಎರಡನೇ ಮತ್ತು ಕೊನೆಯ ಭಾಗದಲ್ಲಿ ವಾರಿಯರ್ಸ್ ಗಳಾದ ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಬಿಸಿಊ, 108 ಅಂಬುಲೆನ್ಸ್ ಸಿಬ್ಬಂದಿ, ನರ್ಸ್, ಡಾಕ್ಟರುಗಳ ಕೆಲಸದ ಮತ್ತು ಸೌಲಭ್ಯಗಳ ಪರಿಸ್ಥಿತಿಗಳ ಕುರಿತು ಇದೆ. ಅಲ್ಲದೆ ಆಹಾರ, ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಾಂವಿಧಾನಿಕ ಆಶಯಗಳನ್ನು ಸಾಧಿಸಲು ಶಾಶ್ವತ ಸಿಬ್ಬಂದಿ ಮತ್ತು ವ್ಯವಸ್ಥೆ ಯಾಕೆ ಇಲ್ಲ? ಇದನ್ನು ICDS, NHRM ಮುಂತಾದ 'ತಾತ್ಕಾಲಿಕ ಯೋಜನೆ'ಗಳ ರೂಪದಲ್ಲಿ ಯಾಕೆ ಹಮ್ಮಿಕೊಳ್ಳಬೇಕು? ಎಂಬ ಪ್ರಶ್ನೆಯನ್ನು ಪ್ರತ್ಯೇಕ ಬಾಕ್ಸಿನ ಮೂಲಕ ಮುಂದಿಡುತ್ತದೆ.

ಎಸ್. ವರಲಕ್ಷ್ಮಿ



ಎಲ್ಲೆಡೆ ಕರೋನಾ ಆವರಿಸಿದೆ. ಇದನ್ನು ತಡೆಗಟ್ಟಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹರಸಾಹಸ ಪಡುತ್ತಿವೆ. ಆದರೆ ಒಂದು ಆಶ್ಚರ್ಯದ ಸಂಗತಿ ಏನೆಂದರೆ ಯಾರೆಲ್ಲಾ ಹೆಚ್ಚಿನ ಸವಲತ್ತುಗಳನ್ನು ಪಡೆದಿದ್ದಾರೋ, ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುತ್ತಿಲ್ಲ ಮತ್ತೆ ಕೆಲಸ ಯಾರು ಮಾಡುತ್ತಿದ್ದಾರೆ?

ಕರ್ನಾಟಕ ರಾಜ್ಯ ಬಹುದೊಡ್ಡ (ಸುಮಾರು 74 ಸಾವಿರ ಚದರ ಮೈಲಿ)ಭೌಗೋಳಿಕ ವಿಸ್ತೀರ್ಣತೆಯನ್ನು ಪಡೆದಿದೆ. ಕನ್ನಡ, ತುಳು, ಕೊಡುವ, ಕೊಂಕಣಿ, ಬ್ಯಾರಿ, ತಮಿಳು, ಹಿಂದಿ, ಉರ್ದು ಮತ್ತು ಮರಾಠಿ ಭಾಷೆಗಳನ್ನಾಡುವ ಜನರು ಇದ್ದಾರೆ. ಇವರೆಲ್ಲರಿಗೆ ಇವರ ಭಾಷೆಯಲ್ಲಿ ಮಾತಾನಾಡಬೇಕು. ಮಾಹಿತಿ ಸಂಗ್ರಹಿಸಬೇಕು. ಗರ್ಭಿಣಿ-ಬಾಣಂತಿಯರಿಗೆ ಮತ್ತು ಮಕ್ಕಳಿಗೆ ಈ ಸಂದರ್ಭದಲ್ಲಿ ಪೌಷ್ಟಿಕತೆಗೆ ಆಹಾರ ತಲುಪಿಸುವ ಹಾಗೆ ಎಚ್ಚರ ವಹಿಸಬೇಕು. ರಾಜ್ಯದಲ್ಲಿ 27,481 ಗ್ರಾಮಗಳಿಗೆ, ಎಲ್ಲ ಹೋಬಳಿ ಮುನ್ಸಿಪಲ್ ಮತ್ತು ಕಾರ್ಪೋರೇಷನ್ ವಾರ್ಡ್‌ಗಳು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿರುವ ಎಲ್ಲ ಜನರನ್ನೂ ತಲುಪಬೇಕು. ಇಷ್ಟು ಜನವಸತಿ ಪ್ರದೇಶಗಳಲ್ಲಿರುವ ಜನರನ್ನು ಮತ್ತು ಸುಮಾರು 50 ಲಕ್ಷ ಫಲಾನುಭವಿಗಳನ್ನು ನೋಡಿಕೊಳ್ಳುವ ಕೆಲಸಕ್ಕೆ ಸರ್ಕಾರ ಒಂದು ರೂಪಾಯಿಯನ್ನು ಹೆಚ್ಚುವರಿಯಾಗಿ ಖರ್ಚುಮಾಡದೆ ಕೇವಲ ಗೌರವ ಧನದಲ್ಲಿ ದುಡಿಯುವ ಅಂಗನವಾಡಿ ಕಾರ್ಯಕರ್ತೆರಿಂದ ಈ ಕೆಲಸವನ್ನು ಉಚಿತವಾಗಿ ಮಾಡಿಸುತ್ತಿದೆ. ಉಚಿತವಾಗಿ ಅಂತ ಹೇಳಿದ್ದು ಏಕೆಂದರೆ ಕರೋನಾವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಲಾಗಿದೆ. ಅದನ್ನು ತಡೆಯುವ ಕೆಲಸ ಮಾತ್ರ ಪುಗಸಟ್ಟೆ.

ಆಶಾ ಕಾರ್ಯಕರ್ತೆಯರು

ಕುಂದಾಪುರದ ಶೀಲಾ ಅರಳು ಹುರಿದಂತೆ ಉತ್ಸಾಹ ದಿಂದ ಮಾತಾನಾಡುತ್ತಾ ಹೋದರು. "ಮೇಡಮ್ ನಾನಿರುವ ಗ್ರಾಮದಲ್ಲಿ 1000 ಜನಸಂಖ್ಯೆಯಲ್ಲಿ. ಇಬ್ಬರು ಹೊರದೇಶದವರು, 130 ಜನ ಹೊರಗಿನ ಜಿಲ್ಲೆಯವರು. ಒಟ್ಟು ಉಡುಪಿಯಲ್ಲಿ ಹೊರದೇಶದವರು 1100 ಜನ" ಎಂದು ಹೇಳಿದರು. ನಂತರ ಅವರ ಧ್ವನಿ ಸ್ವಲ್ಪ ಕುಗ್ಗಿತು ಇವರು ಹೋಗುವಾಗ 7 ರಿಜಿಸ್ಟರ್‌ಗಳು, ಬಿ.ಪಿ ಚೆಕ್ ಮಾಡುವ ಮಶಿನ್ (ಇದು ಕೆಲವೆಡೆ ಮಾತ್ರ ಇದೆ) ಓ.ಆರ್.ಎಸ್ ಪ್ಯಾಕೆಟ್ಸ್ ಮಾತ್ರೆಗಳು, ಕುಡಿಯುವ ನೀರು ಮತ್ತು ಊಟದ ಡಬ್ಬಿ ಇಷ್ಟು ಹಿಡಿದು ಕೊಂಡು ಒಬ್ಬ ಮಹಿಳೆ ಒಂದು ದಿನಕ್ಕೆ ಕನಿಷ್ಠ 3-5 ಕಿಲೋ ಮೀಟರ್ ನಡೆದು ಕೆಲಸ ಮಾಡಬೇಕು.

ರಾಧಾಗೆ ಪೋನ್ ಮಾಡಿದಾಗ ಅವರು ಹೇಳಿದರು "ನಮ್ಮ ಕೆಲಸಕ್ಕೆ ಸಮಯದ ಮಿತಿಯೇ ಇಲ್ಲ. ಪ್ರತಿದಿನ ಸರ್ವೆ, ಪಂಚಾಯ್ತಿ ಕೇಂದ್ರಕ್ಕೆ ಯಾವುದೇ ಮೇಲಾಧಿಕಾರಿ ಬರಲಿ ಅಥವಾ ಸಚಿವರು, ಶಾಸಕರು ಬರಲಿ (ಇವರಿಬ್ಬರೂ ಗ್ರಾಮಗಳಿಗೆ ಬರುವುದು ಅಪರೂಪ) ಸುದ್ದಿ ಬಂದು ಅರ್ಧ ಗಂಟೆಯಲ್ಲಿ ಇವರು ಪಂಚಾಯ್ತಿ ಕೇಂದ್ರದಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಿರಬೇಕು. ಮಾಹಿತಿಗಳ ಜೆರಾಕ್ಸ್ ಕೊಡಬೇಕು. ಮಾತ್ರವಲ್ಲ, ಕರೋನಾ ಜಾಗ್ರತೆ ಮೂಡಿಸಲು ನಮ್ಮ ರಾಧ 16 ದಿನಗಳ ಕಾಲ ಆಟೋದಲ್ಲಿ ಅನೌನ್ಸ್‌ಮೆಂಟ್ ಮಾಡಿದ್ದಾರೆ. ಇದಕ್ಕೆ ಯಾವುದೇ ಹೆಚ್ಚುವರಿ ಸಂಭಾವನೆ ಇಲ್ಲ (ಚುನಾವಣಾ ಸಮಯದಲ್ಲಿ ಮಾಡಿದರೆ) ಊಟಾ ತಿಂಡಿ ಕೂಡಾ ಇಲ್ಲದ ಪರಿಸ್ಥಿತಿ.

ಶಿಡ್ಲಘಟ್ಟದ ಕಲಾಗೆ ಮಾತನಾಡಿದಾಗ 'ಮಾಸ್ಕ್ ಕೊಟ್ಟಿದ್ದಾರಾ' ಅಂತ ಏಪ್ರಿಲ್ 7ಕ್ಕೆ ಕೇಳಿದ್ದಕ್ಕೆ ಅವರು ಹೇಳಿದ್ದು 'ಇವತ್ತು ಕೊಟ್ಟಿದ್ದಾರ'ಅಂತಾ. 'ಯಾಕೆ ಇಷ್ಟು ದಿನ ಕೊಟ್ಟಿಲ್ಲವ' ಅಂತ ಕೇಳಿದ್ದಕ್ಕೆ 'ಮೇಡಮ್, ನಾನು ಮೂಲತಃ ಟೈಲರ್. ನಾನೇ 500 ಮಾಸ್ಕ್ ಗಳನ್ನು ಹೊಲೆದು ಜನರಿಗೆ ಹಂಚಿದೆ' ಎಂದರು.

ಕರೋನಾ ಬಂದ ನಂತರ ಊರಿನ ಸೆಕ್ಯುರಿಟಿ ಕೆಲಸ, ಅದರೊಟ್ಟಿಗೆ ಇನ್ನೊಂದು ಕೆಲಸ. ಅದು ಏನು ಗೊತ್ತಾ? ಯಾರು ಹೆಚ್ಚು ಕೆಮ್ಮುತ್ತಾರೋ ಅವರ ಬಳೀ ಕಫವನ್ನು ಡಬ್ಬಿಯಲ್ಲಿ ಸಂಗ್ರಹಿಸಿ ತನ್ನ ಬ್ಯಾಗಿನಲ್ಲಿಟು ಕೊಂಡು, ಪಿಎಚ್‌ಸಿ ಗಳಿಗೆ ಕೊಡಬೇಕು. ಸಾವಿರಾರು ರೂಪಾಯಿಗಳನ್ನು ಕೊಟ್ಟು ಖಾಸಗಿ ಪ್ರಯೋಗಾಯಗಳಿಗೆ ಹೋದರೆ ಅಲ್ಲಿ ಅವರು ನಮ್ಮ ಮೂತ್ರ, ಕಫದ ಡಬ್ಬಿಗಳನ್ನು ರೋಗಿಗಳೇ ನಿಗದಿತ ಸ್ಥಳದಲ್ಲಿಡಬೇಕು ಆದರೆ ಈ ಆಶಾ ತಾಯಂದಿರು ಆ ಡಬ್ಬಿಗಳನ್ನು ತಮ್ಮ ವ್ಯಾನಿಟಿ ಬ್ಯಾಗ್ ನಲ್ಲಿಟ್ಟುಕೊಂಡು ಹೋಗುತ್ತಾರೆ!!

ಇನ್ನೂ ಕರೋನಾ ಕಾರ್ಯಕ್ರಮದಲ್ಲಿ ಪೋಲಿಸ್ ಚೆಕ್ ಪೋಸ್ಟ್‌ಗಳಲ್ಲಿ ಪೋಲಿಸ್‌ರ ಕೆಲಸವನ್ನು ಇವರು ಮಾಡಬೇಕು. ಪ್ರತಿಯೊಂದು ಮನೆಗೆ ದಿನ ಬಿಟ್ಟು ದಿನಾ ಹೋಗಬೇಕು ಆಗ ಜನರು ಬೇಸರವಾಗಿ 'ಎಷ್ಟು ಭಾರಿ ನಿಮಗೆ ಉತ್ತರಿಸಬೇಕು' ಎಂದು ಸಿಡಿಮಿಡಿ ಮಾಡುವುದು, 'ಅಯ್ಯೋ! ಆಶಾ ಕಾರ್ಯಕತೆನಾ, ನಂತರ ಬನ್ನಿ' ಎಂದು ಹೇಳಿಸಿ ಕೊಳ್ಳುವುದು ಸಾಮಾನ್ಯವಾಗಿ ಬಿಟ್ಟದೆ.

ಇಷ್ಟಕ್ಕೂ ಯಾರು ಈ 'ಆಶಾ'ಯಾರು ಅಂತೀರಾ?

ಪ್ರಜಾಪ್ರಭುತ್ವ ಚಳುವಳಿಗಳ ಭಾಗವಾಗಿ 'ಮನೆ ಮನೆಗೆ ಆರೋಗ್ಯ' ಎನ್ನುವ ಘೋಷಣೆಯಲ್ಲಿ ಬಂದಿದ್ದೇ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ (NRHM). ಆ ಮಿಷನ್ ಮೂಲಕ ಕೆಲವು ಸೇವೆಗಳನ್ನು ಜನರಿಗೆ ಕೊಡುತ್ತಿದ್ದಾರೆ.ಆ ಸೇವೆಯನ್ನು ಜನರಿಗೆ ತಲುಪಿಸುವವರೇ ಆಶಾ ಕಾರ್ಯಕರ್ತರು. ರಾಜ್ಯ ದಲ್ಲಿ 41,723 ಆಶಾ ಕಾರ್ಯಕರ್ತರಿದ್ದು ರಾಜ್ಯದ 6 ಕೋಟಿ ಜನರ ಸೇವೆ ಮಾಡುತ್ತಿದ್ದಾರೆ. ಕರೋನಾ ಸಂದರ್ಭದಲ್ಲಿ ಹೆಚ್ಚು ಜನರಿಂದ ಹಲ್ಲೆಗೆ ಒಳಗಾಗುವವರು ಇವರೇ!

ಇಷ್ಟೆಲ್ಲಾ ಸೇವೆ ಮಾಡುತ್ತಿದ್ದರೂ ಇವರಿಗೆ ಸ್ಥಳೀಯವಾಗಿ ಓಡಾಡಲು TA ಇಲ್ಲ. ಎಷ್ಟು ಘಂಟೆ ದುಡಿದರೂ DA ಇಲ್ಲ. ಇವರಿಗೆ ಸಂಬಳ/ಗೌರವ ಧನವೂ ಇಲ್ಲ. ಮತ್ತೇನು? ಇನ್ಸಂಟೀವ್, ಅಂದರೆ ತುಂಡು ಕೆಲಸಕ್ಕೆ ತುಂಡು ಹಣ, ಪೀಸ್ ರೇಟ್! ಅದು ಎಷ್ಟು ಗೊತ್ತಾ? ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡು ಸೇರಿ 6000 ಮಾತ್ರ. ತಿಂಗಳಿಗೆ ಕೇಂದ್ರ ಸರ್ಕಾರ ರಾಷ್ಟ್ರೀಯ ಮತ್ತು ರಾಜ್ಯದಿಂದ ಒಂದು ಬಾರಿಗೆ 3000 ರೂ ಕೊಡಲಾಗಿದೆ. ಇವರ ಪ್ರಮುಖ ಬೇಡಿಕೆ ಕನಿಷ್ಠ ವೇತನ. ತಿಂಗಳ ಸಂಬಳ ಕೇಳಿದರೆ ಸರ್ಕಾರ ಹೇಳೊದು 'ಇದು ಕೇಂದ್ರ ಸರ್ಕಾರದ ತೀರ್ಮಾನ. ನಿಮ್ಮನ್ನು ಇನ್ಸಂಟೀವ್ ಆಧಾರದಲ್ಲಿಯೇ ತೆಗೆದು ಕೊಂಡಿದ್ದು. ಇಷ್ಟವಿಲ್ಲದಿದ್ದರೆ ಕೆಲಸ ಬಿಟ್ಟು ಹೋಗಿ' ಅಂತ. ಆದರೆ ಕರೋನ ತಡೆಗಟ್ಟುವ ಎಲ್ಲಾ ತರಹದ ಕೆಲಸಗಳಿಗೆ ಇಂದು ಇದೇ 'ಆಶಾ'ಗಳೆ ಬೇಕಾಯ್ತು. ಅದೂ ಮಾರ್ಚ್ 11 ರಿಂದ ಸತತವಾಗಿ.

'ಆರೋಗ್ಯದ ಹಕ್ಕನ್ನು ಬದುಕಿನ ಹಕ್ಕಿನಿಂದ ಬೇರ್ಪಡಿಸಲಾಗದು' ಎಂಬುದು ಮೂಲ ಕಣ್ಣೋಟ. ಆದ್ದರಿಂದ ಸರ್ಕಾರ ಇಂದು ಬಂದ ಕರೋನಾ ದಿಂದ ಜನರನ್ನು ಕಾಪಾಡುವ ಮುಖ್ಯ ಜವಾಬ್ದಾರಿ ತನ್ನದು ಎಂದು ಪ್ರಭುತ್ವಗಳು ಹೇಳುತ್ತಿವೆ. ಆರೋಗ್ಯ ಇಲಾಖೆಯಡಿಯಲ್ಲಿ ಕೇಂದ್ರ ಸರ್ಕಾರದ ಯೋಜನೆಯಾದ NRHM ಯೋಜನೆಯಲ್ಲಿ ಕಿರಿಯ ಆರೋಗ್ಯ ಸಹಾಯಕಿಯರಾಗಿ ಸುಮಾರು 3 ಸಾವಿರ ಮಹಿಳೆಯರು ದುಡಿಯುತ್ತಿದ್ದಾರೆ. ಕರೋನಾ ನ ತಡೆಗಟ್ಟಲು ನಿಯಮದಂತೆ 5 ಸಾವಿರ ಜನಸಂಖ್ಯೆಗೆ ಒಬ್ಬರು ಇರಬೇಕು. ಆದರೆ ಇಂದು 5 ರಿಂದ 10 ಸಾವಿರ ಜನರಿಗೆ ಒಬ್ಬರೇ ದುಡಿಯುವ ಸ್ಥಿತಿಯಿದೆ. ದಿನದ 24 ಗಂಟೆಯೂ ಇವರು ಕಣ್ಗಾವಾಲಾಗಿರಬೇಕು. ಇವರು ಮುಖ್ಯವಾಗಿ ಗರ್ಭಿಣಿ-ಬಾಣಂತಿಯರಿಗೆ ಗಮನ ಕೊಡಬೇಕು. ಪ್ರತಿನಿತ್ಯ ಬೆಳಿಗ್ಗೆ 9ರಿಂದ 4-30 ತನಕ ಕ್ಷೇತ್ರ ಕಾರ್ಯ ನಡೆಸಿ ನಂತರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿರಬೇಕು. ರಾತ್ರಿ ಹಗಲಿನ ವ್ಯತ್ಯಾಸವಿಲ್ಲ, ಪ್ರಾಥಮಿಕ ಆರೋಗ್ಯ ಕೇಂದ್ರಗಳ (PHC) ಬಳಿಯೇ ಉಳಿಯಲು ಕೆಲವರಿಗೆ ವಸತಿಗೃಹಗಳನ್ನು ಕೊಡಲಾಗಿದೆ. ಆದರೆ ಆ ವಸತಿಗೃಹಗಳಲ್ಲಿ ನೀರೇ ಬರುವುದಿಲ್ಲ, ಸ್ವಚ್ಛತೆ ಇಲ್ಲದಿರುವ ಕಾರಣ ಅಲ್ಲಿ ಭಯದಲ್ಲಿಯೇ ಉಳಿಯಬೇಕಾಗಿದೆ, ಇವರು ನೇರವಾಗಿ ಸೋಂಕು ಹರಡದಂತೆ ಮುಂಜಾಗ್ರತಾ ಕ್ರಮಗಳ ಅರಿವು ಮೂಡಿಸುವ ಕೆಲಸಗಳು,ಕೆಲವಡೆ ಕ್ವಾರಂಟೈನ್ ಗೆ ಒಳಪಡಿಸುವ ಕೆಲಸಗಳನ್ನು ಮಾಡಬೇಕು. ಇಷ್ಟೆಲ್ಲಾ ದುಡಿದರೂ ಇವರು ಒಂದು ವರ್ಷದ ಗುತ್ತಿಗೆಯ ಮೇಲೇ ಆಯ್ಕೆ ಮಾಡಿ, ಇವರಿಗೆ 11500 ರೂ. ಮಾತ್ರ .P.F ಹೋಗಿ 10500

ಪುಟ 10 ನೋಡಿ



ಕರೋನಾ ಫ್ರಂಟ್ ಲೈನ್ ವಾರಿಯರ್ಸ್ ಗಳ ನಿಜ ಕಥೆ–ವ್ಯಥೆ: ಭಾಗ–2............

ಪುಟ 9 ರಿಂದ

ರೂ. ಬರುತ್ತೆ. ಆದರೆ ಇವರಿಗೆ ಒಂದೇ ಲೇಯರ್ ಇರುವ ಮಾಸ್ಕ್ ಗಳನ್ನು ಕೊಡಲಾಗಿದೆ.

ಟಿ.ಒ.ಟಿ, 108 ಕಾರ್ಯಕರ್ತರು

ಆಶಾ ಕಾರ್ಯಕರ್ತೆಯರ ಮೇಲ್ವಿಚಾರಣೆ ಮಾಡುವ ಟಿ.ಒ.ಟಿ ಗಳು, ತಾಲ್ಲೂಕಿಗೆ ಒಬ್ಬರಂತೆ ಕೆಲಸ ನಿರ್ವಹಿಸುತ್ತಾರೆ. ಇವರು ಆಶಾ ಕಾರ್ಯಕರ್ತೆಯರು ತರುವ ವರದಿಗಳನ್ನು ಪರಿಶೀಲಿಸಿ ಅದರ ಪ್ರಕಾರ ಕ್ರಮಗ್ಗೆಗೊಳ್ಳಬೇಕಾಗುತ್ತದೆ. ಅಗತ್ಯವಿರುವ ಕಡೆ ಮನೆಗಳ ಬಳಿಯೂ ಹೋಗಬೇಕು. ನಾನು ಒಬ್ಬರು ಟಿಒಟಿಯನ್ನು ಮಾತಾನಾಡಿಸಿದಾಗ ಅವರು ಹೇಳಿದ್ದು 'ನಾನು ಮನೆಗೆ 15ದಿನಗಳಿಂದ ಹೋಗೆ ಇಲ್ಲ ಮೇಡಮ್' ಎಂದು. ಅಂದರೆ ನೀವು ಅಂದಾಜಿಸಿ ಇವರ ಕೆಲಸದ ಒತ್ತಡ ಮತ್ತು ವ್ಯವಸ್ಥೆ ಹೇಗಿದೆಯೆಂದು. ಇವರು ಹೆಸರಿಗೆ ಅಧಿಕಾರಿಯಾದರೂ, ಇವರಿಗೇನಾದರೂ ಸವಲತ್ತುಗಳಿವೆಯೇ ಎಂದು ನೋಡಿದರೆ ಅದು ಇಲ್ಲ, ಏಕೆಂದರೆ ಇವರು NRHM ಯೋಜನೆ ಯಡಿಯಲ್ಲಿ ಬರುವವರು. ಇವರ ಸಂಬಳವೂ ಕೂಡಾ 11,500 ರೂ.ಗಳೇ. ಇದು ಬಿಟ್ಟರೆ ಉಳಿದ ಸೌಲಭ್ಯಗಳು ಇಲ್ಲ. ಇನ್ನು 108 ಅಂಬ್ಯುಲೆನ್ಸ್ ನಲ್ಲಿ ಕೆಲಸ ಮಾಡುವ ನಮ್ಮ ಸಹೋದರರು ಮತ್ತು ಸಹೋದರಿಯರು. ಇವರ ಅಂಬ್ಯುಲೆನ್ಸ್ ನ್ನು ಕರೋನಾ ಕೆಲಸಕ್ಕೆ ಬಳಸಬಾರದು ಎಂಬ ಸ್ಪಷ್ಟ ಸೂಚನೆಯು ಇದ್ದರೂ ಕೂಡಾ, ಹಲವಾರು ಕಡೆ 108 ಬಳಕೆಯಾಗುತ್ತಿದೆ ಮೊದಲು ಜನ ಫೋನ್ ಮಾಡೋದು 108ಕ್ಕೆ. ಅವರು ರೋಗಿಯನ್ನು ಆಸ್ಪತ್ರೆಗೆ ಸಾಗಿಸುತ್ತಾರೆ. ಇಲ್ಲಿ ವಿಶೇಷವಾಗಿ ಗಮನಿಸಬೇಕಿರೋದು – ವಿಪರೀತ ಹೊಟ್ಟೆ ನೋವು, ಜ್ವರ ಅಥವಾ ಬೇರೆ ಖಾಯಿಲೆಯ ಹೆಸರಿನಲ್ಲಿ 108 ಅವರನ್ನು ಆಸ್ಪತ್ರೆಗೆ ಸಾಗಿಸುತ್ತದೆ. ನಂತರ ಆ ರೋಗಿಗೆ ಕರೋನಾ ಸೋಂಕು ಇರೋದು ದೃಡ ಪಟ್ಟಿದೆ. ಉದಾಹರಣೆಗೆ ಮುದೋಳ, ರಾಯ್ ಬಾಗ್ ಇನ್ನೂ ಮುಂತಾದಡೆ. ಕರೋನಾ ಸೋಂಕು ಇರುವ 24 ಜನರನ್ನು ಒಂದೇ ಅಂಬ್ಯುಲೆನ್ಸ್ ನಲ್ಲಿ 4 ಜನರಂತೆ ಸಾಗಿಸಲಾಗಿದೆ. ಸಾಗಿಸಿದ ನಂತರ ಅಂಬ್ಯುಲೆನ್ಸ್ ನ್ನು ಫ್ಯುಮಿಗೇಷನ್ ಮಾಡಿಸಬೇಕು. ಆದರೆ ಅದು ಪೂರ್ತಿ ವೈರಸ್ ಸಾಯುವ ರೀತಿಯ ಸ್ವಚ್ಛತೆ ಆಗುತ್ತಿಲ್ಲ. ಹೇಗೆಂದರೆ ಸೋಂಕಿತರನ್ನು ಸಾಗಿಸಿದ ನಂತರ ಜಿಲ್ಲಾ ಆಸ್ಪತ್ರೆ ಗಳಲ್ಲಿ 20 ಲೀಟರ್ ನೀರಿಗೆ 100 ml ಸ್ಯಾನಿಟೈಜರ್ ನ್ನು ಹಾಕಿ ಕ್ಲೀನ್ ಮಾಡಿದರೆ ವೈರಸ್ ಸಾಯುತ್ತಾ?

ಈ ಅಂಬ್ಯುಲೆನ್ಸ್ ಗಳಲ್ಲಿ ಒಬ್ಬರು ಪೈಲೆಟ್. ಒಬ್ಬರು ಬಿ.ಎಸ್.ಸಿ ನರ್ಸಿಂಗ್ ಮಾಡಿರುವ ಬ್ರದರ್ ಅಥವಾ ಸಿಸ್ಟರ್ ಇರುತ್ತಾರೆ. ಗ್ರಾಮಗಳಿಂದ ಜಿಲ್ಲಾ ಆಸ್ಪತ್ರೆ ಗೆ ಹೋಗಬೇಕೆಂದರೆ ಕನಿಷ್ಠ 100ಕಿ.ಮಿ. ಪ್ರಯಾಣ ಮಾಡಬೇಕು. ಆಗ ಪಿಪಿಟಿ ಕಿಟ್ ನ್ನು ಧರಿಸಬೇಕು. ಆದರೆ ಅದು ಒಳ್ಳೆಯ ಗುಣಮಟ್ಟದ್ದಲ್ಲದಿರುವುದರಿಂದ, ಅದರಿಂದಾಗುವ ಸೆಕೆ ಮತ್ತು ದೈಹಿಕ ಹಿಂಸೆಯನ್ನು ದಿನನಿತ್ಯ ಅನುಭವಿಸುವಂತಾಗಿದೆ.

ನರ್ಸ್, ಡಾಕ್ಟರುಗಳು

ಮಾಸ್ಕ್ ಗಳನ್ನು ನರ್ಸಗಳಿಗೆ ಕೊಡಲಾಗಿದೆ. ಅದು ಹೆಸರಿಗೆ ಮೂರು ಲೇಯರ್. ಕೆಲವಡೆ ಒಂದೆ ಲೇಯರ್ ಇರುವ ಮಾಸ್ಕಗಳನ್ನು ಕೊಡಲಾಗಿದೆ. ರಾತ್ರಿ ಹಗಲು ದುಡಿಯುವ ಇವರಿಗೆ ಅಂಬ್ಯುಲೆನ್ಸ್ ಗಳು ಕೆಟ್ಟು ಹೋದರೂ ಅದನ್ನು ಸರಿಪಡಿಸುವ ವ್ಯವಸ್ಥೆಯಿಲ್ಲ. ಗಾಡಿಯ ಸ್ವಚ್ಛತೆಯ ಕೆಲಸವನ್ನು ಬಿ.ಎಸ್.ಸಿ ನರ್ಸಿಂಗ್ ಓದಿರುವ ಮತ್ತು ಪೈಲಟ್(ವಾಹನ ಚಾಲಕರು) ಇವರೇ ಮಾಡಿಕೊಳ್ಳಬೇಕು. ಇವರ ವೇತನ ಎಷ್ಟು ಹೇಳಿ ಕೇವಲ 9500 ರೂ ಮಾತ್ರ.

ಬಹಳಷ್ಟು ತಂದೆ ತಾಯಿ ನನ್ನ ಮಗ ಡಾಕ್ಟರ್ ಆಗಬೇಕು ಎಂದು ಕನಸು ಕಂಡು MBBS ಮಾಡಿಸುತ್ತಾರೆ. ಅವರು ಕೂಡಾ ಈ ಯೋಜನೆಯಡಿಯಲ್ಲಿ ದುಡಿಯುತ್ತಿದ್ದಾರೆ. ಹಾಗೆಯೇ ಆಯುಷ್, RBHK ಯಡಿಯಲ್ಲಿ MBBS ಮಾಡಿರುವವರು ಒಟ್ಟು 870 ಜನ, ಕರೋನಾ ಕೆಲಸದಲ್ಲಿ ಹೆಚ್ಚಿನ ಪಾತ್ರ ವಹಿಸುತ್ತಿದ್ದಾರೆ. ರಾಜ್ಯದಲ್ಲಿ 435 ತಂಡಗಳು ಕರೋನಾ ನಿಯಂತ್ರಣಕ್ಕೆ ಕೆಲಸ ನಿರ್ವಹಿಸುತ್ತಿವೆ. ಅದರಲ್ಲಿ ಈ ವೈದ್ಯರ ಪ್ರಮುಖ ಪಾತ್ರವಿರುತ್ತದೆ. ಇವರು ಒಂದು ದಿನಕ್ಕೆ 520 ಜನರನ್ನು ಸ್ಕ್ಯಾನ್ ಮಾಡಬೇಕು. ಅದು ಎಂಥಹುದೇ ಪ್ರದೇಶವಾಗಿದ್ದರೂ ಹೋಗಬೇಕು. ಕೆಲಸಕ್ಕೆ ಸುತ್ತಾಡಲು ಸರ್ಕಾರಿ ವಾಹನವಿಲ್ಲ. ಸ್ವಂತ ವಾಹನವನ್ನು ಬಳಸಬೇಕು. ಇವರಿಗೂ ಮಾಸ್ಕ್ ಕೊಟ್ಟಿಲ್ಲ. ಆದರೆ ಜನಪ್ರತಿನಿಧಿಗಳ ವಿಪರೀತ ಒತ್ತಡ. ಕ್ಷೇತ್ರಕ್ಕೆ ಬರದೇ ಇರುವ ಮೇಲಧಿಕಾರಿಗಳು ಮೊಬೈಲ್‌ನಲ್ಲಿ ಇವರನ್ನು ಫಾಲೋ ಮಾಡುವ ಕೆಟ್ಟ ಗುಣ ಬೆಳೆಸಿ ಕೊಂಡಿದ್ದಾರೆ. ಮಾತ್ರವಲ್ಲದೆ ಎಲ್ಲಿ ಕೆಲಸದ ಕರೆ ಬಂದರೂ ಹೋಗುತ್ತಿರಬೇಕು. ಇವರು 14ವರ್ಷದ ಸೇವೆ ಮಾಡಿದರೂ ಇನ್ನೂ ಇವರು ಗುತ್ತಿಗೆ ಪದ್ಧತಿಯಡಿಯಲ್ಲಿಯೇ ಇದ್ದಾರೆ.

NRHM ನಲ್ಲಿ ದುಡಿಯುವ ಇವರು ದುರ್ಗಮ ಪ್ರದೇಶಗಳು, ಊರಿನ ಮೇಲೆ ಡ್ರೋನ್ ಕ್ಯಾಮರಾ ದಂತೆ ಕಾರ್ಯ ನಿರ್ವಹಿಸಿದ್ದಾರೆ. ಇವರುಗಳು ಇಲ್ಲದೆ ಇದ್ದಿದ್ದರೆ ಇಷ್ಟು ಫಲಿತಾಂಶವನ್ನು ಪಡೆಯಲು ಖಂಡಿತಾ ಸಾಧ್ಯವಿರಲಿಲ್ಲ. ಏಕೆಂದರೆ ಖಾಯಂ ವೈದ್ಯರು, ಖಾಯಂ ನರ್ಸಗಳು ಇಂದು ಆರೋಗ್ಯ ಇಲಾಖೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಇಲ್ಲ. ಖಾಸಗಿ ಆಸ್ಪತ್ರೆಗಳು ಈ ಕೆಲಸದಲ್ಲಿ ತೊಡಗಲೇ ಇಲ್ಲ.

ಕೇಂದ್ರ ಸರ್ಕಾರ ಕರೋನಾ ತಡೆಯ ಮುಂಜಾಗ್ರತೆ ವಿಚಾರ ಬಂದಕೂಡಲೇ ಖಾಯಂ ಆಗಿರುವ ವೈದ್ಯರಿಗೆ ಮತ್ತು ನರ್ಸಗಳಿಗೆ ಮತ್ತಿತರಿಗೆ ದಿನಕ್ಕೆ 100–300 ರೂಗಳ ಪ್ರೋತ್ಸಾಹ ಧನ ಕೊಡಬೇಕೆಂಬ ಸುತ್ತೋಲೆ ಬಂದಿರುವುದು ಬೇಸರದ ವಿಚಾರ. ರಾಷ್ಟ್ರೀಯ ವಿಪತ್ತು ಅಂತ ಘೋಷಣೆ ಮಾಡಿದ ಮೇಲೆ ಕನಿಷ್ಠ ಇವರಿಗೆ ಕರೋನಾ ಕೆಲಸ ಮಾಡಲು ಮೂಲಭೂತ ಸೌಲಭ್ಯಗಳನ್ನಾದರೂ ಒದಗಿಸಬೇಡವೇ? ಇವರಿಗೆ ನಮ್ಮ ಪಕ್ಕದ ಆಂದ್ರ ಪ್ರದೇಶದಲ್ಲಿ ನರ್ಸಗಳಿಗೆ 12ರಿಂದ 22 ಸಾವಿರ, ಆಯುಷ್ ವೈದ್ಯರಿಗೆ 25 ಸಾವಿರ, MBBS ವೈದ್ಯರಿಗೆ 40ಸಾವಿರ ರೂ.ಗಳ ವೇತನವಿದೆ. ಮಾತ್ರವಲ್ಲದೆ ಖಾಯಂ ನೌಕರರ ಹುದ್ದೆಗಳನ್ನು ಭರ್ತಿ ಮಾಡುವಾಗ, ಆಂಧ್ರಪ್ರದೇಶದ ಲ್ಲಿ 6500 ಜನರಿಗೆ ಮೀಸಲಾತಿಯ ಮುಖಾಂತರ ಭರ್ತಿ ಮಾಡಲಾಗಿದೆ. ಆದರೆ ಕರ್ನಾಟಕದ ಲ್ಲಿ ಬದುಕುಳಿಯುವ ವೇತನವು ನೀಡದೆ ಅವರನ್ನು ಶೋಷಣೆ ಮಾಡಲಾಗುತ್ತಿದೆ. ಪಕ್ಕದ ಆಂಧ್ರಪ್ರದೇಶದಲ್ಲಿ ಕರೋನಾ ತಡೆಗಟ್ಟಲು ಪ್ರತ್ಯೇಕ ಸಿಬ್ಬಂದಿಯನ್ನು ನೇಮಕಮಾಡಲು ನೋಟಿಫಿಕೇಷನ್ ಹೊರಡಿಸಿದೆ. ಆದರೆ ನಮ್ಮ ರಾಜ್ಯದಲ್ಲಿ !!!??

ರಾಜ್ಯದ ಮುಖ್ಯ ಮಂತ್ರಿಗಳು 2 ಲಕ್ಷ ಮಾಸ್ಕ್ ಗಳು, 2.4 ಲಕ್ಷ ಪಿಪಿಇ ಗಳು ತಯಾರಿಯಾಗಿವೆ ಎಂದು ಹೇಳಿದ್ದಾರೆ. ಆದರೆ ಅದರ ಗುಣಮಟ್ಟದ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕಲ್ಲವೇ? ಕರೋನಾ ತಡೆಗಟ್ಟಲು ಸಹಾಯದ ಹಣ ಹರಿದು ಬರುತ್ತಿದೆ ಈ ಹಣ ಸದ್ವಿನಿಯೋಗ ಆಗಬೇಕು.

ಮಾತ್ರವಲ್ಲದೆ ಈ ಕಾರ್ಯಕ್ರಮ ದಲ್ಲಿ ತೊಡಗಿರುವವರಿಗೆ ಈಗಿರುವ ವೇತನದಷ್ಟೇ ಹೆಚ್ಚುವರಿ(ಅಂದರೆ ಇಮ್ಮಡಿ) ವೇತನ ಕೊಡಬೇಕು. ಅವರ ಕೆಲಸವನ್ನು ಖಾಯಮಾತಿ ಮಾಡಿ, ಎಲ್ಲಾ ಖಾಯಂ ಉದ್ಯೋಗದ ಸೌಲಭ್ಯಗಳನ್ನು ಕೊಡಬೇಕು ಎಂದು ಆಗ್ರಹಿಸುತ್ತಾ, ಕೊರೊನಾ ವಾರಿಯರ್ಸ್ ಗಳಿಗೆಲ್ಲ ಜನತೆ ನಿಮ್ಮೊಂದಿಗೆ ಇದ್ದಾರೆ ಎನ್ನೋಣವೇ?

ಆಹಾರ, ಆರೋಗ್ಯ ಮತ್ತು ಶಿಕ್ಷಣಕ್ಕೆ ಯೋಜನೆಗಳ ರೂಪದಲ್ಲಿ ಅವಶ್ಯಕತೆ ಇತ್ತೆ?

ನಮ್ಮ ದೇಶದ ಸಂವಿಧಾನದಲ್ಲಿ ಭಾರತವನ್ನು ಒಂದು ಕಲ್ಯಾಣ ರಾಜ್ಯವನ್ನಾಗಿ ಕಟ್ಟುವ ಸಂಕಲ್ಪ ಮಾಡಿದೆ, ಕಲ್ಯಾಣ ರಾಜ್ಯವೆಂದರೆ ಜನ ಸಾಮಾನ್ಯರಿಗೆ ಕನಿಷ್ಠ ಅಗತ್ಯತೆಗಳಾದ ಆಹಾರ, ವಸತಿ, ಕುಡಿಯುವ ನೀರು, ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗಗಳನ್ನು ಒದಗಿಸುವುದು. ಆದರೆ ಸರ್ಕಾರಗಳು ಅದರತ್ತ ಹೆಚ್ಚಿನ ಗಮನವನ್ನು ಹರಿಸಲಿಲ್ಲ. ಹೊಸ ಆರ್ಥಿಕ ನೀತಿಗಳ ನಂತರವೂ ಸರ್ಕಾರ ಒದಗಿಸಬೇಕಾದ ಮೂಲಭೂತ ಸೌಲಭ್ಯಗಳನ್ನು ಸುಧಾರಣೆಯ ಹೆಸರಿನಲ್ಲಿ ಖಾಸಗಿಯವರಿಗೆ ಅವಕಾಶ ಮಾಡಿ ಕೊಟ್ಟಿತು. ಇದರಿಂದಾಗಿ ಆರೋಗ್ಯವಲಯದಲ್ಲಿ 93% ಸಣ್ಣ ಪುಟ್ಟ ಸೇರಿದಂತೆ ಕಾರ್ಪೋರೇಟ್ ಆಸ್ಪತ್ರೆಗಳು ಇಂದು ಆವರಿಸಿವೆ. ಭಾರತದಲ್ಲಿ ಆರೋಗ್ಯದ ಮೇಲಿನ ವೈಯಕ್ತಿಕ ಖರ್ಚು ಹೆಚ್ಚಾಗಿದೆ.


ಕರೋನಾ ಸಂದರ್ಭದಲ್ಲಿಯೂ ಕೂಡಾ 20 ಲಕ್ಷ ಕೋಟಿಯ ಪ್ಯಾಕೇಜ್ ನಲ್ಲಿ 15 ಸಾವಿರ ಕೋಟಿಯನ್ನು ಏಪ್ರಿಲ್ 22 ರಂದು ಕೇಂದ್ರ ಸರ್ಕಾರ ಘೋಷಣೆ ಮಾಡಿತು. ಅದರಲ್ಲಿ 7774 ಕೋಟಿಯನ್ನು ತಕ್ಷಣ ಬಳಕೆ ಮಾಡಬೇಕು. ಉಳಿದದ್ದು ಮುಂದಿನ ವರ್ಷಗಳಲ್ಲಿ ಬಳಕೆ ಮಾಡಲು ಸೂಚಿಸಿದೆ.

7774 ಕೋಟಿಯನ್ನು 28 ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹಂಚಿದರೆ ಎಷ್ಟು ಬರಬಹುದು ಎಂಬುದನ್ನು ನೀವೆ ಊಹಿಸಿ?

ಇರಬೇಕಾದ್ದು, ಇರುವುದು

ಆರೋಗ್ಯ ಸೇವೆಯಲ್ಲಿ ಗ್ರಾಮದಿಂದ ಆರಂಭಿಸಿ ಜಿಲ್ಲೆಯ ವಿವಿಧ ಹಂತಗಳಲ್ಲಿ ಇರಬೇಕಾದ ವೈದ್ಯಕೀಯ ವ್ಯವಸ್ಥೆ ಮತ್ತು ಸಿಬ್ಬಂದಿಗಳ ಸಂಖ್ಯೆಯನ್ನು ಕೆಳಗಿನ ಚಿತ್ರದಲ್ಲಿ ಕೊಡಲಾಗಿದೆ. ಆದರೆ ವಾಸ್ತವವಾಗಿ ಈ ಸಂಖ್ಯೆಯ ಹತ್ತಿರವೂ ಇಲ್ಲ.

ಇದನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಏಕೆಂದರೆ ಆರೋಗ್ಯ ವೆಚ್ಚಕ್ಕೆ ಜಿ.ಡಿ.ಪಿ.ಯ 1% ಮಾತ್ರವೇ ಮೀಸಲಿಟ್ಟಿರುವುದು. ಆದರೆ ಒಂದು ದೇಶ ಸಮೃದ್ಧವಾಗಿ ಆರೋಗ್ಯಯುತ ಸಮಾಜವಾಗಬೇಕಾದರೆ ಅದಕ್ಕೆ ಮೀಸಲಿಡಬೇಕಿರೋದು ಕನಿಷ್ಠ 5%.



ಭಾರತದಂತಹ ಊಳಿಗಮಾನ್ಯ ಬಂಡವಾಳ ಶಾಹಿ ದೇಶ ಆರೋಗ್ಯ ಕ್ಷೇತ್ರಕ್ಕೆ ಕೊಡುವ ಅನುದಾನ ಲಾಭದಾಯಕವಲ್ಲವೆಂದೂ ಭಾವಿಸುತ್ತದೆ. ಒಂದು ದೇಶವನ್ನು ಸಮಗ್ರವಾಗಿ ಕಟ್ಟ ಬೇಕಾದರೆ ಆರೋಗ್ಯ ಎನ್ನುವುದು ಅದರ ಮೂಲಸ್ಥಂಭಗಳಲ್ಲಿ ಒಂದು ಎನ್ನುವ ತನ್ನ ಸಂವಿಧಾನ ಸಂಕಲ್ಪವನ್ನೇ ಮರೆತಿದೆ. ಅಂದರೆ ಪ್ರಭುತ್ವ ಮಾಡುವ ಕೆಲಸವನ್ನು ಕೆಲವರ ಲಾಭಕ್ಕಾಗಿ ಖಾಸಗಿಯವರಿಗೆ ವರ್ಗಾಯಿಸಿದೆ.

ಆದರೆ ಸಮಾಜವಾದಿ ರಾಷ್ಟ್ರಗಳಾದ ಕ್ಯೂಬಾ ಇಂದು ಪ್ರಪಂಚಕ್ಕೆ ಮಾದರಿಯಾದರೆ, ಕಮ್ಯುನಿಸ್ಟ್ ಆಡಳಿತವಿರುವ ಚೀನಾ 2019 ರಲ್ಲಿ 5% 2017 ರಲ್ಲಿ 6.4 % ಅನುದಾನವನ್ನು ಮೀಸಲಿಟ್ಟಿರುವುದನ್ನು ಕಾಣಬಹುದಾಗಿದೆ.

ಭಾರತ ಆರೋಗ್ಯ ಕ್ಷೇತ್ರದ ವೈಫಲ್ಯತೆಯನ್ನು ಮುಚ್ಚಿಕೊಳ್ಳಲು ತಂದಂತಹ ಯೋಜನೆಯೇ NRHM ಯೋಜನೆ. ಇದರ ಮುಖ್ಯ ಉದ್ದೇಶ – ಹುಟ್ಟಿನಲ್ಲಿ ಬಾಲ್ಯದಲ್ಲಿ ಮಕ್ಕಳ ಮರಣ ಪ್ರಮಾಣ ಕನಿಷ್ಠಗೊಳಿಸುವುದು, ಹೆರಿಗೆಯಲ್ಲಿ ತಾಯಂದಿರ ಮರಣ ಪ್ರಮಾಣ ಕನಿಷ್ಠಗೊಲಿಸುವುದು, ಮಲೇರಿಯಾ, ಟಿ.ಬಿ, ಕುಷ್ಟ ರೋಗಗಳನ್ನು ತಡೆಗಟ್ಟಲು ಮತ್ತು ಅದಕ್ಕೆ ಸಂಬಂಧಿಸಿದ ಸೇವೆಯನ್ನು ಮಾಡಲು – 2003ರಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ನ್ನು ಪ್ರಾರಂಭಿಸಲಾಯಿತು. ಸುಮಾರು 24 ವಿವಿಧ ಹುದ್ದೆಗಳಲ್ಲಿ ವಿದ್ಯಾವಂತ ಯುವಕ ಯುವತಿಯರನ್ನು ಗುತ್ತಿಗೆಯ ರೂಪದಲ್ಲಿ, ಆಶಾ ಕಾರ್ಯಕರ್ತೆಯರನ್ನು ಪ್ರೋತ್ಸಾಹಧನದ ಆಧಾರದಲ್ಲಿ ದುಡಿಸಲಾಗುತ್ತಿದೆ.

ಹಾಗೆಯೇ 1975ರಲ್ಲಿ ಅಪೌಷ್ಠಿಕತೆಯನ್ನು ತಡೆಯಲು ICDS ಯೋಜನೆಯನ್ನು ಪ್ರಾರಂಭಿಸಲಾಯಿತು.

ಈ ಯೋಜನೆಗಳು ಪ್ರತಿ 5 ವರ್ಷಕ್ಕೊಮ್ಮೆ ನವೀಕರಣಗೊಳ್ಳುತ್ತವೆ. ಹಾಗೆಯೇ ಯೋಜನೆಯಲ್ಲಿ ಕೆಲಸ ಮಾಡುವವರು ಪ್ರತಿವರ್ಷ ನವೀಕರಣಗೊಳ್ಳುತ್ತಾರೆ.

ಪ್ರಭುತ್ವ ಈ (NRHM, ICDS) ಯೋಜನೆಗಳ ಮುಖಾಂತರ ಕರ್ತವ್ಯವನ್ನು ಪಾಲಿಸುತ್ತಿದ್ದೇನೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ಈ ಕರ್ತವ್ಯವನ್ನು ಯಶಸ್ಸು ಮಾಡಲು ದುಡಿಯುವ ನೌಕರರು ಇಲ್ಲ.ಸರ್ಕಾರದ ಸೇವಾ ನಿಯಮಗಳಾದ – ಸಂಪೂರ್ಣ ವೇತನ, ಮುಂಬಡ್ತಿ, ನಿವೃತ್ತಿ ಉಪಧನ ಸೌಲಭ್ಯ, ರಜೆಗಳು, ತುಟ್ಟಿಭತ್ಯೆ, ವರ್ಗಾವಣೆ, ಕೆಲಸದಲ್ಲಿನಿಧನರಾದರೆ ಬರಬಹುದಾದ ಸೌಲಭ್ಯ – ಇತ್ಯಾದಿಗಳಿಂದ ವಂಚಿತರಾಗಿ ಅತ್ಯಂತ ಕನಿಷ್ಠವಾಗಿ ದುಡಿಯಬೇಕಿದೆ.

ರಾಜ್ಯದಲ್ಲಿ NRHM ಅಡಿಯಲ್ಲಿ 30 ಸಾವಿರ ಜನರು ಗುತ್ತಿಗೆಯ ಪದ್ಧತಿಯಲ್ಲಿ ದುಡಿಯುತ್ತಿದ್ದಾರೆ. ಕೆಲಸಕ್ಕೆ ಆಯ್ಕೆ ಮಾಡಿ ಕೊಡುವ ಆದೇಶದಲ್ಲಿ ಕೆಲಸದ ಸ್ಥಳದಲ್ಲಿಯೇ ವಾಸಮಾಡಬೇಕು. ದುರ್ನಡತೆಯಿಂದ ಸರ್ಕಾರಕ್ಕೆ ಆಗುವ ನಷ್ಟ ತುಂಬಿ ಕೊಡಬೇಕು. ಖಾಯಮಾತಿ, ವೇತನ ಶ್ರೇಣಿ, ನಿವೃತ್ತಿ ಉಪಧನ ಅಥವಾ ಇನ್ನಿತರೇ ಭತ್ಯೆಗಳನ್ನು ಪಡೆಯಲು ಅರ್ಹತೆ ಇರುವುದಿಲ್ಲ ಮತ್ತು ನ್ಯಾಯಲಯದಲ್ಲಿ ಪ್ರಶ್ನಿಸುವಂತಿಲ್ಲ. ವರ್ಗಾವಣೆ ಮತ್ತು ಪರಸ್ಪರ ವರ್ಗಾವಣೆಗೂ ಅವಕಾಶವಿರುವುದಿಲ್ಲ ಎಂಬ ಶರತ್ತುಗಳನ್ನು ಹಾಕಾಲಾಗಿದೆ. ಒಂದು ಮಾದರಿ ಸಂಸ್ಥೆಯಾಗಬೇಕಿದ್ದ ಸರ್ಕಾರ ಇಂದು ಕನಿಷ್ಠ ಹಕ್ಕುಗಳನ್ನು ನಿರಾಕರಿಸುತ್ತಿದೆ!!!

ಕರೋನಾ ವೈರಾಣುವಿನ ತುರ್ತು ಪರಿಸ್ಥಿತಿ ಬಂದಾಗ ಸಾರ್ವಜನಿಕ ಆಸ್ಪತ್ರೆಗಳೆ ಇಂದು ಪ್ರಮುಖ ತಾತ್ರ ವಹಿಸಿರುವುದು. ಈಗಲಾದರೂ ಆಳುವ ವರ್ಗ ಎಚ್ಚೆತ್ತು ಕೊಂಡು ಸಾರ್ವಜನಿಕ ಆರೋಗ್ಯವ್ಯವಸ್ಥೆಯನ್ನು ಬಲಿಷ್ಠ ಪಡಿಸಲು ಅಗತ್ಯ ಅನುದಾನ ಮೀಸಲಿರಿಸುವ ಮುಖಾಂತರ ಮುನ್ನಡೆಯಲಿ ಹಾಗೂ NRHM ಮತ್ತು ICDS ಯೋಜನೆಗಳನ್ನು ಖಾಯಂ ಮಾಡುವ ಪ್ರಾಮುಖ್ಯತೆಯನ್ನು ಅರಿಯಲಿ.

ಶತಮಾನೋತ್ಸವ ಲೇಖನ ಮಾಲೆ-31

ಸುಪ್ರಸಿದ್ಧ ತೆಲಂಗಾಣ ಜನರ ಸಶಸ್ತ್ರ ಹೋರಾಟ-1

1944ರ ಆರಂಭದಿಂದ, ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಆಂಧ್ರ ಮಹಾಸಭಾವು ಜಮೀನ್ದಾರರು ಮತ್ತು ದೇಶಮುಖರ ವಿರುದ್ಧ ಅನೇಕ ಹೋರಾಟಗಳನ್ನು ನಡೆಸಿತು. ಸಂಘಂ ಎಂದು ಅಕ್ಕರೆಯಿಂದ ಕರೆಯಲ್ಪಡುತ್ತಿದ್ದ ಆಂಧ್ರ ಮಹಾಸಭಾವು ಜಮೀನುಗಳಲ್ಲಿ ಕೆಂಬಾವುಟಗಳನ್ನು ನೆಟ್ಟು ಹೋರಾಟಗಳಿಗೆ ಮುಂದಾಳತ್ವ ನೀಡಿತು. ಸಂಘಂ ನೇತೃತ್ವದಲ್ಲಿ ಜನರು ಗೂಂಡಾಗಿರಿಯನ್ನು ತಡೆಗಟ್ಟಿದರು, ವೆಟ್ಟಿ ಪದ್ಧತಿಯನ್ನು ನಿಲ್ಲಿಸಿದರು. ಜುಲೈ 4, 1946ರಂದು, ಜಮೀನ್ದಾರನ ಬಾಲಬಡುಕರ ಗುಂಡಿಗೆ 'ಸಂಘಂ'ನ ಮುಖಂಡ ದೊಡ್ಡಿ ಕೊಮರಯ್ಯ ಬಲಿಯಾದರು. ತೆಲಂಗಾಣ ರೈತರ ಮಡುಗಟ್ಟಿದ್ದ ಕೋಪವು ಭುಗಿಲೆದ್ದಿತು. ಜನರ ಅತೃಪ್ತಿ ಮತ್ತು ಆಕ್ರೋಶ ಎಷ್ಟು ಗಾಢವಾಗಿತ್ತು ಮತ್ತು ಅಸಾಧಾರಣವಾಗಿತ್ತು ಎಂದರೆ ಅವರು ವೆಟ್ಟಿ ಪದ್ಧತಿ, ಅನೈತಿಕ ವಸೂಲಿ, ಬಲವಂತದ ಗೇಣಿ ವಸೂಲಿ ಇವೆಲ್ಲಕ್ಕೂ ಕೊನೆ ಹಾಡಿದರು ಮತ್ತು ಜಮೀನ್ದಾರರು ವಶಪಡಿಸಿಕೊಂಡಿದ್ದ ಜಮೀನನ್ನು ಮರುವಶ ಮಾಡಿಕೊಂಡರು. ಜಮೀನ್ದಾರರ ಸಶಸ್ತ್ರ ದಾಳಗಳನ್ನು ಪ್ರತಿರೋಧಿಸಲು ಶುರುಮಾಡಿದರು, ನಿಜಾಮನ ಸಶಸ್ತ್ರ ಪೋಲಿಸರನ್ನು ಮತ್ತು ಮಿಲಿಟರಿಯನ್ನೂ ಎದುರಿಸಲು ಸಿದ್ಧರಾದರು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ನಮ್ಮ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಮತ್ತು ಕಮ್ಯುನಿಸ್ಟ್ ಚಳುವಳಿಯಲ್ಲಿ ಕೂಡ, ಅತ್ಯಂತ ಸುಪ್ರಸಿದ್ಧ ಹಂತಗಳಲ್ಲಿ ತೆಲಂಗಾಣ ಜನರ ಸಶಸ್ತ್ರ ಹೋರಾಟವು ಒಂದು. ಹಿಂದಿನ ಹೈದರಾಬಾದ್ ಸಂಸ್ಥಾನದ ನಿಜಾಮನ ಆಳ್ವಿಕೆಯ ಪಾಳೇಗಾರಿ ಶೋಷಣೆಯ ವಿರುದ್ಧ 1946ರಲ್ಲಿ ಪ್ರಾರಂಭವಾದ ಈ ಹೋರಾಟವು 1951ರ ತನಕವೂ ಮುಂದುವರಿಯಿತು. ಈ ತೆಲಂಗಾಣ ಹೋರಾಟವನ್ನು ಸ್ಥೂಲವಾಗಿ ಮೂರು ಹಂತಗಳಾಗಿ ವಿಂಗಡಿಸಬಹುದು – ಆರಂಭದ ಹಂತ, ವೆಟ್ಟಿ ಪದ್ಧತಿ ಹಾಗೂ ಜಮೀನು ಒಕ್ಕಲೆಬ್ಬಿಸುವುದರ ವಿರುದ್ಧ; ಎರಡನೆಯ ಹಂತ, ನಿಜಾಮನನ್ನು ಕಿತ್ತು ಹಾಕಿ ಗ್ರಾಮಗಳಲ್ಲಿ ಸ್ವಯಮಾಡಳಿತ ಹಾಗೂ ಉಳುವವನಿಗೆ ಜಮೀನು ಹಂಚುವುದು ಮತ್ತು ಮೂರನೆಯ ಹಾಗೂ ಕೊನೆಯ ಹಂತ, ಪಡೆದಿದ್ದನ್ನು ಕಾಪಾಡಿಕೊಳ್ಳುವುದು ಹಾಗೂ ಹೋರಾಟವನ್ನು ಹಿಂಪಡೆಯುವುದು.

ಹೈದರಾಬಾದ್ ಸಂಸ್ಥಾನವು ಮೂರು ಭಾಷಾವಾರು ಪ್ರದೇಶಗಳನ್ನು – ತೆಲಂಗಾಣ ಪ್ರದೇಶವು ತೆಲುಗು ಮಾತನಾಡುವ(50% ಪ್ರದೇಶ) ಎಂಟು ಜಿಲ್ಲೆಗಳನ್ನು, ಮರಾಠವಾಡಾ ಪ್ರದೇಶವು ಐದು ಮರಾಠಿ ಮಾತನಾಡುವ(28% ಪ್ರದೇಶ)ಜಿಲ್ಲೆಗಳನ್ನು, ಮತ್ತು ಮೂರು ಕನ್ನಡ ಮಾತನಾಡುವ(22% ಪ್ರದೇಶ) ಜಿಲ್ಲೆಗಳನ್ನು – ಹೊಂದಿತ್ತು. ಆ ಸಂಸ್ಥಾನದಲ್ಲಿ ವಾಸಿಸುವ ಬಹುಪಾಲು ಜನರ ಸಂಸ್ಕೃತಿ ಹಾಗೂ ಭಾಷೆಯನ್ನು ಆಳರಸರು ದಮನ ಮಾಡಿದ್ದರು, ಮತ್ತು ಶಿಕ್ಷಣ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗಾಗಿ, ತಮ್ಮದೇ ಭಾಷೆಯ ರಕ್ಷಣೆ ಹಾಗೂ ಅಭಿವೃದ್ಧಿಗಾಗಿನ ಅವರ ಸಹಜ ಅಭಿಲಾಷೆಯು ನಿಜಾಮನ ವಿರುದ್ಧದ ಹೋರಾಟದೊಂದಿಗೆ ಅನಿವಾರ್ಯವಾಗಿ ತಳಕುಹಾಕಿಕೊಂಡಿತ್ತು.

ಮುಖ್ಯವಾಗಿ ತೆಲಂಗಾಣ ಜನರ ಸಾಮಾಜಿಕ – ಆರ್ಥಿಕ ಬದುಕಿನ ಮೇಲೆ ಪ್ರಭಾವ ಬೀರಿದ್ದ ಪ್ರಧಾನ ಅಂಶವೆಂದರೆ ಲಂಗುಲಗಾಮಿಲ್ಲದ ಪಾಳೇಗಾರಿ ಶೋಷಣೆ. ಆ ಸಂಸ್ಥಾನದಲ್ಲಿನ 60% ಜಮೀನು ಸರ್ಕಾರಿ ಜಮೀನಾಗಿತ್ತು ಮತ್ತು 10% ನಿಜಾಮನ ಸ್ವಂತ ಆಸ್ತಿಯಾಗಿತ್ತು. ಒಟ್ಟು ಸಂಸ್ಥಾನದ 30% ಜಾಗೀರುದಾರರ ಪ್ರದೇಶವಾಗಿತ್ತು ಮತ್ತು ಜಾಗೀರುದಾರರು ಪಾಳೇಗಾರಿ ಪೀಡಕರಾಗಿದ್ದರು. ಇಲ್ಲಿ, ಸರ್ಕಾರಿ ಜಮೀನಗಿದ್ದ ತೆರಿಗೆಗಿಂತ ಹತ್ತುಪಟ್ಟು ತೆರಿಗೆಯನ್ನು ನೀರಾವರಿ ಜಮೀನಗೆ ವಸೂಲಿ ಮಾಡಲಾಗುತ್ತಿತ್ತು. ಹಲವಾರು ರೀತಿಯ ಕಾನೂನುಬಾಹಿರ ಬಲವಂತದ ಹಣ ವಸೂಲಿ ಮತ್ತು ಬಲವಂತದ ಚಾಕರಿ ಅಲ್ಲಿ ಸಾಮಾನ್ಯವಾಗಿತ್ತು. ಅಲ್ಲಿಯ ಕೆಲವು ಜಾಗೀರುದಾರರು ತಮ್ಮದೇ ಆದ ಪ್ರತ್ಯೇಕ ಪೋಲಿಸ್, ಕಂದಾಯ, ಸಿವಿಲ್ ಹಾಗೂ ಕ್ರಿಮಿನಲ್ ವ್ಯವಸ್ಥೆಯನ್ನು ಹೊಂದಿದ್ದರು.

ಜಾಗೀರುದಾರರ ಹೊರತಾಗಿ, ಅಲ್ಲಿ ದೇಶಮುಖರು ಮತ್ತು ದೇಶಪಾಂಡೆಯರು ಇದ್ದರು; ಹಿಂದೆ ಅವರು ಸರ್ಕಾರದ ಪರವಾಗಿ ಕಂದಾಯ ವಸೂಲಿ ಮಾಡುತ್ತಿದ್ದರು ಮತ್ತು ನಂತರದಲ್ಲಿ ಸಾವಿರಾರು ಎಕರೆ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಂಡು ಭೂಮಾಲಕರಾದರು, ಅಕ್ರಮ ವಿಧಾನಗಳಿಂದ ಜಮೀನು ಸಾಗುವಳಿ ಮಾಡುತ್ತಿದ್ದರು. ಆ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿದ್ದ ರೈತರು ಭೂಮಾಲಕರ ಇಚ್ಛಾನುಸಾರ–ಗೇಣಿದಾರರಾಗುವ ಸ್ಥಿತಿಗೆ ತಳ್ಳಲ್ಪಟ್ಟರು. ರೈತರ ವಶದಲ್ಲಿದ್ದ ಜಮೀನುಗಳನ್ನು ಕೂಡ ಆರ್ಥಿಕ ಬಿಕ್ಕಟ್ಟಿನ ಅವಧಿಯಲ್ಲಿ ರೈತರು ಕಂದಾಯ ಕಟ್ಟಲಾಗದ ಸ್ಥಿತಿ ಬಂದಾಗ, ಭೂಮಾಲಕರು ಅವುಗಳನ್ನು ಮುಟ್ಟುಗೋಲು ಹಾಕಿಕೊಂಡರು.

ವೆಟ್ಟಿ ಪದ್ಧತಿ

ತೆಲಂಗಾಣದಲ್ಲಿ, ವೆಟ್ಟಿ ಪದ್ಧತಿಯು ಎಲ್ಲಾ ಕಡೆಗಳಲ್ಲೂ ವ್ಯಾಪಿಸಿದ್ದ ಸಾಮಾಜಿಕ ವಿದ್ಯಮಾನವಾಗಿತ್ತು. ಪ್ರತಿಯೊಂದು ದಲಿತ ಕುಟುಂಬವೂ ಒಬ್ಬನನ್ನು ವೆಟ್ಟಿ ಮಾಡಲು ಕಳಿಸಬೇಕಾಗುತ್ತಿತ್ತು. ಭೂಮಾಲಕರ ಮನೆಯಲ್ಲಿ ಮನೆಗೆಲಸವನ್ನೂ ಒಳಗೊಂಡಂತೆ, ಅವರ ಸಂದೇಶವಾಹಕ ಕೆಲಸವನ್ನೂ ಅವನು ಮಾಡಬೇಕಾಗಿತ್ತು. ಚಪ್ಪಲಿ ಹೊಲೆಯುವ ಅಥವಾ ಕೃಷಿ ಕೆಲಸಗಳಿಗೆ ಅಗತ್ಯವಿರುವ ಚರ್ಮದ ಪರಿಕರಗಳನ್ನು ಮಾಡುವ ದಲಿತರು ಭೂಮಾಲಕರ ಮನೆಗೆ ಪುಕ್ಕಟೆಯಾಗಿ ಅವುಗಳನ್ನು ಪೂರೈಸಬೇಕಾಗಿತ್ತು.



ಮೂರ್ತೆದಾರರು(ಟಾಡಿ ಟ್ಯಾಪರ್ಸ್) ಕಳ್ಳು(ಹೆಂಡ), ಕುರುಬರು ಕುರಿಗಳನ್ನು, ನೇಕಾರರು ಬಟ್ಟೆಗಳನ್ನು, ಬಡಗಿ ಮತ್ತು ಕಮ್ಮಾರರು ಎಲ್ಲಾ ಕೃಷಿ ಉಪಕರಣಗಳನ್ನು, ಕುಂಬಾರರು ಮಡಕೆಯನ್ನು ಪುಕ್ಕಟೆಯಾಗಿ ಪೂರೈಸಬೇಕಾಗುತ್ತಿತ್ತು. ಮಡಿವಾಳರು ಬಟ್ಟೆಗಳನ್ನು ಮತ್ತು ಪಾತ್ರೆಗಳನ್ನು ತೊಳೆದುಕೊಡುವಂತೆ ಬಲವಂತ ಮಾಡಲಾಗುತ್ತಿತ್ತು ಮತ್ತು ಕ್ಷೌರಿಕರು ಮನೆಯಲ್ಲಿ ನಿತ್ಯ ಸೇವೆ ಮಾಡಬೇಕಾಗುತ್ತಿತ್ತು ಹಾಗೂ ರಾತ್ರಿ ಹೊತ್ತು ಭೂಮಾಲಕರ ಕಾಲು ಒತ್ತಬೇಕಾಗುತ್ತಿತ್ತು ಹಾಗೂ ಮಾಲೀಷ್ ಮಾಡಬೇಕಾಗಿತ್ತು. ಕೆಲವು ಇತರೆ ಹಿಂದುಳಿದ ವರ್ಗಗಳವರು ಭೂಮಾಲಕರ ಮನೆಯುವರನ್ನು ಪಲ್ಲಕ್ಕಿಗಳಲ್ಲಿ ಊರಿಂದೂರಿಗೆ ಹೊತ್ತೊಯ್ಯಬೇಕಾಗುತ್ತಿತ್ತು.

ರೈತರು ಕೂಡ ವೆಟ್ಟಿಯಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ. ರೈತರು ತಮ್ಮ ಜಮೀನುಗಳಲ್ಲಿ ಉಳುವ ಮೊದಲು ಭೂಮಾಲಕರ ಜಮೀನನ್ನು ಉತ್ತುಕೊಡಬೇಕಾಗುತ್ತಿತ್ತು. ಜಮೀನ್ದಾರರ ಜಮೀನುಗಳಿಗೆ ನೀರು ಹರಿಸುವ ಮುಂಚೆ ತಮ್ಮ ಜಮೀನುಗಳಿಗೆ ನೀರು ಹರಿಸುವಂತಿರಲಿಲ್ಲ. ಕೃಷಿ ಕೂಲಿಗಾರರು ಜಮೀನ್ದಾರರ ಜಮೀನನಲ್ಲಿ ಬಿಟ್ಟಿ ಚಾಕರಿ ಮಾಡಿದ ನಂತರವೇ ತಮ್ಮ ಹೊಟ್ಟೆಪಾಡಿಗಾಗಿ ಇತರ ರೈತರ ಜಮೀನನಲ್ಲಿ ದುಡಿಯಬೇಕಿತ್ತು. ಈ ಹಲವಾರು ಸ್ವರೂಪದ ಬಲವಂತದ ಚಾಕರಿ ಮತ್ತು ಹಣ ವಸೂಲಿ ಜಮೀನ್ದಾರರರಿಂದ ಮಾತ್ರವಲ್ಲ ಎಲ್ಲಾ ಅಧಿಕಾರಿಗಳು, ಚಿಕ್ಕ ಅಥವಾ ದೊಡ್ಡವರಿಂದ ಕೂಡ ನಡೆಯುತ್ತಿತ್ತು.

ಈ ಪಾಳೇಗಾರಿ ದಬ್ಬಾಳಿಕೆಗಳಲ್ಲಿ ಅತ್ಯಂತ ಹೇಯವಾದದ್ದು ಹುಡುಗಿಯರನ್ನು 'ಗುಲಾಮ'ರಂತೆ ಇಟ್ಟುಕೊಳ್ಳುವುದು. ಇದು ವಾಡಿಕೆಯಾಗಿತ್ತು. ಜಮೀನ್ದಾರರ ಹೆಣ್ಣುಮಕ್ಕಳ ಮದುವೆಯಾದಾಗ ಈ ಗುಲಾಮ ಹುಡುಗಿಯರನ್ನು ಅವರ ಮನೆಯಲ್ಲಿ ಸೇವೆ ಮಾಡಲು ಅವರ ಜತೆ ಬಳುವಳಿಯಾಗಿ ಕಳಿಸಲಾಗುತ್ತಿತ್ತು. ಜಮೀನ್ದಾರರು ಈ ಗುಲಾಮ ಹುಡುಗಿಯರನ್ನು ತಮ್ಮ ಸೂಳೆಯರನ್ನಾಗಿ ಬಳಸುತ್ತಿದ್ದರು. ಈ ವೆಟ್ಟಿ ಪದ್ಧತಿಯು ತೆಲಂಗಾಣ ಜನರ ಬದುಕನ್ನು ತೀರ ಕೀಳು ಮಟ್ಟಕ್ಕೆ ಇಳಿಸಿತ್ತು ಮತ್ತು ಅವರ ಆತ್ಮಗೌರವವನ್ನು ನಾಶಗೊಳಿಸಿತ್ತು. ಈ ವಿಷಯದ ಮೇಲೆಯೇ 1940ರ ಆರಂಭದಲ್ಲಿಯೇ ರೈತರು ಪಾಳೇಗಾರಿ ದೊರೆಗಳ ವಿರುದ್ಧ ನೇರ ಸಂಘರ್ಷಕ್ಕೆ ಇಳಿದರು. ಆ ವೇಳೆಗೆ, ಕಮ್ಯುನಿಸ್ಟ್ ಪಕ್ಷವು ಒಂದು ಸಂಘಟಿತ ಶಕ್ತಿಯಾಗಿ ಹೊರಹೊಮ್ಮಿತ್ತು ಮತ್ತು ಈ ದಮನಿತ ಗೇಣಿದಾರರು ಹಾಗೂ ಗ್ರಾಮೀಣ ಬಡವರ ಹೋರಾಟದೊಂದಿಗೆ ತನ್ನನ್ನು ಗುರುತಿಸಿಕೊಳ್ಳಲು ಸಮರ್ಥವಾಯಿತು.

ನಿಜಾಮನ ಆಳ್ವಿಕೆ ನಿರಂಕುಶ ಆಡಳಿತವಾಗಿತ್ತು, ಯಾವ ಮಟ್ಟದಲ್ಲಿಯೂ ಚುನಾಯಿತ ಸಂಸ್ಥೆಗಳಿರಲಿಲ್ಲ ಮತ್ತು ಯಾವುದೇ ನಾಗರಿಕ ಸ್ವಾತಂತ್ರ್ಯಗಳಿರಲಿಲ್ಲ. ಇಂತಹ ಆಡಳಿತದ ವಿರುದ್ಧ ಭಾರತದ ಸ್ವಾತಂತ್ರ್ಯ ಚಳುವಳಿಯ ಬೆಳವಣಿಗೆಗಳಿಂದ ಪ್ರಭಾವಿತರಾದ ಸಾಕಷ್ಟು ಸಂಖ್ಯೆಯ ಉದಾರವಾದಿಗಳು ಆಂಧ್ರ ಮಹಾಸಭಾ ಎಂಬ ಒಂದು ವಿಶಾಲ ರಾಜಕೀಯ, ಸಾಂಸ್ಕೃತಿಕ ಸಂಘಟನೆಯಾಗಿ ತೆಲಂಗಾಣದಲ್ಲಿ, ಮಹಾರಾಷ್ಟ್ರ ಪರಿಷತ್ ಹಾಗೂ ಕನ್ನಡ ಪರಿಷತ್ ಎಂದು ಉಳಿದೆರಡು ಪ್ರದೇಶಗಳಲ್ಲಿ ಸಂಘಟಿತರಾದರು. ಅವರಲ್ಲಿದ್ದ ಅನೇಕ ಸಮರಶೀಲ ಹಾಗೂ ಪ್ರಗತಿಪರ ಕಾರ್ಯಕರ್ತರನ್ನು ಕಮ್ಯುನಿಸ್ಟ್ ಪಕ್ಷದ ಆಂಧ್ರ ಘಟಕವು ಸಂಪರ್ಕಿಸಿತು ಮತ್ತು ತೆಲಂಗಾಣದಲ್ಲಿ ಒಂದು ಶಕ್ತಿಯುತ ಗುಂಪನ್ನು ಕಟ್ಟಲು ಸಮರ್ಥವಾಯಿತು.


ಆರಂಭದಲ್ಲಿ, ಆಂಧ್ರ ಮಹಾಸಭಾವು ಆಡಳಿತದಲ್ಲಿ ಸುಧಾರಣೆಗಳಾಗಬೇಕು, ನಾಗರಿಕ ಸ್ವಾತಂತ್ರ್ಯಗಳು ಬೇಕು, ಹೆಚ್ಚು ಶಾಲೆಗಳು ಬೇಕು ಮತ್ತು ಬೇಸಾಯ ಮಾಡುವ ಜನರಿಗೆ ರಿಯಾಯಿತಿಗಳು ಬೇಕು ಎಂಬ ನಿರ್ಣಯಗಳನ್ನು ಅಂಗೀಕರಿಸುವಷ್ಟರ ಮಟ್ಟಿಗೆ ಮಾತ್ರ ತನ್ನನ್ನು ಸೀಮಿತಗೊಳಿಸಿಕೊಂಡಿತು; ಆದರೆ ನಿಜಾಮನ ವಿರುದ್ಧ ಜನರನ್ನು ಅಣಿನೆರೆಸಿ ಹೋರಾಟಗಳನ್ನು ಮಾಡಲಿಲ್ಲ. ಕಮ್ಯುನಿಸ್ಟ್ ಪಕ್ಷವು ಆಂಧ್ರ ಮಹಾಸಭಾವನ್ನು ಜನರ ಬಳಿ ಕೊಂಡೊಯ್ಯುವಲ್ಲಿ ಭಾರಿ ಕೆಲಸಮಾಡಿತು. ಆಂಧ್ರ ಮಹಾಸಭಾದಲ್ಲಿದ್ದ ಸೌಮ್ಯವಾದಿಗಳು ಇದನ್ನು ವಿರೋಧಿಸಿದರು. ವೆಟ್ಟಿ ಪದ್ಧತಿ ರದ್ದಾಗಬೇಕು, ದುಬಾರಿ ಕಂದಾಯ ವಸೂಲಿ, ಗೇಣಿದಾರರ ಒಕ್ಕಲೆಬ್ಬಿಸುವಿಕೆ ನಿಷೇಧಿಸಬೇಕು ಮತ್ತು ಸಾಗುವಳಿ ಮಾಡುತ್ತಿರುವವರಿಗೆ ಹಕ್ಕುಪತ್ರ ನೀಡಬೇಕು, ಕಂದಾಯ ಮತ್ತು ಗೇಣಿಯನ್ನು ತೀವ್ರ ಇಳಿಸಬೇಕು, ಸರ್ವೆ ಇತ್ಯರ್ಥವನ್ನು ಕಡ್ಡಾಯಗೊಳಿಸಬೇಕು, ನೀರಾ ಇಳಿಸುವ ಮರಗಳ ಮೇಲಿನ ತೆರಿಗೆ ರದ್ದು ಮಾಡಬೇಕು, ಜಾಗೀರುದಾರಿಯನ್ನು ಕೊನೆಗೊಳಿಸಬೇಕು ಮತ್ತು ಸಂಪೂರ್ಣ ಜವಾಬ್ದಾರಿ ಸರ್ಕಾರ ಬೇಕು ಮುಂತಾದ ಬೇಡಿಕೆಗಳ ಆಧಾರದಲ್ಲಿ ಕಮ್ಯುನಿಸ್ಟರ ನೇತೃತ್ವದ ಎಡಪಂಥೀಯರು ಜನರನ್ನು ಸಂಘಟಿಸಿದರು.

1944ರ ಆರಂಭದಿಂದ, ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಆಂಧ್ರ ಮಹಾಸಭಾವು ಜಮೀನ್ದಾರರು ಮತ್ತು ದೇಶಮುಖರ ವಿರುದ್ಧ ಅನೇಕ ಹೋರಾಟಗಳನ್ನು ನಡೆಸಿತು. ಸಂಘಂ ಎಂದು ಅಕ್ಕರೆಯಿಂದ ಕರೆಯಲ್ಪಡುತ್ತಿದ್ದ ಆಂಧ್ರ ಮಹಾಸಭಾವು ಜಮೀನುಗಳಲ್ಲಿ ಕೆಂಬಾವುಟಗಳನ್ನು ನೆಟ್ಟು ಹೋರಾಟಗಳಿಗೆ ಮುಂದಾಳತ್ವ ನೀಡಿತು. ಸಂಘಂ ನೇತೃತ್ವದಲ್ಲಿ ಜನರು ಗೂಂಡಾಗಿರಿಯನ್ನು ತಡೆಗಟ್ಟಿದರು, ದೊಡ್ಡ ಜಮೀನ್ದಾರರಿಗೆ ಲಂಚ ಮತ್ತು ನಜರ್ ಕೊಡುವುದನ್ನು ಹಾಗೂ ವೆಟ್ಟಿ ಪದ್ಧತಿಯನ್ನು ನಿಲ್ಲಿಸಿದರು.

ಈ ಹಿನ್ನೆಲೆಯಲ್ಲಿ, 1946ರಲ್ಲಿ, ಜಂಗಾಂವ್ ತಾಲೂಕಿನಲ್ಲಿ ದ್ವೇಷಿಸಲ್ಪಡುತ್ತಿದ್ದ ದೇಶಮುಖ್, ವಿಸ್ನೂರ್ ರಾಮಚಂದ್ರ ರೆಡ್ಡಿಯು ಐಲಮ್ಮ ಎಂಬುವವಳ ಜಮೀನನ್ನು ಬಲವಂತವಾಗಿ ವಶಪಡಿಸಿಕೊಳ್ಳಲು ಯತ್ನಿಸಿದ; ಐಲಮ್ಮ ಸಂಘಂನ ನಿಷ್ಠಾವಂತ ಬೆಂಬಲಿಗಳು ಮತ್ತು ಕಾರ್ಯಕರ್ತೆ; ದೇಶಮುಖ ಫಸಲನ್ನು ನೇರವಾಗಿ ಜಮೀನಿನಿಂದ ವಶಪಡಿಸಿಕೊಳ್ಳಲು ಯೋಜಿಸಿದ್ದ. ಸಂಘಂನ ಸ್ವಯಂಸೇವಕರು ಲಾಠಿ ಹಿಡಿದು ಆವೇಶದಿಂದ ಬರುತ್ತಿರುವುದನ್ನು ನೋಡಿದ ಅವನ ಗೂಂಡಾಗಳು ಎದ್ದೆನೋ ಬಿದ್ದೆನೋ ಎಂದು ಓಡಿದರು. ಫಸಲನ್ನು ಸಂಗ್ರಹ ಮಾಡಿ ಐಲಮ್ಮನ ಮನೆಗೆ ಸಾಗಿಸಲಾಯಿತು. ಅದೇ ರಾತ್ರಿ ಪೋಲಿಸರು ಬಂದರು, ಆದರೆ ಐಲಮ್ಮನ ಮನೆಯಲ್ಲಿದ್ದ ಫಸಲನ್ನು ಮುಟ್ಟುವ ಧೈರ್ಯ ಮಾಡಲಿಲ್ಲ. ಈ ಘಟನೆ ಜನರ ಕಲಿತನವನ್ನು ಎಬ್ಬಿಸಿತು ಮತ್ತು ತೆಲಂಗಾಣ ಹೋರಾಟಕ್ಕೆ ಕಿಡಿ ಹಚ್ಚಿತು.

ಈ ಘಟನೆಯ ನಂತರ, ಜುಲೈ 4, 1946ರಂದು, ಒಂದು ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು; ಜಮೀನ್ದಾರನ ಬಾಲಬಡುಕರು ಗುಂಡು ಹಾರಿಸಿದರು, ಆ ಹಳ್ಳಿಯ ಸಂಘಂನ ಮುಖಂಡ ದೊಡ್ಡಿ ಕೊಮರಯ್ಯ ಗುಂಡಿಗೆ ಬಲಿಯಾದರು. ಕೊಮರಯ್ಯನ ಪ್ರಾಣತ್ಯಾಗದಿಂದ ತೆಲಂಗಾಣ ರೈತರ ಮಡುಗಟ್ಟಿದ್ದ ಕೋಪವು ಭುಗಿಲೆದ್ದಿತು. ನಲ್ಗೊಂಡಾದ ಎಲ್ಲಾ ತಾಲೂಕಿನ ಜನರು ಸಾಮೂಹಿಕವಾಗಿ ದಂಗೆಯೆದ್ದರು. ಒಂದು ಹಳ್ಳಿಯ ಜನರು ದೊಣ್ಣೆ ಮತ್ತು ಕವಣೆಗಳನ್ನು ಹಿಡಿದುಕೊಂಡು ಸುತ್ತಮುತ್ತಲ ಹಳ್ಳಿಗಳಿಗೆ ಹೋಗಿ ಅವರನ್ನು ಬಡಿದೆಬ್ಬಿಸುತ್ತಿದ್ದರು. ಈ ಮೆರವಣಿಗೆಗಳ ವಿಶೇಷತೆ ಏನೆಂದರೆ ಪುರುಷರ ಜತೆ ಮಹಿಳೆಯರೂ ತಮ್ಮ ಹಳ್ಳಿಯಲ್ಲಿ ಮಾತ್ರವಲ್ಲ ಇತರ ಹಳ್ಳಿಗಳಲ್ಲಿ ಕೂಡ ಪಾಲ್ಗೊಂಡರು. ಬೇರೆ ಹಳ್ಳಿಗಳಿಂದ ಬಂದವರಿಗೆ ಜಾತಿ ಧರ್ಮದ ಬೇಧವಿಲ್ಲದೇ ಎಲ್ಲರಿಗೂ ಉಣಬಡಿಸಿದರು. ಅವರು ಎಲ್ಲರೂ ಒಟ್ಟುಗೂಡಿ ದೇಶಮುಖ್ ಅಥವಾ

ಪುಟ 14 ನೋಡಿ



ಕೊವಿಡ್ ಸಮರದಲ್ಲಿ 'ತಪ್ಪುಗಳಾಗಿವೆ' ಎಂದರಾ ಗೃಹಮಂತ್ರಿಗಳು!

ಕೇಂದ್ರ ಗೃಹಮಂತ್ರಿಗಳು ಕೊನೆಗೂ ಕೊವಿಡ್ ರಂಗದಲ್ಲಿ "ತಪ್ಪುಗಳು" ಆಗಿವೆ, "ಕೊರತೆಗಳು" ಇದ್ದವು ಎಂದು ಒಪ್ಪಿಕೊಂಡಿದ್ದಾರೆ. ನಿಜ, ಅದನ್ನು ಹೇಳಿದ ಉಸಿರಿನಲ್ಲೇ "ಆದರೆ ವಿರೋಧ ಪಕ್ಷಗಳು ಏನು ಮಾಡಿವೆ?" ಎಂಬ ವಿಲಕ್ಷಣ ಪ್ರಶ್ನೆ ಕೇಳಿದ್ದಾರೆ ಎಂಬುದು ಬೇರೆ ಮಾತು. ಅವರು ಪೋಷಿಸಿಕೊಂಡು ಬಂದಿರುವ ಕೆಲವು ಟಿವಿ ವಾಹಿನಿಗಳು ಕಳೆದ ಐದು ವರ್ಷಗಳಿಂದ ಹೇಳುತ್ತಿದ್ದುದನ್ನು ಈಗ ಅವರೇ ಪುನರುಚ್ಚರಿಸಿದ್ದಾರೆ.

ಅದಿರಲಿ, ಮೋದಿ ಸರಕಾರ ಚಪ್ಪಾಳೆ, ತಟ್ಟೆ ಬಾರಿಸುವುದರೊಂದಿಗೆ ಆರಂಭಿಸಿದ 'ಮಹಾಮಾರಿಯ ವಿರುದ್ಧ ಮಹಾಭಾರತ ಸಮರದಲ್ಲಿ ವಿಫಲವಾಗಿದೆ ಎಂಬುದರಲ್ಲಿ ಈಗ ಸಂದೇಹವೇನೂ ಬೇಕಿಲ್ಲ. ಏಕೆಂದರೆ ಅದರ ಒಬ್ಬ ಪ್ರಮುಖ ಸಾರಥಿಯೇ ಒಪ್ಪಿಕೊಂಡಿದ್ದಾರೆ.

ಪರಿಣಿತರು ಈ ಮೊದಲೇ ಈ ತೀರ್ಮಾನಕ್ಕೆ ಬಂದಿದ್ದರು. ಏಕೆಂದರೆ ಮಾರ್ಚ್ 24ರಂದು ಪ್ರಧಾನ ಮಂತ್ರಿಗಳು 18ದಿನಗಳ ಲಾಕ್‌ಡೌನ್ ಘೋಷಿಸಿದಾಗ ಸೋಂಕಿತರ ಸಂಖ್ಯೆ 519 ಇತ್ತು, 10 ಸಾವುಗಳು ದಾಖಲಾಗಿದ್ದವು.

* ಅದನ್ನು ಮೊದಲ ಬಾರಿಗೆ ವಿಸ್ತರಿಸಿದಾಗ, ಎಪ್ರಿಲ್ 14 ರಂದು ಅದು 10815 ಕ್ಕೆ ಏರಿತ್ತು. ಸಾವುಗಳ ಸಂಖ್ಯೆ 353 ಆಗಿತ್ತು.

* ಮೇ 1 ರಂದು ಎರಡನೇ ವಿಸ್ತರಣೆಗೆ ಸಿದ್ಧರಾಗಬೇಕಾದಾಗ ಸೋಂಕಿತರ ಸಂಖ್ಯೆ 35,365ಆಗಿತ್ತು, ಸಾವುಗಳ ಸಂಖ್ಯೆ ಸಾವಿರ ದಾಟಿತು, ನಿಖರವಾಗಿ 1152.

* ಮೂರನೇ ವಿಸ್ತರಣೆ ಪ್ರಕಟಿಸುವ ವೇಳೆಗೆ, ಮೇ 15ರಂದು ಅದು ಲಕ್ಷವನ್ನು ಸಮೀಪಿಸುತ್ತಿತ್ತು, ಸೋಂಕಿತರ ಸಂಖ್ಯೆ 81,970, ಸಾವುಗಳ ಸಂಖ್ಯೆ 2649. ಮುಂದೆ ನಾಲ್ಕೇ ದಿನಗಳಲ್ಲಿ ಒಂದು ಲಕ್ಷ ದಾಟಿತು, ಸಾವುಗಳ ಸಂಖ್ಯೆ ಮೂರು ಸಾವಿರ ದಾಟಿತು.

* ಜೂನ್ 1 ರಂದು ತುಸು ಸಡಿಲಿಕೆಗಳೊಂದಿಗೆ ಮತ್ತೊಮ್ಮೆ ಲಾಕ್‌ಡೌನ್ ವಿಸ್ತರಣೆಯಾದಾಗ, ಸೋಂಕಿತರ ಸಂಖ್ಯೆ 2 ಲಕ್ಷದ ಹತ್ತಿರ ಬಂದಿತ್ತು (1,90,535), ಸಾವುಗಳ ಸಂಖ್ಯೆ 5ಸಾವಿರ ದಾಟಿತು(5394).

ಈ ವೇಳೆಗಾಗಲೇ ಕೊರೊನ ವೈರಾಣುವನ್ನು ಬಡಿದೋಡಿಸುವ ಚಪ್ಪಾಳೆ, ತಟ್ಟೆ , ಮೋಂಬತ್ತಿ/ಮೊಬೈಲ್ ಟಾರ್ಚ್ ಹಚ್ಚಿ ಬಡಿದೋಡಿಸುವ ಮಾತಾಡುತ್ತಿದ್ದವರು ಅದರೊಂದಿಗೆ ಬದುಕಲು ಕಲಿಯಬೇಕು ಎಂದು ಹೇಳಲಾರಂಭಿಸಿದ್ದಾರೆ. ಯಾರನ್ನೂ ಕೇಳದೆ ದಿಢೀರಾಗಿ ಲಾಕ್‌ಡೌನ್ ಘೋಷಿಸಿದ ಪ್ರಧಾನ ಮಂತ್ರಿಗಳು ಈ ವೇಳೆಗೆ ಮುಖ್ಯಮಂತ್ರಿಗಳೊಡನೆ ವಿಡಿಯೋ ಸಮಾಲೋಚನೆ ಮಾಡಲಾರಂಭಿಸಿದ್ದರು.

ಈಗ, ಜೂನ್ 18ರ ರಾತ್ರಿ ಸೋಂಕಿತರ ಒಟ್ಟು ಸಂಖ್ಯೆ 3,80, 532, ಸಾವುಗಳ ಸಂಖ್ಯೆ 12,573.

ಕಳೆದ ಒಂದು ವಾರದಲ್ಲಿ ಪ್ರತಿದಿನ ಹೊಸದಾಗಿ ಸೊಂಕಿತರಾದವರ ಸಂಖ್ಯೆ ಸತತವಾಗಿ 10ಸಾವಿರಕ್ಕಿಂತ ಮೇಲೆ ಇದೆ. (ಕೋಷ್ಟಕ ನೋಡಿ)

ಜೂನ್ 18ರಂದು 13586 ಹೊಸ ಕೇಸುಗಳೊಂದಿಗೆ ಭಾರತ ಈಗ ಕೊವಿಡೊ ಕೋಷ್ಟಕದಲ್ಲಿ ಅಮೆರಿಕ ಮತ್ತು ಬ್ರೆಝಿಲ್ ನಂತರ ಮೂರನೇ ಸ್ಥಾನಕ್ಕೇರಿದೆ.

ಈ ನಡುವೆ, ಮುಖ್ಯವಾಗಿ ಮುಂಬೈ ಮತ್ತು ದಿಲ್ಲಿಯಲ್ಲಿ ಕೊರೊನ ಪೀಡಿತರ ಶುಶ್ರೂಷೆಗೆ ಆಸ್ಪತ್ರೆ ಹಾಸಿಗೆಗಳ ಕೊರತೆಯ ಪ್ರಶ್ನೆ ಎದುರಾಗಿದೆ, ಗುಜರಾತ್ ಮತ್ತಿತರ ಕಡೆಗಳಲ್ಲಿ ಡಾಕ್ಟರುಗಳು, ನರ್ಸ್‌ಗಳ ಕೊರತೆಯ ಪ್ರಶ್ನೆ ಎದುರಾಗಿದ್ದರೆ, ದಿಲ್ಲಿಯಲ್ಲಿ ಕೊವಿಡ್ ಸಮರದ ಮುಂಚೂಣಿಯಲ್ಲಿರುವವರಿಗೆ ಪಿ.ಪಿ.ಇ.ಗಳ ಕೊರತೆ ಮಾತ್ರವಲ್ಲ, ಸಂಬಳವೂ ಪಾವತಿಯಾಗಿರದ ಪ್ರಶ್ನೆ ಎದ್ದಿದೆ.

ಲಾಕ್‌ಡೌನ್ ಹಾಕುವುದರ ಉದ್ದೇಶ ಸೋಂಕು ಹರಡುವುದಕ್ಕೆ ತಾತ್ಕಾಲಿಕವಾಗಿ ತಡೆ ಹಾಕುವುದರೊಂದಿಗೆ ಅದನ್ನು ಎದುರಿಸಲು ಸರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲು ಸಮಯಾವಕಾಶವನ್ನು ಪಡೆಯುವುದು ಎಂದು ಸಾಂಕ್ರಾಮಿಕಗಳ ಅಧ್ಯಯನ ಮಾಡಿರುವ ಪರಿಣಿತರು ಹೇಳುತ್ತಾರೆ. ಆದರೆ ಭಾರತದಲ್ಲಿ ಐದು ವಿಸ್ತರಣೆಗಳು ಅದನ್ನು ಸಾಧಿಸಿಲ್ಲ ಎಂಬುದನ್ನು ಮೇಲಿನ ಸಂಗತಿಗಳು ತೋರಿಸುತ್ತವೆ.

ಆದ್ದರಿಂದಲೇ ಪರಿಣೀತರು ಮೋದಿ ಸರಕಾರದ ಲಾಕ್‌ಡೌನ್ ವಿಫಲವಗಿದೆ ಎಂಬ ತೀರ್ಮಾನಕ್ಕೆ ಬಂದಿರುವುದು.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ, ಈ ಐದು ವಿಸ್ತರಣೆಗಳ ಸಮಯದಲ್ಲಿ ಬಹುಶಃ ನೇಪಥ್ಯದಲ್ಲಿ ಇದ್ದ ಗೃಹ ಮಂತ್ರಿಗಳು ಪರೋಕ್ಷವಾಗಿ ಇದನ್ನು ಒಪ್ಪಿಕೊಂಡದ್ದು ಬಿಹಾರದ ಜನತೆಯನ್ನುದ್ದೇಶಿಸಿ ಮಾತಾಡಿದ 'ಡಿಜಿಟಲ್ ರ್‍ಯಾಲಿ'ಯಲ್ಲಿ. ಇದು ಎರಡನೇ ಮೋದಿ ಸರಕಾರ ಮೊದಲ ವರ್ಷ ಪುರೈಸಿದ ಆಚರಣೆಯ ರ್‍ಯಾಲಿ ಎನ್ನಲಾಗಿದೆ. ಆದರೆ ಇದು ಚುನಾವಣಾ ರ್‍ಯಾಲಿ ಎಂಬುದು ಇದರ ನಂತರ ಪಶ್ಚಿಮ ಬಂಗಾಲದ 'ಜನತೆ(ಮತದಾರರು?)ಯನ್ನುದ್ದೇಶಿಸಿ ಅವರು ಮಾತಾಡಿರುವುದು ಖಾತ್ರಿಪಡಿಸಿದೆ. ಎಕೆಂದರೆ ಈ ಎರಡು ರಾಜ್ಯಗಳಲ್ಲಿ ಈ ವರ್ಷವಿಧಾನಸಭಾ ಚುನಾವಣೆಗಳು ನಡೆಯಲಿವೆ. ಆದ್ದರಿಂದಲೇ ಬಹುಶಃ ಅವರು ವಲಸೆ ಕಾರ್ಮಿಕರ ಬಗ್ಗೆಯೂ ಮಾತಾಡಿದರು!

ದಿನಾಂಕ	ಸೋಂಕಿತರು	ಗುಣಮುಖರಾದವರು	ಸಾವುಗಳು
ಮಾರ್ಚ್24	519	40	10
ಎಪ್ರಿಲ್ 14	10815	1190	353
ಮೇ 01	35365	9065	1152
ಮೇ 15	81970	27920	2649
ಜೂನ್ 01	190535	91819	5394
ಜೂನ್ 12	297535	147195	8498
ಜೂನ್ 13	308993	154330	8884
ಜೂನ್ 14	320922	162379	9195
ಜೂನ್ 15	343091	180013	9900
ಜೂನ್ 16	354065	186935	11903
ಜೂನ್ 17	366946	194325	12237
ಜೂನ್ 18	380532	204711	12573

ಮನರೇಗದಲ್ಲಿ ಕೆಲಸ ನಿರಾಕರಣೆ – ಹೊಸ 'ಜಿಕೆಆರ್‌ಎ' ನಲ್ಲಿ?

ಇದಾದ ಮೇಲೆ ಹಣಕಾಸು ಮಂತ್ರಿಗಳು ತಮ್ಮ ಊರುಗಳಿಗೆ ಮರಳಿದ ವಲಸೆ ಕಾರ್ಮಿಕರಿಗೆ 50 ಸಾವಿರ ಕೋಟಿ ರೂ.ಗಳ ಹೊಸ ಉದ್ಯೋಗ ಯೋಜನೆಯನ್ನು ಪ್ರಕಟಿಸಿದ್ದಾರೆ. ಜೂನ್ 20ರಂದು ಈ 'ಗರೀಬ್ ಕಲ್ಯಾಣ್ ರೋಜ್‌ಗಾರ್ ಅಭಿಯಾನ್'(ಜಿಕೆಆರ್‌ಎ) ಪ್ರಧಾನ ಮಂತ್ರಿಗಳು ಬಿಹಾರದ ಖಗರಿಯ ಜಿಲ್ಲೆಯ ತೆಲಿಹಾರ್ ಎಂಬ ಹಳ್ಳಿಯಲ್ಲಿ ಉದ್ಘಾಟಿಸುತ್ತಾರಂತೆ. ಅಂದರೆ ಇದೂ ಚುನಾವಣೆಗಳಿಗೆ ಸಿದ್ಧವಾಗುತ್ತಿರುವ ಬಿಹಾರದಲ್ಲಿ!

ಇದು ಮನರೇಗದಂತಹ ಯೋಜನೆಯಂತೆ. ಮನರೇಗವನ್ನು ಹೀಗಳೆದವರು ಈಗ ಮತಗಳಿಕೆಗಾದರೂ ಅದಕ್ಕೇ ಮೊರೆ ಹೋಗುತ್ತಿದ್ದಾರೆ.

ಅದೇನೇ ಇರಲಿ, ಮನರೇಗದ ಪರಿಸ್ಥಿತಿಯಾದರೂ ಏನು?

ಎಪ್ರಿಲ್ 1ರಿಂದ ಈ 'ಹಣಕಾಸು ವರ್ಷದ ಎರಡೂವರೆ ತಿಂಗಳಲ್ಲಿ ಇದುವರೆಗೆ 7.3 ಕೋಟಿ ಮಂದಿ ಉದ್ಯೋಗಕ್ಕೆ ಅರ್ಜಿ ಹಾಕಿಕೊಂಡಿದ್ದಾರೆ. ಅವರಲ್ಲಿ 2 ಕೋಟಿ ಮಂದಿಗೆ ಉದ್ಯೋಗ ನಿರಾಕರಿಸಲಾಗಿದೆ ಎಂದು ತಿಳಿದು ಬಂದಿದೆ.(ನ್ಯುಸ್‌ಕ್ಲಿಕ್, ಜೂನ್18). ಇತ್ತೀಚೆಗೆ ಇದೇ ಹಣಕಾಸು ಮಂತ್ರಿಗಳು ಮನರೇಗಕ್ಕೆ 40,000 ಕೋಟಿ ರೂ. ಹೆಚ್ಚುವರಿ ಹಣ ಒದಗಿಸುವುದಾಗಿ ಹೇಳಿದ ಮೇಲೂ ಈ ಪರಿಸ್ಥಿತಿ! ಇನ್ನು 50,000 ಕೋಟಿ ರೂ. ಕಾರ್ಯಕ್ರಮದ ಗತಿಯೇನು ಎಂದು ಕಾದು ನೋಡಬೇಕಷ್ಟೇ.

'ಸ್ವಾವಲಂಬನೆ'ಯ ಹೆಸರಲ್ಲಿ ಆದಿವಾಸಿ ಸಮುದಾಯಗಳ ಸ್ವಾವಲಂಬನೆಗೆ ಕುತ್ತು?

20 ಲಕ್ಷ ಕೋಟಿ ರೂ. ಪ್ಯಾಕೇಜಿನಲ್ಲಿ ಹೆಚ್ಚುವರಿ ಮನರೇಗ ಹಣದಿಂದಲೂ 2 ಕೋಟಿ ಮಂದಿಗೆ ಉದ್ಯೋಗ ನಿರಾಕರಣೆಯ ಸುದ್ದಿಯ ಜೊತೆಗೇ ಆ ಪ್ಯಾಕೇಜಿನ ಭಾಗವಾದ ಕಲ್ಲಿದಲು ವಲಯದ 'ಸ್ವಾವಲಂಬನೆ' ಜಾರಿಗೆ ಬರುತ್ತಿರುವ ಸುದ್ದಿಯೂ ಬಂದಿದೆ. ಪ್ರಧಾನ ಮಂತ್ರಿಗಳು ಜೂನ್ 16ರಂದು ವಾಣಿಜ್ಯ ಗಣಿಗಾರಿಕೆಗೆ 41 ಬ್ಲಾಕುಗಳ ಹರಾಜು ಪ್ರಕ್ರಿಯೆಯನ್ನು ಆರಂಭಿಸಿದ್ದಾರೆ. ಲಾಕ್‌ಡೌನಿನ ಭಾಷೆಯಲ್ಲಿ ಮಾತಾಡುತ್ತ ಇದುವರೆಗೆ ಲಾಕ್ ಆಗಿದ್ದ ಈ ಸಂಪನ್ಮೂಲದ ಮೌಲ್ಯ ಈಗ ಅನ್‌ಲಾಕ್ ಆಗುತ್ತಿದೆ ಎಂದು ವರ್ಣಿಸಿದರು ಎಂದು ವರದಿಯಾಗಿದೆ.

ಇನ್ನೊಂದೆಡೆಯಲ್ಲಿ ವಾಣಿಜ್ಯ ಗಣಿಗಾರಿಕೆಗೆ ಹಲವೆಡೆಗಳಿಂದ ವಿರೋಧಗಳು ಮುಂದುವರೆಯುತ್ತಿವೆ. ಈ ಪ್ರಕ್ರಿಯೆ ದೇಶಕ್ಕೆ ಕಲ್ಲಿದ್ದಲಿನ ಆವಶ್ಯಕತೆ, ಪರಿಸರ, ಸಾಮಾಜಿಕ ನ್ಯಾಯಕ್ಕೆ ಸಂಬಂಧಪಟ್ಟಂತೆ ಎದ್ದಿರುವ ಆತಂಕಗಳನ್ನೆಲ್ಲ ಉಪೇಕ್ಷಿಸಿ ಕಲ್ಲಿದ್ದಲನ್ನು ಒಂದು ಸರಕಾಗಿ ಪರಿವರ್ತಿಸುತ್ತದೆ, ಇದು ಪರಿಸರಕ್ಕೆ ಮಾರಕವಷ್ಟೇ ಅಲ್ಲ, ಅರಣ್ಯವಾಸಿ ಸಮುದಾಯಗಳ ಸುಸ್ಥಿರ ಜೀವನಾಧಾರಗಳ ಮೇಲೂ ದುಷ್ಪರಿಣಾಮ ಬೀರುತ್ತದೆ ಎಂಬುದು ಈ ರಂಗದ ಕಾರ್ಯಕರ್ತರ ಆಕ್ಷೇಪ.

ಕಲ್ಲಿದ್ದಲು ಒಂದು ರಾಷ್ಟ್ರೀಯ ಆಸ್ತಿ, ಜನತೆ ಅದರ ನಿಜವಾದ ಮಾಲಕರು ಎಂದು ಸುಪ್ರಿಂ ಕೋರ್ಟ್ ಸ್ಪಷ್ಟವಾಗಿ ಹೇಳಿತ್ತು. ಇದನ್ನು ಈ ಸರಕಾರ ಸಂಪೂರ್ಣವಾಗಿ ಬದಿಗೊತ್ತಿ ದೇಶದ ಭವಿಷ್ಯ ಮತ್ತು ಕಲ್ಯಾಣವನ್ನು ಖಾಸಗಿ ಕಂಪನಿಗಳ ಕೈಗೊಪ್ಪಿಸುತ್ತದೆ ಎಂದು ಆದಿವಾಸಿ, ದಲಿತರು, ರೈತರ ಸಂಘಟನೆಗಳು ಜಂಟಿಯಾಗಿ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿವೆ.

ಪ್ರಧಾನ ಮಂತ್ರಿಗಳು ಹೇಳಿದಂತೆ ಈ ಜನತಾ ಸಂಪತ್ತನ್ನು ಅನ್‌ಲಾಕ್ ಮಾಡುವ ಭರದಲ್ಲಿ ಕಲ್ಲಿದ್ದಲು ಗಣಿಗಳು ದಟ್ಟವಾಗಿರುವ ಪ್ರದೇಶದ ಅರಣ್ಯವಾಸಿಗಳನ್ನು ಅವರ ಪಾರಂಪರಿಕ ನೆಲೆಗಳಿಂದ, ಜೀವನಾಧಾರಗಳಿಂದ ಹೊರದಬ್ಬಲಾಗುತ್ತಿದೆ.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ, ಭಾರತದ ಕಲ್ಲಿದ್ದಲು ಅಗತ್ಯಗಳಿಗೆ ಹೊಸ ಕಲ್ಲಿದ್ದಲು ಗಣಿಗಳ ಅಗತ್ಯವೇನಿಲ್ಲ ಎಂದು ಕೋಲ್ ಇಂಡಿಯಾ ಕಣ್ಣೋಟ–2030 ಹೇಳಿದೆ. ಈಗಿರುವ ಮೂಲರಚನೆಯಿಂದಲೇ ಮುಂದಿನ ಹತ್ತು ವರ್ಷಗಳ ವರೆಗೆ ದೇಶದ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯ ಕೋಲ್ ಇಂಡಿಯಾಕ್ಕಿದೆ. ಆದ್ದರಿಂದ ಇಲ್ಲಿ 'ಸ್ವಾವಲಂಬನೆ'ಯ ಪ್ರಶ್ನೆಯೇ ಬರುವುದಿಲ್ಲ ಎನ್ನುವುದು ಈ ಹರಾಜು ಪ್ರಕ್ರಿಯೆಯ ವಿರೋಧಿಗಳ ವಾದ.

ಈ ಹರಾಜಿನಲ್ಲಿ ಸೇರಿಸಿರುವ ಗಣಿಗಳು ದಟ್ಟವಾದ ಅರಣ್ಯಗಳಲ್ಲಿ ಮತ್ತು ಪರಿಸರದ ದರಷ್ಟಿಯಿಂದ ಮಹತ್ವದ ಸ್ಥಳಗಳಲ್ಲಿ ಇವೆ. ಇವುಗಳಲ್ಲಿ ಬಹಳಷ್ಟು ಪ್ರದೇಶಗಳಿಗೆ ಹೋಗುವಂತಿಲ್ಲ. ಅಲ್ಲದೆ ಹೆಚ್ಚಿನ ಪ್ರದೇಶಗಳು ಐದನೇ ಶೆಡ್ಯುಲಿನ ಅಡಿಯಲ್ಲಿ ಬರುವ ಪ್ರದೇಶಗಳು. ಅಂದರೆ ಇಲ್ಲಿಯ ನಿವಾಸಿಗಳಿಗೆ ಪಂಚಾಯತುಗಳ ಕಾಯ್ದೆ ಮತ್ತು ಅರಣ್ಯ ಹಕ್ಕುಗಳ ಕಾಯ್ದೆಯ ಅಡಿಯಲ್ಲಿ ವಿಶೇಷ ಹಕ್ಕುಗಳಿವೆ. ಅಲ್ಲಿಯ ಚುನಾಯಿತ ಪಂಚಾಯತುಗಳ ಒಪ್ಪಿಗೆಯಿಲ್ಲದೆ ಗಣಿಗಾರಿಕೆ ಮಾಡುವಂತಿಲ್ಲ.

ಅಲ್ಲದೆ ಇವುಗಳಲ್ಲಿ ಹೆಚ್ಚಿನ ಕಲ್ಲಿದ್ದಲು ಬ್ಲಾಕುಗಳಿಗೆ ಪರಿಸರ ಮಂಜೂರಾತುಯೂ ಇಲ್ಲ, ಅರಣ್ಯ ಭೂಮಿ ಪರಿವರ್ತನೆಯ ಮಂಜೂರಾತಿಯೂ ಇಲ್ಲ ಎಂದೂ ಹೇಳಲಾಗಿದೆ.


ಛತ್ತೀಸ್ ಗಡ್‌ನ ಹಸ್ದೇವ್ ಅರಂದ್ ಪ್ರದೇಶದ ಹಲವು ಚುನಾಯಿತ ಸರಪಂಚರುಗಳು ಈ ಹರಾಜನ್ನು ವಿರೋಧಿಸಿ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ ಎಂದು ವರದಿಯಾಗಿದೆ. ಇದು ಛತ್ತೀಸ್ ಗಡ್‌ನ ಮೂರು ಜಿಲ್ಲೆಗಳಲ್ಲಿ ಹರಡಿರುವ ಪ್ರದೇಶ. ಈ ಪ್ರದೇಶದ 20 ಗ್ರಾಮಸಭೆಗಳು 2015ರಿಂದ ಮತ್ತೆ–ಮತ್ತೆ ಗಣಿಗಾರಿಕೆ, ಕಲ್ಲಿದ್ದಲು ಬ್ಲಾಕುಗಳ ಹರಾಜನ್ನು ವಿರೋಧಿಸಿ ನಿರ್ಣಯಗಳನ್ನು ಅಂಗೀಕರಿಸುತ್ತ ಬಂದಿವೆ, ಅದನ್ನು ಪ್ರಧಾನ ಮಂತ್ರಿಗಳಿಗೆ ಕಳಿಸಲಾಗಿದೆ.

ಮೇಲೆ ಹೇಳಿದಂತೆ ಈಗಿರುವ ಮೂಲರಚನೆಯಿಂದಲೇ ದೇಶದ ಕಲ್ಲಿದ್ದಲು ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಿದೆಯೆಂದಾದರೆ ಇಲ್ಲಿ 'ಸ್ವಾವಲಂಬನೆಯ ಪ್ರಶ್ನೆಯಿಲ್ಲ. ಇಲ್ಲಿರುವುದು ಒಂದೆಡೆಯಲ್ಲಿ ಕೆಲವು ಖಾಸಗೀ ಕುಳಗಳ ಖಾಸಗೀ ಲಾಭಗಳ ಪ್ರಶ್ನೆ ಮತ್ತು ಇನ್ನೊಂದೆಡೆಯಲ್ಲಿ 'ಸ್ವಾವಲ<ಬಿಯಾಗಿರುವ ಅರಣ್ಯವಾಸಿ ಸಮುದಾಯಗಳ ಸ್ವಾವಲಂಬನೆಯನ್ನು ನಾಶಮಾಡುವ ಪ್ರಶ್ನೆ.

ಈ ಹಿನ್ನೆಲೆಯಲ್ಲಿ ಕಲಿದ್ದಲು ಕಾರ್ಮಿಕರ ಸಂಘಗಳು ಮತ್ತು ಒಕ್ಕೂಟಗಳು ಒಂದಾಗಿ ಮೂರು ದಿನಗಳ ಮುಷ್ಕರ ನಡೆಸಲು ನಿರ್ಧರಿಸುರುವದು ಮಹತ್ವದ್ದಾಗಿದೆ. ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಇದನ್ನು ಬೆಂಬಲಿಸಿವೆ.



ಬಿಹಾರದ ವಲಸೆ ಕಾರ್ಮಿಕರಿಗೆ "ಮನೆಗೆ ಸ್ವಾಗತ'–ಮತಪಟ್ಟಿಗೆಯೊಂದಿಗೆ
ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್



ವಲಸೆ ಕಾರ್ಮಿಕರ ಬಗ್ಗೆ ಪ್ರೀತಿ–ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಸಾಮ್ರಾಜ್ಯಶಾಹಿಯ ಆಗ್ರಹಗಳಿಗಾಗಿ ಭಾರತದ ಆಹಾರ ಭದ್ರತೆಗೆ ಕತ್ತರಿ



ನವ ಉದಾರವಾದದ ಆಗಮನದೊಂದಿಗೆ, ಪಾಶ್ಚಿಮಾತ್ಯ ಬಂಡವಾಳದ ಬಯಕೆಯ ಬೆಳೆಗಳಿಗೆ ತಕ್ಕಂತೆ ಉಷ್ಣವಲಯದ ಭೂಮಿಯನ್ನು ಬಳಸಿಕೊಳ್ಳುವ ಸಲುವಾಗಿ ಆಹಾರ ಧಾನ್ಯಗಳ ಮೇಲಿನ ಬೇಡಿಕೆ–ಹಿಂಡುವ ಕೆಲಸ ಆರಂಭವಾಯಿತು.ಆದರೂ ಭಾರತದಲ್ಲಿ ಆಹಾರ ಉತ್ಪಾದನೆಯ ಮೇಲೆ ಒತ್ತು ಕೊಡುವ ಕ್ರಮದಿಂದ ಹಿಂದೆ ಸರಿಯಲು ಸಾಧ್ಯವಾಗಿರಲಿಲ್ಲ.
ಆದರೆ, ಮಧ್ಯಯುಗದ ಮನಸ್ಥಿತಿಯ, ಅಲ್ಪ ತಿಳುವಳಿಕೆಯ ಮಂದಿಯ ಪ್ರಸಕ್ತ ಆಳ್ವಿಕೆಯಲ್ಲಿ ಅದೂ ಸಾಧ್ಯವಾಗುತ್ತಿದೆ. ತನ್ನ ಅಜ್ಞಾನದಿಂದಾಗಿ ಈ ಸರಕಾರ ಸಾಮ್ರಾಜ್ಯಶಾಹಿ ಚಿಂತನೆಗಳನ್ನು ಅವಲಂಬಿಸುವಂತಾಗಿರುವುದು ಸಾಮ್ರಾಜ್ಯಶಾಹಿಯ ಕೈಯಲ್ಲಿ ಒಂದು ದಾಳವೂ ಆಗುತ್ತಿದೆ. ಕೃಷಿ ನೀತಿಯಲ್ಲಿ ಬಿಜೆಪಿ ಸರಕಾರವು ಇತ್ತೀಚೆಗೆ ಮಾಡಿರುವ ಬದಲಾವಣೆಗಳು ಈ ಮಾತಿಗೆ ಸಾಕ್ಷಿ. ಸಾಮ್ರಾಜ್ಯಶಾಹಿಗೆ ಸಾಷ್ಟಾಂಗ ನಮಸ್ಕಾರ ಹಾಕುವ ಬಿಜೆಪಿ ಸರಕಾರವು, ಭಾರತೀಯ ಜನತೆಯನ್ನು ಹಸಿವು ಮತ್ತು ಸಂಭವನೀಯ ಕ್ಷಾಮಗಳ ಹಾದಿಗೆ ತಂದು ಹಾಕಿದೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಉಷ್ಣವಲಯದ ಪ್ರದೇಶಗಳಲ್ಲಿ ಕಾಫಿ, ಟೀ, ತರಕಾರಿ, ಹಣ್ಣುಗಳು, ವಿವಿಧ ಧಾನ್ಯಗಳು, ಬೇಳೆ ಕಾಳು ಮತ್ತು ಎಣ್ಣೆ ಬೀಜಗಳನ್ನು ವರ್ಷವಿಡೀ ಬೆಳೆಯಬಹುದು. ಆದರೆ, ಮಹಾನಗರ (ಮೆಟ್ರೊಪಾಲಿಟನ್) ಕೇಂದ್ರಿತ ಬಂಡವಾಳಶಾಹಿಯ ನೆಲೆಯಾಗಿರುವ ಜಗತ್ತಿನ ಶೀತ ಸಮಶೀತೋಷ್ಣವಲಯದ ಪ್ರದೇಶಗಳಲ್ಲಿ, ಅಂತಹ ಬೆಳೆಗಳನ್ನು ಬೆಳೆಯುವುದಿಲ್ಲ ಅಥವಾ ವರ್ಷದ ಬಹು ಭಾಗ ಕಾಲ ಬೆಳೆಯುವುದಿಲ್ಲ. ಉಷ್ಣವಲಯದ ಭೂ ಪ್ರದೇಶವು ವಿಸ್ತೀರ್ಣದಲ್ಲಿ ಬದಲಾಗದು ಮತ್ತು ಈಗಾಗಲೇ ಅದು ಬಳಕೆಯಾಗಿದೆ. ಆದ್ದರಿಂದ ಇಂತಹ ಬೆಳೆಗಳ ಬೇಸಾಯಕ್ಕೆ ಯೋಗ್ಯವಾದ ಭೂಮಿಯ ಪೂರೈಕೆಯನ್ನು ಹೆಚ್ಚಿಸಬಹುದಾದ ಭೂ ಉತ್ಪಾದಕತೆಯನ್ನು ಹೆಚ್ಚಿಸಲು ಪ್ರಭುತ್ವದ ಬಂಡವಾಳ ಹೂಡಿಕೆ ಅಗತ್ಯವಾಗುತ್ತದೆ (ಈ ಅಂಶವನ್ನು ಮಾರ್ಕ್ಸ್ ಬಹಳ ತೀಕ್ಷ್ಣವಾಗಿ ಗಮನಿಸಿದ್ದರು). ಆದರೆ, ಇದಕ್ಕೆ ಮಹಾನಗರೀಯ ಬಂಡವಾಳಶಾಹಿ ಅನುಮತಿ ಕೊಡುವುದಿಲ್ಲ. ಅದರ ಸುವರ್ಣ ಮಾನದಂಡದ ಪ್ರಕಾರ ಬಜೆಟಿನಲ್ಲಿ ಸರ್ಕಾರದ ಖರ್ಚುಗಳು ಮತ್ತು ವೆಚ್ಚಗಳಲ್ಲಿ ಸಮತೋಲನ ಇರಬೇಕು ಅಥವಾ ನವ ಉದಾರವಾದದ ಅಡಿಯಲ್ಲಿ ಸರ್ಕಾರದ ವಿತ್ತೀಯ ಕೊರತೆಯು ಜಿಡಿಪಿಯ ಒಂದು ನಿರ್ದಿಷ್ಟ ಶೇಕಡಾವಾರಿಗಿಂತ ಕಡಿಮೆ ಇರಬೇಕು. ಆದ್ದರಿಂದಇಂತಹ 'ವಿತ್ತೀಯ ನೇಮನಿಷ್ಠೆ' ಪಾಲಿಸುವ ಸರಕಾರ ಹೂಡಿಕೆ ಮಾಡುವಂತಿಲ್ಲ.

ಹಾಗಾಗಿ, ಮೆಟ್ರೊಪಾಲಿಟನ್ ಬಂಡವಾಳಶಾಹಿಯ ಮುಂದಿರುವ ಒಂದು ಸಮಸ್ಯೆ ಎಂದರೆ: ತನಗೆ ಬೇಕಾದ ಉತ್ಪನ್ನಗಳನ್ನು ಪಡೆಯಲು ಉಷ್ಣವಲಯದ ಭೂ–ರಾಶಿಯ ಬಳಕೆಯ ಮೇಲೆ ನಿಯಂತ್ರಣವನ್ನು ಪಡೆಯುವುದು ಹೇಗೆ? ಅಲ್ಲದೆ, ಇಂತಹ ನಿಯಂತ್ರಣದಿಂದಾಗಿ ದೇಶೀಯ ಆಹಾರದ ಉತ್ಪಾದನೆ ಕುಗ್ಗುತ್ತದೆ. ಆದ್ದರಿಂದ, ಮೂರನೆಯ ಜಗತ್ತಿನ ದೇಶಗಳಲ್ಲಿ, ಆಹಾರ ಧಾನ್ಯಗಳನ್ನು ಬೆಳೆಯುವುದರ ಬದಲಾಗಿ ಮೆಟ್ರೊಪಾಲಿಟನ್ ಬಂಡವಾಳಶಾಹಿ ದೇಶಗಳಿಗೆ ಬೇಕಾಗಿರುವುದನ್ನು ಬೆಳೆಯುವಂತೆ (ಭೂ–ಬಳಕೆ) ಮೂರನೇ ಜಗತ್ತಿನ ದೇಶಗಳ ಮನವೊಲಿಸಬೇಕಾಗುತ್ತದೆ. ಅಂದರೆ, ಉಷ್ಣವಲಯದ ಕೃಷಿಯನನು ಜಾಗತಿಕ ವ್ಯಾಪಾರದ ವ್ಯಾಪ್ತಿಗೆ ತರುವಂತೆ ಅವರ ಮನವೊಲಿಸಬೇಕಾಗುತ್ತದೆ. ಒಮ್ಮೆ ಈ ಬಯಕೆ ಈಡೇರಿದರೆ, ಮುಂದೆ ಏನು ಮಾಡಬೇಕೋ ಆ ಕೆಲಸವನ್ನು ಮಹಾನಗರಗಳ ಖರೀದಿ ಶಕ್ತಿಯ ಸೆಳೆತವೇ ಮಾಡುತ್ತದೆ.

ವಸಾಹತುಶಾಹಿ ಆಡಳಿತದ ಕಾಲದಲ್ಲಿ ಇಂತಹ ವಿಷಯ–ವ್ಯವಹಾರಗಳನ್ನು ನಿರ್ವಹಿಸುವುದು ಸುಲಭ'ವಾಗಿತ್ತು. ತೆರಿಗೆ ವ್ಯವಸ್ಥೆಯನ್ನು ಬಳಕೆಮಾಡಿಕೊಂಡು, ಆಹಾರ ಧಾನ್ಯಗಳ ಮೇಲಿನ ದೇಶೀಯ ಬೇಡಿಕೆಯನ್ನು ಹದ್ದುಬಸ್ತಿನಲ್ಲಿಟ್ಟು, ಮಹಾನಗರಗಳು ಬಯಸುವ ಕೃಷಿ ಉತ್ಪನ್ನಗಳನ್ನು ಬೆಳೆಯಲು ಅನುಮತಿ ಕೊಟ್ಟದ್ದು ಮಾತ್ರವಲ್ಲ ಅದೇ ತೆರಿಗೆಯನ್ನು ಬಳಸಿಕೊಂಡು ಆ ಉತ್ಪನ್ನಗಳನ್ನು ಪುಕ್ಕಟೆಯಾಗಿಯೇ ಪಡೆಯಲಾಗುತ್ತಿತ್ತು. ಸ್ವಾತಂತ್ರ್ಯಾನಂತರದಲ್ಲಿ ಆಹಾರ ಧಾನ್ಯಗಳ ಹೆಚ್ಚು ಉತ್ಪಾದನೆ ಆದ್ಯತೆ ಪಡೆಯಿತು. ಆದರೆ, ನವ ಉದಾರವಾದದ ಆಗಮನದೊಂದಿಗೆ, ಮಹಾನಗರಗಳ ಬಯಕೆಯ ಬೆಳೆಗಳಿಗೆ ತಕ್ಕಂತೆ ಉಷ್ಣವಲಯದ ಭೂಮಿಯನ್ನು ಬಳಸಿಕೊಳ್ಳುವ ಸಲುವಾಗಿ ಬೇರೆ ಬೇರೆ ರೀತಿಯಲ್ಲಿ ಆಹಾರ ಧಾನ್ಯಗಳ ಮೇಲಿನ ಬೇಡಿಕೆ–ಹಿಂಡುವ ಕೆಲಸ ಆರಂಭವಾಯಿತು.

ಆದರೂ ಭಾರತದಲ್ಲಿ ಆಹಾರ ಉತ್ಪಾದನೆಯ ಮೇಲೆ ಒತ್ತು ಕೊಡುವ ಕ್ರಮದಿಂದ ಹಿಂದೆ ಸರಿಯಲು ಸಾಧ್ಯವಾಗಲಿಲ್ಲ. ಸಾಮ್ರಾಜ್ಯಶಾಹಿ ದೇಶಗಳು ವಿಶ್ವ ವ್ಯಾಪಾರ ಸಂಸ್ಥೆಯ ಮೂಲಕ, ಆಹಾರ ಧಾನ್ಯಗಳ ಉತ್ಪಾದನೆಯನ್ನು ಬೆಂಬಲಿಸುವಂತಹ ಒಂದು ನಿರ್ಣಾಯಕ ಸಾಧನವಾದ ಪೂರ್ವ ಘೋಷಿತ ಬೆಲೆಗಳಲ್ಲಿ ಧಾನ್ಯಗಳ ಖರೀದಿ ವ್ಯವಸ್ಥೆಯನ್ನು ಹಿಂಪಡೆಯುವಂತೆ ಭಾರತದ ಮೇಲೆ ಒತ್ತಡ ಹೇರಿದವು. ಆದರೆ, ಭಾರತದ ಯಾವ ಸರ್ಕಾರವೂ ಇಂತಹ ಒತ್ತಡಕ್ಕೆ ಮಣಿಯುವುದು ಸಾಧ್ಯವಿರಲಿಲ್ಲ.

1991ರಿಂದ 2015–16ರ ನಡುವೆ ತಲಾ ಆಹಾರ ಉತ್ಪಾದನೆ ಇಳಿದರೂ, ಆಹಾರ ಧಾನ್ಯಗಳ ಉತ್ಪಾದನೆಯನ್ನು ನಿರುತ್ಸಾಹಗೊಳಿಸುವುದು ಕಷ್ಟವಾದ್ದರಿಂದ, ದುಡಿಯುವ ಜನರ ಬೇಡಿಕೆಯನ್ನು ವಿವಿಧ ರೀತಿಯಲ್ಲಿ ಹಿಂಡಿಹಿಪ್ಪೆ ಮಾಡಲಾಯಿತು. ಇದನ್ನು ಅಗತ್ಯ ಸೇವೆಗಳ ಖಾಸಗೀಕರಣ, ಸರಕಾರ ಮಾಡುವ ಗ್ರಾಮೀಣ ವೆಚ್ಚಗಳ ಕಡಿತ, ಮತ್ತು ಎಪಿಎಲ್/ಬಿಪಿಎಲ್ ಮುಂತಾದ ತಾರತಮ್ಯದ ಕ್ರಮಗಳ ಮೂಲಕ ಪ್ರಯತ್ನಿಸಲಾಯಿತು. ಈ ಎಲ್ಲ ಕ್ರಮಗಳ ಪರಿಣಾಮವಾಗಿ ಆಹಾರ ಧಾನ್ಯಗಳ ದಾಸ್ತಾನು ಹೆಚ್ಚುತ್ತಾ ಬಂತು. ಈ ದಾಸ್ತಾನಿನಿಂದ ಸಾಕಷ್ಟು ಪ್ರಮಾಣದ ಧಾನ್ಯಗಳ ರಫ್ತು ಕೂಡ ಆಯ್ತು. ಪ್ರಸಕ್ತ ಕರೋನಾ ಬಿಕ್ಕಟ್ಟಿನ ಸಂದರ್ಭದಲ್ಲಿ ಅಪಾರ ಪ್ರಮಾಣದ ಈ ದಾಸ್ತಾನು ದೇಶದ ನೆರವಿಗೆ ಬಂದಿದೆ. ಪಡಿತರದ ಮೂಲಕ ಉಚಿತ ವಿತರಣೆ ಮಾಡಲು ಸರ್ಕಾರದ ಬಳಿ 77 ದಶಲಕ್ಷ ಟನ್ ಧಾನ್ಯಗಳ ದಾಸ್ತಾನು ಲಭ್ಯವಿದೆ. ದೇಶಕ್ಕೆ ಇಷ್ಟೊಂದು ದೊಡ್ಡ ಪ್ರಮಾಣದ ಆಹಾರ ಧಾನ್ಯಗಳ ದಾಸ್ತಾನಿನ ಅವಶ್ಯಕತೆ ಇಲ್ಲ. ದೊಡ್ಡ ಪ್ರಮಾಣದ ದಾಸ್ತಾನಿನ ಈ ಸಮಸ್ಯೆಗೆ ಪರಿಹಾರವೆಂದರೆ ದುಡಿಯುವ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದು. ದುಡಿಯುವ ಜನರ ಪೈಕಿ ಬಹುತೇಕ ಮಂದಿ ಆಹಾರ ಧಾನ್ಯಗಳನ್ನು ಕೊಳ್ಳಲಾಗದೆ ತೀವ್ರ ಹಸಿವೆಯಿಂದ ನರಳುತ್ತಲೇ ಇದ್ದಾರೆ. ಹಸಿವಿನ ಬಾಧೆಗೊಳಗಾದ ಜಗತ್ತಿನ 112 ದೇಶಗಳ ಪೈಕಿ, ಭಾರತವು ಹಸಿವಿನ ಸೂಚ್ಯಂಕದ 100ನೇ ಸ್ಥಾನಕ್ಕೆ ಸಮೀಪದಲ್ಲಿದೆ. ಆದ್ದರಿಂದ, ಆಹಾರ ಧಾನ್ಯಗಳ ಉತ್ಪಾದನೆಯನ್ನು ಕಡಿತಗೊಳಿಸಿದರೆ, ಬೆಳೆ ವೈಫಲ್ಯದ ಸಂದರ್ಭದಲ್ಲಿ ದೇಶವು ಬರಗಾಲದಂತಹ ಪರಿಸ್ಥಿತಿಗೆ ಒಳಗಾಗುತ್ತದೆ.

ಮಹಾನಗರಗಳ ಬೇಡಿಕೆಯ ಬೆಳೆಗಳಿಗೆ ತನ್ನ ಭೂ–ರಾಶಿಯನ್ನು ಮೀಸಲಿಟ್ಟು, ಭಾರತವು ತಾನೇ ಬೆಳೆಯುವುದರ ಬದಲಾಗಿ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳುವುದರಿಂದ ಆಹಾರದ ಕೊರತೆ ಉದ್ಭವಿಸುವುದಿಲ್ಲ ಎಂಬುದು ಸಾಮ್ರಾಜ್ಯಶಾಹಿಯ ವಾದ. ಈ ವಾದವು ಕನಿಷ್ಠ ಮೂರು ಕಾರಣಗಳಿಂದ ತಪ್ಪಾಗಿದೆ. ಮೊದಲನೆಯದಾಗಿ, ಭಾರತದಷ್ಟು ದೊಡ್ಡ ಗಾತ್ರದ ದೇಶವೊಂದು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಲು ಜಾಗತಿಕ ಮಾರುಕಟ್ಟೆಗೆ ಹೋದಾಗಲೆಲ್ಲ, ತಕ್ಷಣವೇ ಧಾನ್ಯಗಳ ಬೆಲೆಗಳು ವೇಗವಾಗಿ ಏರುತ್ತವೆ. ಆರ್ಥಿಕ ದೃಷ್ಟಿಯಲ್ಲಿ ಮೇಲ್ನೋಟಕ್ಕೆ ಸರಿ ಎಂದು ಕಂಡು ಬಂದರೂ ಸಹ, (ಅಂದರೆ, ಇತರ ರಫ್ತು ಬೆಳೆಗಳನ್ನು ಉತ್ಪಾದಿಸುವುದು ಮತ್ತು ಆಹಾರ ಧಾನ್ಯಗಳನ್ನು ಆಮದು ಮಾಡುವುದು) ನಂತರ ಅವಿವೇಕದ ಸಂಗತಿಯಾಗಿ ಪರಿಣಮಿಸುತ್ತವೆ. ಎರಡನೆಯದಾಗಿ, ಅಂತಹ ರಫ್ತು ಬೆಳೆಗಳನ್ನು ಉತ್ಪಾದಿಸಲು ಶ್ರಮದ ಅವಶ್ಯಕತೆ ಕಡಿಮೆ ಇರುತ್ತದೆ. ಆದ್ದರಿಂದ, ರೈತರು ಇಂತಹ ಬೆಳೆಗಳತ್ತ ಹೊರಳುವುದರಿಂದ ಉದ್ಯೋಗಾವಕಾಶಗಳು ಇಳಿಯುತ್ತವೆ ಮತ್ತು ರೈತರು ಹಾಗೂ ಕಾರ್ಮಿಕರ ಕೈಯಲ್ಲಿ ಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. ಆದ್ದರಿಂದ, ಆಮದು ಮಾಡಿಕೊಂಡ ಆಹಾರ ಧಾನ್ಯಗಳು ಲಭ್ಯವಿದ್ದರೂ ಸಹ, ರೈತರು ಹಾಗೂ ಕಾರ್ಮಿಕರು ಮೊದಲಿನಂತೆ ಆಹಾರ ಧಾನ್ಯಗಳನ್ನು ಕೊಳ್ಳಲು ಸಾಧ್ಯವಾಗುವುದಿಲ್ಲ. ಮೂರನೆಯದಾಗಿ, ಸಾಮ್ರಾಜ್ಯಶಾಹಿ ದೇಶಗಳು ತಮಗೆ ಬೇಕಾದ ಬೆಳೆಗಳನ್ನು ಬೆಳೆಯುವ ಸಲುವಾಗಿ ಆಹಾರ ಧಾನ್ಯಗಳ ಉತ್ಪಾದನೆಯನ್ನು ಕೈಬಿಡುವಂತೆ ತೃತೀಯ ಜಗತ್ತಿನ ದೇಶಗಳ ಮನವೊಲಿಸಿ, ನಂತರ ಅದೇ ಆಹಾರ ಧಾನ್ಯಗಳ ಪೂರೈಕೆಯ ವಿಷಯದಲ್ಲಿ ರಾಜಕೀಯ ಆಟ ಆಡುತ್ತವೆ. ಸಾಮ್ರಾಜ್ಯಶಾಹಿ ಅಸ್ತ್ರಗಳಲ್ಲಿ ಆಹಾರ ನಿರಾಕರಣೆಯು ಒಂದು ಪ್ರಬಲ ಅಸ್ತ್ರವಾಗಿದೆ ಮತ್ತು ಅವರು ಅದನ್ನು ನಿರ್ದಯವಾಗಿ ಬಳಸುತ್ತಾರೆ. ಹಾಗಾಗಿ, ಅದು ಒಂದು "ಸಾಮಾನ್ಯ" ಅಂತರರಾಷ್ಟ್ರೀಯ ವ್ಯಾಪಾರವಾಗಿ ಉಳಿಯುವುದಿಲ್ಲ.

ಆಫ್ರಿಕಾದ ದೇಶಗಳ ವಿಷಯದಲ್ಲಿ ಈ ಎಲ್ಲ ಅಂಶಗಳೂ ಪ್ರತ್ಯಕ್ಷವಾಗಿ ಕಾಣಿಸಿಕೊಂಡಿವೆ. ಆಹಾರ ಧಾನ್ಯಗಳ ಬದಲಿಗೆ ಆಹಾರೇತರ ರಫ್ತು ಬೆಳೆಗಳನ್ನು ಬೆಳೆಯುವತ್ತ ಹೊರಳಿದ ಪರಿಣಾಮವಾಗಿ ಸಹಾರಾ–ಕೆಳಗಿನ ಆಫ್ರಿಕಾವು ಕಾಲಕಾಲಕ್ಕೆ ಬರಗಾಲದಿಂದ ನಡುಗಿದೆ. ಅರವತ್ತರ ದಶಕದ ಮಧ್ಯಭಾಗದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವ ವಿಷಯದಲ್ಲಿ ಅಮೆರಿಕವು ಭಾರತವನ್ನು ಎಷ್ಟು ಕೆಟ್ಟದಾಗಿ ನಡೆಸಿಕೊಂಡಿತ್ತು ಎಂದರೆ, ಅವಮಾನ ಮತ್ತು ಒತ್ತಡಗಳಿಗೆ ಒಳಗಾದ ಭಾರತವು ಹಸಿರು ಕ್ರಾಂತಿಯ ಮೂಲಕ ಆಹಾರ ಉತ್ಪಾದನೆಯನ್ನು ಹೆಚ್ಚಿಸಿಕೊಂಡು ಸ್ವಾವಲಂಬನೆ ಸಾಧಿಸಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಂದಿನಿಂದ ಇಂದಿನವರೆಗೆ ಭಾರತದ ಯಾವುದೇ ಸರಕಾರವು ಬೆಳೆ ವೈಫಲ್ಯದ ಸಂದರ್ಭದಲ್ಲಿಯೂ ಆಹಾರ ಧಾನ್ಯಗಳ ಆಮದನ್ನು ಅವಲಂಬಿಸುವ ಬಗ್ಗೆ ಆಲೋಚಿಸಿಲ್ಲ.

ಆದರೆ, ಬಿಜೆಪಿ ಸರಕಾರವು ಈ ಪರಂಪರೆಗೇ ಒಂದು ಅಪವಾದ. ಮಧ್ಯಯುಗದ ಮನಸ್ಥಿತಿಯ, ಅಲ್ಪ ತಿಳುವಳಿಕೆಯ ಮತ್ತು ಪ್ರಾಮಾಣಿಕ ಬೌದ್ಧಿಕ ಅಭಿಪ್ರಾಯಗಳಿಗೆ ಗೌರವ ಕೊಡದ ಜನರು ಆಧುನಿಕ ಅರ್ಥವ್ಯವಸ್ಥೆಯೊಂದರ ಉಸ್ತುವಾರಿ ವಹಿಸಿಕೊಂಡಾಗ ಇದು ನಿರೀಕ್ಷಿತವೇ. ಸರ್ಕಾರದ ಈ ಅಜ್ಞಾನವು ಅವರನ್ನು ಸಾಮ್ರಾಜ್ಯಶಾಹಿ ಚಿಂತನೆಗಳನ್ನು ಅವಲಂಬಿಸುವಂತೆ ಮಾಡುತ್ತದೆ. ಈ ಅವಲಂಬನೆಯು ಸಾಮ್ರಾಜ್ಯಶಾಹಿಯ ಕೈಯಲ್ಲಿ ಒಂದು ದಾಳವೂ ಆಗಿ ಬಿಡುತ್ತದೆ. ಕೃಷಿ ನೀತಿಯಲ್ಲಿ ಬಿಜೆಪಿ ಸರಕಾರವು ಇತ್ತೀಚೆಗೆ ಮಾಡಿರುವ ಬದಲಾವಣೆಗಳು ಭಾರತದ ಪಾರಂಪರಿಕ ನೀತಿಗೆ ಹೋಲಿಸಿದರೆ ಸಂಪೂರ್ಣವಾಗಿ ತಿರುಗಮುರುಗ ಆಗಿರುವುದೇ ಈ ಮಾತಿಗೆ ಸಾಕ್ಷಿ.

ಬಿಜೆಪಿ ಸರ್ಕಾರವು ಮೂರು ಸುಗ್ರೀವಾಜ್ಞೆಗಳನ್ನು ಹೊರಡಿಸಿದೆ. ಮೊದಲನೆಯದು ಧಾನ್ಯ ವ್ಯಾಪಾರಿಗಳು ಇಟ್ಟುಕೊಳ್ಳಬಹುದಾದ ದಾಸ್ತಾನಿನ ಮಿತಿಯನ್ನು ಕಿತ್ತುಹಾಕಿದೆ. ಎರಡನೆಯದು, ಕೃಷಿ ಉತ್ಪನ್ನಗಳ ಮಾರಾಟವು ನಿರ್ದಿಷ್ಟ ಸ್ಥಳಗಳಲ್ಲಿ (ಎಪಿಎಂಸಿ ಮಾರುಕಟ್ಟೆ) ಮಾತ್ರ ನಡೆಯಬಹುದು ಎಂಬ ನಿಯಮವನ್ನು ಕಿತ್ತುಹಾಕಿದೆ. ಮೂರನೆಯದು, ಗುತ್ತಿಗೆ ಕೃಷಿಗೆ ಅವಕಾಶ ಮಾಡಿಕೊಟ್ಟಿದೆ. ಈ ಎಲ್ಲವೂ ಒಟ್ಟಿಗೆ ಸೇರಿ ಭಾರತದ ಕೃಷಿಯನ್ನು ಜಾಗತಿಕ ವ್ಯಾಪಾರಕ್ಕೆ ಸಂಪೂರ್ಣವಾಗಿ ತೆರೆದಿಟ್ಟಿವೆ. ವಿದೇಶಿ ವ್ಯಾಪಾರಿಗಳೂ ಸೇರಿದಂತೆ ಖಾಸಗಿ ವ್ಯಾಪಾರಿಗಳು ಕೃಷಿ ಉತ್ಪನ್ನ ಮಾರುಕಟ್ಟೆ ಪ್ರವೇಶಿಸಲು ಅವಕಾಶ ಕಲ್ಪಿಸಲಾಗಿದೆ. ಇದು ಕೃಷಿಯನ್ನು ಜಾಗತಿಕ ವ್ಯಾಪಾರಕ್ಕೆ ತೆರೆದಿಡುವ ಒಂದು ಮಾರ್ಗ. ಸಾಮ್ರಾಜ್ಯಶಾಹಿಯು ಬಹುಕಾಲದಿಂದಲೂ ಇಟ್ಟಿದ್ದ ಈ ಬೇಡಿಕೆಯನ್ನು ಇದುವರೆಗೂ ಪ್ರತಿರೋಧಿಸಲಾಗಿತ್ತು. ಆಹಾರ ಧಾನ್ಯಗಳ ಉತ್ಪಾದನೆಗೆ ಪೂರಕವಾದ ಒಂದು ನಿರ್ದಿಷ್ಟ ಸಾಂಸ್ಥಿಕ ವ್ಯವಸ್ಥೆಯ ಮೂಲಕ ಈ ಪ್ರತಿರೋಧವನ್ನು ಮುಂದುವರೆಸಲಾಗಿತ್ತು. ಇಂತಹ ವ್ಯವಸ್ಥೆಯ ಊರುಗೋಲುಗಳನ್ನೇ ಈ ಸುಗ್ರೀವಾಜ್ಞೆಗಳು ಕಿತ್ತು ಹಾಕಿವೆ.

ಉದಾಹರಣೆಯಾಗಿ ಹೇಳುವುದಾದರೆ, ರೈತರಿಂದ ಎಫ್‌ಸಿಐ ಧಾನ್ಯಗಳನ್ನು ಖರೀದಿಸುವ ದರಗಳ ಘೋಷಣೆಯ ಮೂಲಕ ಧಾನ್ಯಗಳ ಉತ್ಪಾದನೆಗೆ ಬೆಂಬಲ ಕೊಡಲಾಗುತ್ತಿತ್ತು. ಈ ಏರ್ಪಾಟಿನ ಪ್ರಾಮುಖ್ಯತೆಯನ್ನು ಕಡಿಮೆ ಮಾಡಿದ ನಂತರ, ಖರೀದಿ ದರಗಳ ಮೂಲಕವೂ ಬೆಂಬಲ ಒದಗಿಸುವುದು ಕಷ್ಟವಾಗುತ್ತದೆ. ಅದೇ ರೀತಿಯಲ್ಲಿ, ರಫ್ತು ಬೆಳೆಗಾರರೊಂದಿಗೆ ವಸಾಹತುಕಾಲದಲ್ಲಿದ್ದ ರೀತಿಯಲ್ಲಿ ಗುತ್ತಿಗೆ ಒಪ್ಪಂದ ಮಾಡಿಕೊಂಡರೆ, ಕಾಲಕ್ರಮೇಣ ಆಹಾರ ಧಾನ್ಯಗಳ ಉತ್ಪಾದನೆಯ ಬದಲಿಗೆ ಅಂತಹ ವಾಣಿಜ್ಯ ಬೆಳೆಗಳ ಉತ್ಪಾದನೆ ಹೆಚ್ಚುತ್ತದೆ.

ಆದರೆ, ಇಂತಹ ಒಂದು ಬದಲಾವಣೆಯಲ್ಲಿ ರೈತರ ಹಿತವಿಲ್ಲವೇ ಎಂದು ಕೇಳಬಹುದು. ಉತ್ತರ: ಮೊದಲನೆಯದಾಗಿ, ಈವರೆಗೆ ಅನುಸರಿಸುತ್ತಿದ್ದ ವ್ಯವಸ್ಥೆಯು ರೈತರು ಮತ್ತು ಗ್ರಾಹಕರು ಇಬ್ಬರ ಹಿತವನ್ನೂ ಕಾಪಾಡುತ್ತಿತ್ತು.

ಪುಟ 14 ನೋಡಿ



ಸಾಮ್ರಾಜ್ಯಶಾಹಿ ಅಸ್ತ್ರಗಳಲ್ಲಿ ಆಹಾರ ನಿರಾಕರಣೆಯು ಒಂದು ಪ್ರಬಲ ಅಸ್ತ್ರವಾಗಿದೆ ಮತ್ತು ಅವರು ಅದನ್ನು ನಿರ್ದಯವಾಗಿ ಬಳಸುತ್ತಾರೆ.
ಆಫ್ರಿಕಾದ ದೇಶಗಳ ವಿಷಯದಲ್ಲಿ ಈ ಎಲ್ಲ ಅಂಶಗಳೂ ಪ್ರತ್ಯಕ್ಷವಾಗಿ ಕಾಣಿಸಿಕೊಂಡಿವೆ. ಆಹಾರ ಧಾನ್ಯಗಳ ಬದಲಿಗೆ ಆಹಾರೇತರ ರಫ್ತು ಬೆಳೆಗಳನ್ನು ಬೆಳೆಯುವತ್ತ ಹೊರಳಿದ ಪರಿಣಾಮವಾಗಿ ಸಹಾರಾ-ಕೆಳಗಿನ ಆಫ್ರಿಕಾವು ಕಾಲಕಾಲಕ್ಕೆ ಬರಗಾಲದಿಂದ ನಡುಗಿದೆ. ಅರವತ್ತರ ದಶಕದ ಮಧ್ಯಭಾಗದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವ ವಿಷಯದಲ್ಲಿ ಅಮೆರಿಕವು ಭಾರತವನ್ನು ಕೂಡ ಕೆಟ್ಟದಾಗಿ ನಡೆಸಿಕೊಂಡಿತ್ತು



ಸಾಮ್ರಾಜ್ಯಶಾಹಿಯ ಆಗ್ರಹಗಳಿಗಾಗಿ.....

ಪುಟ 13 ರಿಂದ

ಇಂತಹ ಒಂದು ಸಮನ್ವಯ ಬಹಳ ಮಹತ್ವಪೂರ್ಣವಾದದ್ದು. ಎರಡನೆಯದಾಗಿ, ಒಂದು ನಿರ್ದಿಷ್ಟ ವರ್ಷದಲ್ಲಿ ರೈತರು ಈ ಕ್ರಮಗಳಿಂದ ಲಾಭ ಪಡೆಯುತ್ತಿದ್ದಾರೆ ಎಂದು ತೋರಿದರೂ ಸಹ ಅದು ರೈತರು ತಮ್ಮ ಜುಟ್ಟನ್ನು ಶಾಶ್ವತವಾಗಿ ಬಹುರಾಷ್ಟ್ರೀಯ ವ್ಯಾಪಾರಿಗಳಿಗೆ ಒಪ್ಪಿಸಿದಂತಾಗುತ್ತದೆ. ಈ ಸುಗ್ರೀವಾಜ್ಞೆಗಳು ಮಾಡುವುದು ಅದನ್ನೇ.

ಈ ಮೂರು ಸುಗ್ರೀವಾಜ್ಞೆಗಳ ಒಂದು ಪ್ರಮುಖ ಲಕ್ಷಣವೆಂದರೆ, ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳೊಂದಿಗೆ ಯಾವುದೇ ಸಮಾಲೋಚನೆ ಮಾಡದೆ ಅವುಗಳನ್ನು ಹೊರಡಿಸಿದೆ. ಆ ರೀತಿ ಮಾಡುವಂತಿಲ್ಲ. ಭಾರತದಲ್ಲಿ ಕೃಷಿಯು ರಾಜ್ಯಗಳ ಅಧಿಕಾರ ವ್ಯಾಪ್ತಿಗೆ ಬರುವ ವಿಷಯ. ಕೇಂದ್ರ ಸರ್ಕಾರವು ಈ ಬಗ್ಗೆ ಯಾವುದೇ ರೀತಿಯಲ್ಲಿ ಸಂಬಂಧಪಡುವುದಿಲ್ಲ. ಕೃಷಿ ವ್ಯಾಪಾರವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ, ತಾನು ಸಂವಿಧಾನವನ್ನು ಉಲ್ಲಂಘನೆ ಮಾಡಿಲ್ಲ ಎಂದು ಕೇಂದ್ರ ಸರ್ಕಾರ ವಾದ ಮಾಡಿದೆ. ಆದರೆ, ರಾಜ್ಯ ಸರಕಾರಗಳ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ವಿಷಯದಲ್ಲಿ ಪರೋಕ್ಷವಾಗಿ ಒಂದು ದೂರಗಾಮಿ ಪರಿಣಾಮ ಬೀರುವಂತಹ ಬದಲಾವಣೆಗಳನ್ನು ಮಾಡಿದರೆ, ಅದು ರಾಜ್ಯಗಳ ಅಧಿಕಾರದ ಒತ್ತುವರಿಗೆ ಸಮನಾಗುತ್ತದೆ ಮತ್ತು ಕೇಂದ್ರವು ಸಾಂವಿಧಾನಿಕ ಮಿತಿಯನ್ನು ಉಲ್ಲಂಘಿಸಿದಂತಾಗುತ್ತದೆ. ಆದರೆ, ಈಗ ಆಡಳಿತದಲ್ಲಿರುವ ಬಿಜೆಪಿಗೆ ಇದು ರೂಢಿಯಾಗಿದೆ. ಅದು ಭಾರತವನ್ನು ಏಕೀಕೃತ ಪ್ರಭುತ್ವವನ್ನಾಗಿ ಮಾರ್ಪಡಿಸುತ್ತಿದೆ.

ಕೃಷಿಯನ್ನು ಜಾಗತಿಕ ವ್ಯಾಪಾರಕ್ಕೆ ತೆರೆದಿಡುವ ನಿಟ್ಟಿನಲ್ಲಿ ಹಾಕುವ ಪ್ರತಿಯೊಂದು ಹೆಜ್ಜೆಯೂ ದೇಶದಲ್ಲಿ ಆಹಾರ ಲಭ್ಯತೆಯನ್ನು ಕಡಿಮೆ ಮಾಡುವ ಒಂದು ಹೆಜ್ಜೆಯಾಗುತ್ತದೆ. ಆಹಾರ ಧಾನ್ಯಗಳ ಉತ್ಪಾದನೆಯ ಕುಸಿತ ಅಥವಾ ಆಹಾರದ ತೀವ್ರ ಕೊರತೆಯ ಪರಿಸ್ಥಿತಿ ಎದುರಾದಾಗ, ಖಾಸಗಿ ವ್ಯಾಪಾರಿಗಳಿಗೆ ಈಗಷ್ಟೇ ತೆರೆದಿಡಲಾಗಿರುವ ದಾಸ್ತಾನಿನ ಮಿತಿಯನ್ನು ಹಿಂಪಡೆಯಬಹುದು ಎಂದು ಬಿಜೆಪಿ ಸರ್ಕಾರ ಭರವಸೆ ನೀಡಿದೆ. ಆದರೆ, ಸಮಸ್ಯೆ ಏನೆಂದರೆ, ಆಹಾರ ಧಾನ್ಯಗಳ ಬೆಲೆಗಳು ಗಮನಾರ್ಹವಾಗಿ ಏರಿಕೆಯಾಗದಿದ್ದರೂ ಸಹ, ಹಸಿವು ತನ್ನಷ್ಟಕ್ಕೇ ತಾನೇ ಪ್ರಕಟಗೊಳ್ಳುತ್ತದೆ. ಹಸಿವಿನ ಹಾಹಾಕಾರವು ವಸಾಹತುಕಾಲದಲ್ಲಿ ಪದೇ ಪದೇ ಮರುಕಳಿಸಿದ್ದಂತೆ ದುಡಿಯುವ ಜನರ ಬೇಡಿಕೆ ಕುಗ್ಗಿದ ಪರಿಣಾಮವಾಗಿಯೂ ಉಂಟಾಗಬಹುದು. 1897–1902 ಮತ್ತು 1933–38ರ ನಡುವೆ ತಲಾ ಆಹಾರ ಧಾನ್ಯಗಳ ಲಭ್ಯತೆಯಲ್ಲಿ ಶೇ.20ರಷ್ಟು ತೀವ್ರ ಕುಸಿತವಾಗಿತ್ತು. ಆದರೆ, 36 ವರ್ಷಗಳ ಈ ಅವಧಿಯಲ್ಲಿ ಕಾರ್ಮಿಕರ ಜೀವನ ವೆಚ್ಚ ಸೂಚ್ಯಂಕವು (ಸೂಚ್ಯಂಕದಲ್ಲಿ ಆಹಾರದ ಬೆಲೆಗಳೇ ಪ್ರಾಧಾನ್ಯತೆ ಪಡೆದಿವೆ) ಕೇವಲ 23 ಪ್ರತಿ ಶತದಷ್ಟು ಏರಿಕೆಯಾಗಿದೆ.

ಆದ್ದರಿಂದ, ಈ ಭರವಸೆಗಳು ಅರ್ಥಹೀನವಾಗಿವೆ. ಸಾಮ್ರಾಜ್ಯಶಾಹಿಗೆ ಸಾಷ್ಟಾಂಗ ನಮಸ್ಕಾರ ಹಾಕುವ ಬಿಜೆಪಿ ಸರಕಾರವು, ಭಾರತೀಯ ಜನತೆಯನ್ನು ಹಸಿವು ಮತ್ತು ಸಂಭವನೀಯ ಕ್ಷಾಮಗಳ ಹಾದಿಗೆ ತಂದು ಹಾಕಿದೆ.

ತೆಲಂಗಾಣ ಜನರ ಸಶಸ್ತ್ರ ಹೋರಾಟ

ಪುಟ 11 ರಿಂದ

ಜಮೀನ್ದಾರನ ಮನೆ ಮುಂದೆ ಬಹಿರಂಗವಾಗಿ ಸಭೆ ಸೇರುತ್ತಿದ್ದರು, ಕೆಂಬಾವುಟವನ್ನು ಹಾರಿಸುತ್ತಿದ್ದರು ಮತ್ತು "ಇಲ್ಲಿ ಸಂಘಂ ಪ್ರಾರಂಭವಾಗಿದೆ. ವೆಟ್ಟಿಯಾಗಲಿ, ಕಾನೂನುಬಾಹಿರ ವಸೂಲಿಯಾಗಲಿ, ಒಕ್ಕಲೆಬ್ಬಿಸುವುದಾಗಲಿ ಇನ್ನು ಮುಂದೆ ಇಲ್ಲ" ಎಂದು ಘೋಷಣೆ ಕೊಡುತ್ತಿದ್ದರು. ಸಂಘಂನ ಈ ಆದೇಶವನ್ನು ಜಮೀನ್ದಾರ ಅಥವಾ ದೇಶಮುಖನಾಗಲಿ ಪಾಲಿಸದಿದ್ದರೆ ಅಂಥವರಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗುತ್ತಿತ್ತು. ಸಂಘಂನ ಈ ಆದೇಶಗಳು ಜಾರಿಯಾದವು ಮತ್ತು ಜಮೀನ್ದಾರನಿಗಾಗಿ ಯಾರೂ ಕೆಲಸ ಮಾಡಲಿಲ್ಲ. ಕೆಲವೇ ವಾರಗಳಲ್ಲಿ, ನಲ್ಗೊಂಡಾದ ಸುಮಾರು 300–400 ಹಳ್ಳಿಗಳಿಗೆ ಮತ್ತು ಸುತ್ತಮುತ್ತಲ ಜಿಲ್ಲೆಗಳಿಗೂ ಈ ಚಳುವಳಿ ವ್ಯಾಪಿಸಿತು.

ಮೊದಲ ಬಾರಿಗೆ, ಜಮೀನಿನ ಸಮಸ್ಯೆ, ಒಕ್ಕಲೆಬ್ಬಿಸುವುದು ಮತ್ತು ವೆಟ್ಟಿ ಪದ್ಧತಿ ಹಾಗೂ ಬಲವಂತ ಗೇಣಿ ವಸೂಲಿ ಇವೆಲ್ಲವೂ ಜಮೀಂದಾರಿ ಪದ್ಧತಿಯ ರದ್ದತಿಯ ಘೋಷಣೆಯೊಂದಿಗೆ ಜೋಡಣೆಯಾದವು, ಮತ್ತು ಅದು ಈ ಅವಧಿಯ ಪ್ರಧಾನ ವೈಶಿಷ್ಟ್ಯವಾಗಿತ್ತು. ಈ ಜನ ಚಳುವಳಿಯ ಪ್ರವಾಹದಿಂದಾಗಿ, ಸರ್ಕಾರ ಲೆವಿ ಧಾನ್ಯ ಸಂಗ್ರಹ ಮಾಡಲಾಗಲಿಲ್ಲ. ಅವುಗಳನ್ನು ಸಂಗ್ರಹ ಮಾಡುತ್ತಿದ್ದ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಗಳನ್ನು ಹಳ್ಳಿಯೊಳಗೆ ಹೆಜ್ಜೆ ಇಡಲೇ ಬಿಡುತ್ತಿರಲಿಲ್ಲ. ವೆಟ್ಟಿ ಪದ್ಧತಿ ತಾನೇ ತಾನಾಗಿ ಕೊನೆಗೊಂಡಿತು.

ಹಲವಾರು ಜಮೀನ್ದಾರರು ಹಳ್ಳಿಗಳನ್ನು ಬಿಟ್ಟು ಓಡಿಹೋದರು ಮತ್ತು ನಿಜಾಮನ ಹಸ್ತಕ್ಷೇಪ ಕೋರಿದರು; ಅದರಿಂದಾಗಿ ಅನೇಕ ಹಳ್ಳಿಗಳಲ್ಲಿ ಮಿಲಿಟರಿ ಕ್ಯಾಂಪುಗಳು ನೆಲೆಗೊಂಡವು. ವಾರಗಳು ಮತ್ತು ತಿಂಗಳುಗಳ ಕಾಲ ಮಿಲಿಟರಿ ದಾಳಿಗಳು ನಡೆದವು. ಜನರು ಈ ಎಲ್ಲಾ ಕಷ್ಟಗಳು ಎದುರಾದರೂ ಧೃತಿಗೆಡಲಿಲ್ಲ. ಈ ದಾಳಿಗಳ ಪ್ರಯೋಜನ ಪಡೆದ, ಹಳ್ಳಿಗಳನ್ನು ಬಿಟ್ಟು ಹೋಗಿದ್ದ ಜಮೀಂದಾರರು ಹಿಂತಿರುಗಿದರು. ಜನ ಚಳುವಳಿಗೆ ಒಂದು ರೀತಿಯ ಪಾರ್ಶ್ವವಾಯು ಹೊಡೆದಂತಾಯಿತು.

ಕಮ್ಯುನಿಸ್ಟ್ ಪಕ್ಷವು ಮುಖ್ಯವಾಗಿ ಯಾವ ಪ್ರದೇಶಗಳಲ್ಲಿ ಜಮೀನ್ದಾರರ ಸಶಸ್ತ್ರ ಬಂಟರಿಂದ ನಿರಂತರ ದಾಳಿಗಳನ್ನು ಜನರು ಎದುರಿಸುತ್ತಿದ್ದರೋ ಅಂತಹ ಊರುಗಳಲ್ಲಿ, ಜನರ ಸ್ವಯಂಸೇವಕ ತಂಡಗಳ ತರಬೇತಿಯನ್ನು ಶುರುಮಾಡಿತು. ಈ ತರಬೇತಿ ಪಡೆದ ಸ್ವಯಂಸೇವಕರು 1945 ಮತ್ತು 1946ರಲ್ಲಿ ಜಮೀನ್ದಾರರ ಗೂಂಡಾ ದಾಳಿಗಳಿಂದ ಜನರನ್ನು ರಕ್ಷಿಸಿದರು. ಎಲ್ಲಾ ಮನೆಗಳ ಗಂಡಸರು ಮತ್ತು ಹೆಂಗಸರು ಈ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಪ್ರತಿಜ್ಞೆ ಮಾಡಿದರು. ಹಳ್ಳಿಯ ಕೇಂದ್ರ ಪ್ರದೇಶದಲ್ಲಿ ಒಂದು ದೊಡ್ಡ ಡ್ರಮ್ಮನ್ನು ಇಟ್ಟು ಅದನ್ನು ಬಾರಿಸಿದ ಕೂಡಲೇ ಜನ ಎಲ್ಲೇ ಇದ್ದರೂ ತಮ್ಮ ಆಯುಧಗಳನ್ನು ಹೊತ್ತು ಕಾಳಗಕ್ಕೆ ಓಡಿ ಬಂದು ಸೇರಿಕೊಳ್ಳುತ್ತಿದ್ದರು. ನೂರಾರು, ಸಾವಿರಾರು ರೈತ ಯುವಕರು ಲಾಠಿ ಮತ್ತು ಕವಣೆಗಳನ್ನು ಹೊತ್ತು, ಮಹಿಳೆಯರು ಮೆಣಸಿನ ಪುಡಿ, ಕಲ್ಲುಗಳು ಮತ್ತು ಕುದಿ ನೀರನ್ನು ತಂದು ಮನೆ ಮಾರುಗಳನ್ನು ರಕ್ಷಿಸಿದರು. ಜನರು ಅಂತಹ ಮನೋಭಾವ, ಚೈತನ್ಯ, ಶಿಸ್ತು ಮತ್ತು ಆತ್ಮವಿಶ್ವಾಸ ಹೊಂದಿದ್ದರು.

ತೆಲಂಗಾಣ ಜನರ ಅತೃಪ್ತಿ ಮತ್ತು ಆಕ್ರೋಶ ಎಷ್ಟು ಗಾಢವಾಗಿತ್ತು ಮತ್ತು ಅಸಾಧಾರಣವಾಗಿತ್ತು ಎಂದರೆ ಅವರು ವೆಟ್ಟಿ ಪದ್ಧತಿ, ಅನೈತಿಕ ವಸೂಲಿ, ಬಲವಂತದ ಗೇಣಿ ವಸೂಲಿ ಇವೆಲ್ಲಕ್ಕೂ ಕೊನೆ ಹಾಡಿದರು ಮತ್ತು ಜಮೀನ್ದಾರರು ವಶಪಡಿಸಿಕೊಂಡಿದ್ದ ಜಮೀನನ್ನು ಮರುವಶ ಮಾಡಿಕೊಂಡರು. ಜಮೀನ್ದಾರರ ಸಶಸ್ತ್ರ ದಾಳಿಗಳನ್ನು ಪ್ರತಿರೋಧಿಸಲು ಶುರುಮಾಡಿದರು, ನಿಜಾಮನ ಸಶಸ್ತ್ರ ಪೋಲಿಸರನ್ನು ಮತ್ತು ಮಿಲಿಟರಿಯನ್ನೂ ಎದುರಿಸಲು ಸಿದ್ಧರಾದರು; ಮಹಿಳೆಯರು ಸಾಧ್ಯವಾದ ಎಲ್ಲಾ ರೀತಿಯಲ್ಲೂ ಪ್ರತಿರೋಧದಲ್ಲಿ ತಮ್ಮ ಕೈಜೋಡಿಸಿದರು ಮತ್ತು ಸಮರಶೀಲ ಹಾಡುಗಳ, ಜನಪದ ಕಲೆಗಳ, ಒಂದು ಸಾಮೂಹಿಕ ಸಾಂಸ್ಕೃತಿಕ ಬಂಡಾಯವೇ ನಡೆಯಿತು. ಪ್ರತಿರೋಧ ಚಳುವಳಿಯ ಭಾಗವಾಗಿ, ಕೋರ್ಟು ಆದೇಶಗಳನ್ನು ಮತ್ತು ಬಂಧನದ ವಾರಂಟುಗಳನ್ನು ಧಿಕ್ಕರಿಸಲು ಪಕ್ಷ ಕರೆ ನೀಡಿತು; ಪೋಲಿಸರ ಕೈಗೆ ಸಿಗದಂತೆ, ಮುಟ್ಟುಗೋಲು ಹಾಕುವುದನ್ನು ಮತ್ತು ಆಸ್ತಿ ಹರಾಜು ಹಾಕುವುದನ್ನು ತಡೆದು ನಿಲ್ಲಿಸಲು ಕೂಡ ಕರೆ ನೀಡಿತು. ಜನರು ಉತ್ಸಾಹಭರಿತರಾಗಿ ಸ್ಪಂದಿಸಿದರು ಮತ್ತು ಆ ನಿರ್ದೇಶನಗಳನ್ನು ಚಾಚೂ ತಪ್ಪದೇ ಅನುಸರಿಸಿದರು, ಪ್ರತಿರೋಧಧ ಹೊಸ ಹೊಸ ವಿಧಾನಗಳನ್ನು ಬಳಕೆಗೆ ತಂದರು. ಜನರು ಪಕ್ಷದ ಮುಖಂಡರನ್ನು ತಮ್ಮ ಕಣ್ಮಣಿಗಳಂತೆ ನೋಡಿಕೊಂಡರು.

ಈ ಹೋರಾಟಗಳಲ್ಲಿ, 1946ರ ಕೊನೆಯ ಭಾಗದ ವರೆಗೆ, ರೈತ ತಂಡಗಳು ಫಿರಂಗಿ, ಬಂದೂಕುಗಳನ್ನು ಬಳಸುವ ತರಬೇತಿ ಹೊಂದಿರಲಿಲ್ಲ. ಬಂದೂಕುಗಳನ್ನು ಬಳಸದಂತೆ ಸ್ವಯಂಸೇವಕ ತಂಡಗಳಿಗೆ ನರ್ದೇಶನ ನೀಡಲಾಗಿತ್ತು, ಏಕೆಂದರೆ ಅದು ಸಂಪೂರ್ಣವಾಗಿ ಬೇರೆಯದೇ ಆದ ಹಂತಕ್ಕೆ ಹೋರಾಟವನ್ನು ಕೊಂಡೊಯ್ಯುತ್ತಿತ್ತು ಮತ್ತು ಅಖಿಲ ಭಾರತ ಮಟ್ಟದಲ್ಲಿ ಅದು ಪರಿಣಾಮ ಬೀರುತ್ತಿತ್ತು. ಸಶಸ್ತ್ರ ಪೋಲಿಸರ ಸತತ ದಾಳಿಗಳು ರೈತ ಸಮುದಾಯದ ಮೊದಲ ಬಂಡಾಯವನ್ನು ಸದೆಬಡಿದಾಗ ಮಾತ್ರವೇ, ಪಕ್ಷವು ಕಾರ್ಯಕರ್ತರು ಆತ್ಮರಕ್ಷಣೆಗಾಗಿ ಸಶಸ್ತ್ರರಾಗಲು ಬಿಟ್ಟಿತು.

ನ್ಯಾ|| ಹೊಸಬೆಟ್ಟು ಸುರೇಶ್ ನಿಧನ

ಪುಟ 2 ರಿಂದ

ಕೊಳೆಗೇರಿ ನಿವಾಸಿಗಳನ್ನು ಬಲವಂತದಿಂದ ಒಕ್ಕಲೆಬ್ಬಿಸಿದ ಘಟನೆಯ ತನಿಖೆ ನಡೆಸಿ ಆಗಸ್ಟ್ 1995ರಲ್ಲಿ ವರದಿಯನ್ನು ಪ್ರಕಟಿಸಿದರು.

ಮಾನವ ಹಕ್ಕುಗಳ ಉಲ್ಲಂಘನೆ ಕುರಿತ ಅವರ ತನಿಖೆಗಳಲ್ಲಿ ಅವರ ಅತ್ಯಂತ ಮಹತ್ವದ ಕೊಡುಗೆಯೆಂದರೆ 2002ರ ಗುಜರಾತ್ ಹತ್ಯಾಕಾಂಡದ ಸತ್ಯಶೋಧಕ ತಂಡದ ಭಾಗವಾಗಿ ಮಾಡಿದ ಕೆಲಸ. ಸುಪ್ರಿಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ವಿ.ಆರ್.ಕೃಷ್ಣ ಅಯ್ಯರ್ ನೇತೃತ್ವದ ಈ ತಂಡ ಮಾರ್ಚ್–ಎಪ್ರಿಲ್ 2002ರಲ್ಲಿ ಗುಜರಾತಿಗೆ ಹೋಗಿ 2000ಕ್ಕೂ ಹೆಚ್ಚು ಬಾಯ್ದೆರೆ ಮತ್ತು ಲಿಖಿತ ಸಾಕ್ಷ್ಯಗಳನ್ನು ಸಂಗ್ರಹಿಸಿತು. ಹಲವು ಹಿರಿಯ ಪೋಲೀಸ್ ಮತ್ತು ಸರಕಾರೀ ಅಧಿಕಾರಿಗಳನ್ನೂ ಭೇಟಿ ಮಾಡಿ ಮಾಹಿತಿಗಳನ್ನು ಸಂಗ್ರಹಿಸಿತು. ಇವೆಲ್ಲವುಗಳ ಆಧಾರದಲ್ಲಿ *Crime Against Humanity* (ಮಾನವತೆಯ ವಿರುದ್ಧ ಅಪರಾಧ) ಎಂಬ ಒಂದು ಮಹತ್ವದ ವರದಿಯನ್ನು ಸಲ್ಲಿಸಿತು.

ನಂತರದ ವರ್ಷಗಳಲ್ಲಿ ಈ ತಂಡ ಸಂಗ್ರಹಿಸಿದ ಸಾಕ್ಷ್ಯಗಳ ಆಧಾರದಲ್ಲಿ ಅವರು ಗುಜರಾತ್ ಹತ್ಯಾಕಾಂಡದ ಬಗ್ಗೆ ಹಲವು ಆಘಾತಕಾರಿ ಅಂಶಗಳನ್ನು ಹೊರಗೆಡಹಿದ್ದಾರೆ. ಉದಾಹರಣೆಗೆ, **ಹತ್ಯಾಕಾಂಡದ ಸಮಯದಲ್ಲಿ ಮುಸ್ಲಿಂ–ವಿರೋಧಿ ಹಿಂಸಾಚಾರದಲ್ಲಿ ತೊಡಗಿದ್ದ ಹಿಂದೂಗಳನ್ನು ತಡೆಯಬೇಡಿ ಎಂದು ಉನ್ನತ ಪೋಲೀಸ್ ಅಧಿಕಾರಿಗಳಿಗೆ ಆಗಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯವರೇ ಹೇಳಿದ್ದರು ಎಂದು ಆಗ ರಾಜ್ಯದ ಗೃಹಮಂತ್ರಿಯಾಗಿದ್ದ ಹರೇನ್ ಪಾಂಡ್ಯ ಹೇಳಿದರು ಎಂದು ನ್ಯಾಯಮೂರ್ತಿ ಸುರೇಶ್ ಫೆಬ್ರುವರಿ 2012ರಲ್ಲಿ ಭಾಷಣವೊಂದರಲ್ಲಿ ಹೊರಗೆಡಹಿದರು. 2003 ರಲ್ಲಿ ಹರೇನ್ ಪಾಂಡ್ಯ ಕೊಲೆಗೀಡಾದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.**

ಸುಪ್ರಿಂ ಕೋರ್ಟ್ ಗುಜರಾತಿನ ಬೆಸ್ಟ್ ಬೇಕರಿ ಕೇಸಿನ ತನಿಖೆಯನ್ನು ಹೊಸದಾಗಿ ನಡೆಸಬೇಕು ಮತ್ತು ಗುಜರಾತಿನ ಹೊರಗೆ ವಿಚಾರಣೆ ನಡೆಯಬೇಕು ಎಂದು ಆದೇಶ ನೀಡಿದಾಗ ಇದು ಗುಜರಾತಿನ ಆಗಿನ ಆಡಳಿತ ಮತ್ತು ಕ್ರಿಮಿನಲ್ ನ್ಯಾಯ ವ್ಯವಸ್ಥೆಯ ಮೇಲಿನ ಒಂದು ಕಟು ಟೀಕೆ ಮಾತ್ರವಲ್ಲ, ಸಂಬಂಧಪಟ್ಟ ನಾಗರಿಕರು ಹಾಗೂ ಸರ್ವೋಚ್ಚ ನ್ಯಾಯಾಲಯ ಇಂತಹ ಸನ್ನಿವೇಶಗಳಲ್ಲಿ ಏನು ಮಾಡಬಹುದು ಎಂಬುದಕ್ಕೆ ದಾರಿ ತೋರಿಸಿ ಕೊಟ್ಟಿದೆ ಎಂದು ಟಿಪ್ಪಣಿ ಮಾಡುತ್ತ ನ್ಯಾಯಮೂರ್ತಿ ಸುರೇಶ್, ಗುಜರಾತಿನಲ್ಲಿ ನಡೆದದ್ದು ಕಾನೂನಿಗೆ ಮಾಡಿದ ವಂಚನೆ, ಅದೊಂದು ವಿಚಾರಣೆಯ ಪ್ರಹಸನ, ಉದ್ದೇಶಪೂರ್ವಕವಾಗಿ ದೋಷಪೂರಿತ ಮತ್ತು ಅಪ್ರಾಮಾಣಿಕವಾಗಿತ್ತು ಎಂದಿದ್ದರು.

1984ರಲ್ಲಿ ದಿಲ್ಲಿಯಲ್ಲಿ ಸಿಖ್ ಸಮುದಾಯದ ವಿರುದ್ಧ ನಡೆದ ಹತ್ಯಾಕಾಂಡ ಮತ್ತು 2002ರಲ್ಲಿ ಗುಜರಾತಿನಲ್ಲಿ ಮುಸ್ಲಿಂ ಸಮುದಾಯದ ವಿರುದ್ಧ ನಡೆದ ಹತ್ಯಾಕಾಂಡಗಳಲ್ಲಿ ನ್ಯಾಯ ಇನ್ನೂ ಸಿಕ್ಕಿಲ್ಲ, ಇದು ನಮ್ಮ ದೇಶದ ನ್ಯಾಯವ್ಯವಸ್ಥೆಯಲ್ಲಿರುವ ಸಮಸ್ಯೆ, ಕೋಮುಗಲಭೆಗಳ ಪ್ರಕರಣಗಳಲ್ಲಿ ನ್ಯಾಯನೀಡಿಕೆ ಸಾಮಾನ್ಯವಾಗಿ ವಿಳಂಬಗೊಳ್ಳುತ್ತದೆ ಎಂದು ಅವರು ಖೇದದಿಂದ ಹೇಳಿದ್ದರು.

ಎಲ್.ಜಿ. ಪಾಲಿಮರ್ ಸ್ಟೈರಿನ್ ಸೋರಿಕೆ ದುರಂತ.........

ಪುಟ 6 ರಿಂದ

ಪ್ರಾಧಿಕಾರ (Environment Impact Assessment Authority - EIAA) ದಿಂದ ಪರಿಸರ ಅನುಮತಿಯನ್ನು (Environment Clearence) ಪಡೆಯುವುದು ಕಡ್ಡಾಯವಾಗಿದೆ. ಎಲ್–ಜಿ ಕಂಪೆನಿಯು ಈ ಕಾರ್ಖಾನೆಯನ್ನು ಪ್ರಾರಂಭಿಸಲು 2006 ರ ಈ ಕಾಯ್ದೆ ಬರುವ ಮೊದಲೆ ಒಪ್ಪಿಗೆ ಪಡೆದಿದ್ದರೂ 2018 ರಲ್ಲಿ ದಿನಕ್ಕೆ 415 ಟನ್ ಸಾಮರ್ಥ್ಯದಿಂದ ದಿನಕ್ಕೆ 655 ಟನ್ ಸಾಮಥ್ಯಕ್ಕೆ ಹೆಚ್ಚಿಸಲು ಪರವಾನಿಗೆ ಕೋರಿ ರಾಜ್ಯ ಇಖ೦೦ ಗೆ ಅರ್ಜಿ ಸಲ್ಲಿಸಿರುತ್ತಾರೆ. ಸೆಪ್ಟೆಂಬರ್ 2018 ರಲ್ಲಿ ರಾಜ್ಯ EIAA ಈ ಅರ್ಜಿಯನ್ನು ಪರಿಶೀಲಿಸಿ ಈ ಕಾರ್ಖಾನೆಯು ಪರಿಸರ ಅನುಮತಿ (ಇ.ಸಿ)ಯನ್ನು ಪಡೆದಿಲ್ಲ ಎಂದು ಕಾರಣ ನೀಡಿ ಅರ್ಜಿಯನ್ನು ತಿರಸ್ಕರಿಸುತ್ತದೆ. ನಂತರ 2019 ರಲ್ಲಿ ಎಲ್–ಜಿ ಕಂಪೆನಿಯು ರಾಜ್ಯ EIAA ಗೆ ಒಂದು ಪ್ರಮಾಣ ಪತ್ರ ಸಲ್ಲಿಸಿರುತ್ತದೆ. ಅದರಲ್ಲಿ, ಈ ಹಿಂದೆ 2004 ರಿಂದ 2017 ರ ವರೆಗೆ ಆರು ಬಾರಿ ಈ ರೀತಿಯ ಸಾಮರ್ಥ್ಯವನ್ನು ಹೆಚ್ಚಿಸಿದಾಗ ಪರಿಸರದ ಪರವಾನಿಗೆಯನ್ನು ತೆಗೆದುಕೊಂಡಿಲ್ಲ. ಬದಲಿಗೆ ಆಂಧ್ರಪ್ರದೇಶ ಮಾಲಿನ್ಯ ನಿಯಂತ್ರಣಾ ಮಂಡಲಿಯ ಒಪ್ಪಿಗೆಯ ಮೇರೆಗೆ ಸಾಮರ್ಥ್ಯವನ್ನು ಹೆಚ್ಚಿಸಿದ್ದೇವೆ ಎಂದು ಹೇಳಿದ್ದಾರೆ. ಇದು 2006 ರ ಪರಿಸರ ಪರಿಣಾಮದ ಅಧಿಸೂಚನೆಯ ನೇರ ಉಲ್ಲಂಘನೆ ಹಾಗೂ ಆಂಧ್ರಪ್ರದೇಶ ಮಾಲಿನ್ಯ ನಿಯಂತ್ರಣ ಮಂಡಳಿಗೆ ಇಂತಹ ಅನುಮತಿಗಳನ್ನು ಪರಿಸರದ ಪರವಾನಿಗೆ ಇಲ್ಲದೆ ಕೊಡುವ ಅಧಿಕಾರವಿಲ್ಲ. ಹೀಗಾಗಿ ಈ ಎಲ್.ಜಿ. ಕಂಪೆನಿಯ ಸ್ಟೈರಿನ್ ಹಬೆ ಸೋರಿಕೆ ದುರಂತ ದೊಡ್ಡ ಬಂಡವಾಳಶಾಹಿ, ಸರ್ಕಾರಗಳು ಹಾಗೂ ಅಧಿಕಾರಶಾಹಿಯ ನಡುವೆ ಇರುವ ಅನೈತಿಕ ಸಂಬಂಧಕ್ಕೆ ಕನ್ನಡಿಯಾಗಿದೆ.

ನಮ್ಮ ದೇಶದಲ್ಲಿ ಪರಿಸರ ಪರವಾನಿಗೆ ಇಲ್ಲದೆ ಕಾರ್ಯಾಚರಣೆಯಲ್ಲಿರುವ ಇಂತಹ ಕಾರ್ಖಾನೆಗಳು ಸಾವಿರಾರು ಇವೆ. ಇನ್ನು ಮುಂದೆ ಇಂತಹ ದುರಂತಗಳು ಹೆಚ್ಚು ಸಂಭವಿಸುವ ಸಾಧ್ಯತೆ ಇದೆ. ಇಂತಹ ಸಂದರ್ಭದಲ್ಲಿ 2017 ರಲ್ಲಿ ಇಂತಹ ಕಾರ್ಖಾನೆಗಳನ್ನು ಸಕ್ರಮಗೊಳಿಸಲು ಒಂದು ಅಧಿಸೂಚನೆಯನ್ನು ಕೇಂದ್ರ ಸರ್ಕಾರ ಹೊರಡಿಸುತ್ತದೆ. ಇದರ ಪ್ರಕಾರ ಪರಿಸರ ಪರವಾನಿಗೆ ಇಲ್ಲದೆ ಇರುವ ಕಾರ್ಖಾನೆಗಳನ್ನು ಯಥಾಸ್ಥಿತಿಯಲ್ಲಿ ಅನುಮೋದಿಸಬಹುದು. ಇದನ್ನು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಹಾಗೂ ಸುಪ್ರೀಂ ಕೋರ್ಟು ತಿರಸ್ಕರಿಸಿದೆ. ನಂತರ 2020 ರಲ್ಲಿ EIA ಅಧಿಸೂಚನೆಗೆ ತಿದ್ದುಪಡಿಯನ್ನು ತಂದು ಕಾರ್ಖಾನೆ ಮಾಲಿಕರಿಗೆ ಸಹಾಯ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ. ಆದರೂ ಈಗ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಎಲ್.ಜಿ. ಪಾಲಿಮರ್ಸ್ ಕಂಪನಿಗೆ 50 ಕೋಟಿ ರೂಪಾಯಿಗಳನ್ನು ಶಿಕ್ಷಾರ್ಹ ಹಾನಿಗಳ ದಂಡವಾಗಿ ವಿಧಿಸಿ ಮುಂದಿನ ತನಿಖೆಗೆ ಆದೇಶಿಸಿದೆ. ಮುಂದಿನ ತನಿಖೆಯಲ್ಲಿ ಸತ್ಯಾಂಶಗಳು ಹೊರಬಂದು ಇನ್ನು ಮುಂದೆ ಜನಸಾಮಾನ್ಯರು ಇಂತಹ ದುರಂತಗಳಿಗೆ ಬಲಿಯಾಗಬಾರದು. ಆದರೆ 1984 ರ ಭೋಪಾಲ್ ದುರಂತಕ್ಕೆ ಬಲಿಯಾದ ಕುಟುಂಬಗಳಿಗೆ ಇಂದಿಗೂ ನ್ಯಾಯ ಸಿಕ್ಕದೆ ಇರುವುದನ್ನು ಗಮನಿಸಿದರೆ ಇಂತಹ ತನಿಖೆಯು ಜನಸಾಮಾನ್ಯರಿಗೆ ನ್ಯಾಯ ದೊರಕಿಸುವುದೇ ಎಂಬ ಅನುಮಾನ ವ್ಯಕ್ತವಾಗುತ್ತದೆ.



ರಶ್ಯ-ಚೀನಾ ಬೇರ್ಪಡಿಸುವ ಟ್ರಂಪ್ ತಂತ್ರ ಫಲಿಸುವುದೇ? ಜಿ-7ನ ಸೂರ್ಯಾಸ್ತವಾಗುವುದೇ ?

ಚೀನಾ-ರಶ್ಯಗಳನ್ನು ವಿಭಜಿಸುವಲ್ಲಿ ಅಮೆರಿಕ ಸಫಲವಾಗುವುದೇ? ಚೀನಾ-ರಶ್ಯ ವಿಭಜನೆಯಾಗದೆ ಜಿ-7ನ ಸೂರ್ಯಾಸ್ತವಾಗುವುದೇ? ಅಥವಾ ಜರ್ಮನಿ, ಫ್ರಾನ್ಸ್ ಗಳನ್ನು ಸೇರಿಸಿಕೊಂಡು ರಶ್ಯಾ-ಚೀನಗಳು ಯುರೇಶಿಯನ್ ವಿಸ್ತೃತ ಕೂಟ ಕಟ್ಟುವವೇ? ಈ ಪ್ರಶ್ನೆಗಳಿಗೆ ಜಿ-7 ಶೃಂಗಸಭೆ ಕೆಲವು ಉತ್ತರಗಳನ್ನು ನೀಡಬಹುದು. ಈ ನಿಟ್ಟಿನಲ್ಲಿ, ಅಂತರಾಷ್ಟ್ರೀಯ ಹಣಕಾಸು ನಿಧಿ, ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಒಪ್ಪಂದ, ನ್ಯಾಟೋ ಮತ್ತು ಇತರ ಅಂತಾರಾಷ್ಟ್ರೀಯ ಸಂಸ್ಥೆಗಳಿಗೆ ದಿಕ್ಸೂಚಿ ನೀಡಲು ಬಳಸುವ ಜಿ 7 ಗುಂಪಿನ ಮುಂದಿನ ಶೃಂಗ ಸಭೆಯಲ್ಲಿ ಕೈಗೊಳ್ಳುವ ನಿರ್ಧಾರಗಳಿಗೆ ಇನ್ನಿಲ್ಲದ ಮಹತ್ವ ಬಂದಿದೆ. ಚೀನಾ-ರಶ್ಯ ವಿಭಜನೆಯಾಗದೆ ಜಿ-7ನ ಸೂರ್ಯಾಸ್ತವಾದರೆ ಯು.ಎಸ್ ಒಂಟಿಯಾಗುವುದೇ? ಆಗ ಅದರ ಜೂನಿಯರ್ ಪಾರ್ಟನರ್ ಆಗಿರುವ ಭಾರತದ ಪರಿಸ್ಥಿತಿ ಏನು?

ನಾಗರಾಜ ನಂಜುಂಡಯ್ಯ

ಯು.ಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿದೇಶಾಂಗ ನೀತಿಯಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡುವುದರ ಮೂಲಕ ತನ್ನ ಮೊದಲ ಅಧ್ಯಕ್ಷೀಯ ಅವಧಿಯನ್ನು ಪೂರ್ಣಗೊಳಿಸುತ್ತಿದ್ದಾರೆ. ಹಲವು ಒಪ್ಪಂದಗಳಿಂದ ಹೊರ ನಡೆದಿದ್ದುಅವುಗಳಲ್ಲಿ ಪ್ರಮುಖವಾದುವು, ಹವಾಮಾನ ಬದಲಾವಣೆಕುರಿತಂತೆ ಪ್ಯಾರಿಸ್ ಒಪ್ಪಂದಿಂದ ಮೊದಲುಗೊಂಡು ಇತ್ತೀಚಿಗಿನ ವಿಶ್ವ ಆರೋಗ್ಯ ಸಂಸ್ಥೆಗೆ ದೇಣಿಗೆ ನಿಲ್ಲಿಸಿದ್ದರ ವರೆವಿಗೂ ಅವು ಚಾಚಿಕೊಂಡಿವೆ. ಟ್ರಾನ್ಸ್-ಪೆಸಿಫಿಕ್ ಪಾಲುದಾರಿಕೆ ಒಪ್ಪಂದ, (ಟಿ.ಪಿ.ಪಿ.ಎ), ಇರಾನ್ ಅಣು ಒಪ್ಪಂದಗಳು ಗಂಭೀರವಾದ ಒಪ್ಪಂದಗಳ ಉಲ್ಲಂಘನೆಗಳಾಗಿವೆ.

ಎರಡನೇ ಮಹಾಯುದ್ಧದ ನಂತರ ರಚಿಸಲಾಗಿದ್ದ ಅಟ್ಲಾಂಟಿಕ್ ನ ಇಕ್ಕೆಲದ (ಉತ್ತರ ಅಮೆರಿಕ-ಪಶ್ಚಿಮ ಯುರೋಪ್) ಮೈತ್ರಿಕೂಟವನ್ನು ಬುಡಮೇಲು ಮಾಡುತ್ತಿರುವುದು ಬಹುಶಃ ಇವೆಲ್ಲವನ್ನು ಮೀರಿಸುವಂತಹ ಕೆಲಸ. ಜಿ-7 ಕೂಟವನ್ನು ಬುಡಮೇಲು ಮಾಡುವುದು ವಿಶೇಷವಾಗಿ ಅವರ ಗುರಿಯಿದ್ದಂತೆ ಕಾಣುತ್ತದೆ.

ಕೆನಡಾ ದಲ್ಲಿ ನಡೆದ (ಜೂನ್ 8-9, 2018) ಜಿ-7 ಶೃಂಗ ಸಭೆಯು ವಿಧ್ಯುಕ್ತವಾಗಿ ಮುಕ್ತಾಯವಾಗುವ ಮುನ್ನವೇ, ಟ್ರಂಪ್ ರವರು ಹೊರ ಬಂದ್ದಿದರು. ಆ ಸಭೆಯ ಹೇಳಿಕೆಯನ್ನು ತಿರಸ್ಕರಿಸಿದ್ದರು ಮತ್ತು ಸಭೆಯ ಆತಿಥ್ಯ ವಹಿಸಿದ್ದ, ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಅವರನ್ನು 'ಅತ್ಯಂತ ಅಪ್ರಾಮಾಣಿಕ ಮತ್ತು ದುರ್ಬಲ' ನೆಂದು ಅವಮಾನಿಸಿದ್ದರು.

ಟ್ರಂಪ್ ಎಲ್ಲ ಇತರ ಜಿ-7 ಸದಸ್ಯರ ಮೇಲೆ ವಿಧಿಸಿದ್ದ, ಉಕ್ಕು ಮತ್ತು ಅಲ್ಯೂಮಿನಿಯಂ ಸುಂಕ ಆಗ ಘರ್ಷಣೆಗೆ ಕಾರಣವಾಗಿತ್ತು. ಮಾರ್ಚ್ 25 ರಂದು ನಡೆದ ಜಿ 7 ವಿದೇಶಾಂಗ ಮಂತ್ರಿಗಳ ಸಭೆಯಲ್ಲಿ ಯು.ಎಸ್ ವಿದೇಶಾಂಗ ಸಚಿವ ಮೈಕ್ ಪೊಂಪಿಯೊ "ಚೀನಾದ ವ್ಯೂಹಾನ್ ವೈರಸ್" ಎಂದು ಘೋಷಿಸಿ, ಹಾಗೆ ಜಂಟೀ ಹೇಳಿಕೆ ನೀಡಲು ಸಭೆ ನಿರಾಕರಿಸಿದಾಗ ಇನ್ನೊಂದು ಸುತ್ತಿನ ಘರ್ಷಣೆಯಾಗಿತ್ತು.

ಜಿ-7ನ ಸೂರ್ಯಾಸ್ತದತ್ತ?

ಈ ಹಿನ್ನೆಲೆಯಲ್ಲಿ ಜೂನ್ ಅಂತ್ಯದಲ್ಲಿ, "ಜಿ 7 ಶೃಂಗ ಸಭೆ" ಯನ್ನು ವೀಡಿಯೋ ಕಾನ್ಫರೆನ್ಸ್ ಬದಲಿಗೆಮುಖಾಮುಖಿಯಾಗಿ ವಾಷಿಂಗ್ಟನ್ ಡಿಸಿ ಯ ಕ್ಯಾಂಪ್ ಡೇವಿಡ್ ನಲ್ಲಿ ನಡೆಸುವುದಾಗಿ ಟ್ರಂಪ್ ಸೂಚಿಸಿದ್ದಾರೆ. "ಪ್ರಸ್ತುತ ಅಮೆರಿಕಾವು ಮತ್ತೆ ಶ್ರೇಷ್ಠತೆಗೆ ಮರಳುತ್ತಿದೆ." ಮುಖಾಮುಖಿ ಶೃಂಗ ಸಭೆಯು "ಶಕ್ತಿ ಮತ್ತು ಆಶಾಭಾವನೆಯ ಪ್ರದರ್ಶನ" ವಾಗಿರುತ್ತದೆ. ಅಲ್ಲಿ ನಾಯಕರು ಕೊವಿಡ್ ಜೊತೆಗೆ ಎಂದಿನಂತೆ ವ್ಯಾಪಾರ ವ್ಯವಹಾರ ವನ್ನು ಮುಂದುವರಿಸುತ್ತೇವೆ ಎಂದು ದೃಢಪಡಿಸುತ್ತಾರೆ ಎಂದು ಟ್ರಂಪ್ ನ ವಕ್ತಾರರು ತಿಳಿಸಿದ್ದಾರೆ.

ಮಾರ್ಕೆಲ್ ಟ್ರಂಪ್ ರ ಆಹ್ವಾನವನ್ನು ನಿರಾಕರಿಸಿದ್ದಾರೆ. ಆದರೆ, ಮ್ಯಾಕ್ರಾನ್ ಭಾಗವಹಿಸಲು ಇಚ್ಚಿಸಿದ್ದಾರೆ. ಟ್ರಂಪ್ ಮತ್ತು ಮಾರ್ಕೆಲ್ ಉಭಯ ನಾಯಕರ ನಡುವಿನ ಸಂಬಂಧಗಳು ಕಠಿಣವಾಗಿವೆ. ಬರ್ಲಿನ್ ನ ವ್ಯಾಪಾರ ಹೆಚ್ಚುವರಿ ಮತ್ತು ಅದರ ರಕ್ಷಣಾ ವೆಚ್ಚದವರೆಗಿನ ವಿಷಯಗಳ ಬಗ್ಗೆ, ಹಲವಾರು ವಿದೇಶಾಂಗ ನೀತಿಗಳ ಕುರಿತಂತೆ ಟ್ರಂಪ್ ಆಡಳಿತದ ಏಕಪಕ್ಷೀಯ ನಿರ್ಧಾರಗಳ ಬಗ್ಗೆ ಮಾರ್ಕೆಲ್ ಭಿನ್ನಮತ ಇದೆ. ಜೊತೆಗೆ, ಉಭಯ ನಾಯಕರು ನ್ಯಾಟೋ, ರಷ್ಯಾ ಮತ್ತು ಜರ್ಮನಿಯ ನಡುವಿನ ನಾರ್ಡ್ ಸ್ಟ್ರೀಮ್-2, ಗ್ಯಾಸ್ ಪೈಪ್ ಲೈನ್ ಮತ್ತು ಚೀನಾದೊಂದಿಗಿನ ಸಂಬಂಧಗಳು ಸೇರಿದಂತೆ, ಅನೇಕ ವಿಷಯಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳಿವೆ.

ಜಿ 7 ಸಭೆಯನ್ನು ಜೂನ್ ಬದಲು, ಸೆಪ್ಟೆಂಬರ್ ನಲ್ಲಿ ನಡೆಸಲು ಟಂಪ್ ದಿನಾಂಕ ವನ್ನು ಮರು ಹೊಂದಿಸಲು ಯೋಜಿಸಿದ್ದಾರೆ. ಈ ಸಭೆ ರಷ್ಯಾವನ್ನು ಒಳಗೊಳ್ಳುವ ವಿಸ್ತೃತ ಸ್ವರೂಪದ ಸಭೆಯೆಂದು ಪ್ರತಿಪಾದಿಸಿ ಕೊಂಡಿದ್ದಾರೆ. ರಷ್ಯಾವನ್ನು ಜಿ 7ಗೆ ಮತ್ತೆ ಆಹ್ವಾನಿಸಲಾಗುವುದು ಎಂದು ತಿಳಿಸಿದ್ದಾರೆ. ಏಕೆಂದರೆ ಟ್ರಂಪ್ ನ ಪ್ರಕಾರ, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಪುನಃ ಜಿ 7 ಗುಂಪಿಗೆ ಬಂದರೆ, ವಿವಿಧ ಸಮಸ್ಯೆಗಳನ್ನು ಪರಿಹರಿಸಲು ಸುಲಭವಾಗುತ್ತದೆ.ಹಾಗೆಯೇ, ರಷ್ಯಾ ಮತ್ತು ಚೀನಾದ ನಡುವಿನ ಸಂಬಂಧಗಳಲ್ಲಿ ಒಡಕು ಮೂಡಿಸಿ, ಈ ಎರಡು ದೇಶಗಳನ್ನು ಬೇರ್ಪಡಿಸಬಹುದು ಎಂಬ ಹವಣಿಕೆಯಲ್ಲಿ ಟ್ರಂಪ್ ಇದ್ದಾರೆ.

ಕೆನಡಾ, ಯುಕೆ, ಮತ್ತು ಯುರೋಪಿಯನ್ ಯೂನಿಯನ್ ನ ಅನೇಕ ದೇಶಗಳು, ಜಿ 7 ಗುಂಪಿಗೆ ರಷ್ಯಾ ಹಿಂದಿರುಗುವುದನ್ನು ತೀವ್ರವಾಗಿ ಆಕ್ಷೇಪಿಸಿವೆ. ಜಪಾನ್, ಫ್ರಾನ್ಸ್ ಮತ್ತು ಇಟಲಿ ಕೂಡಾ ಇದೇ ನಿಲುವನ್ನು ಹೊಂದಿವೆ ಎನ್ನಲಾಗಿದೆ. ಇವತ್ತಿನ ವಾತಾವರಣದಲ್ಲಿ ಪ್ರಸ್ತುತ ಜಿ 7 ಗುಂಪನ್ನು ಬದಲಾಯಿಸುವುದು ತರವಲ್ಲ ಎಂದು ಜರ್ಮನಿ ತೀಕ್ಷ್ಣವಾಗಿ ಹೇಳಿದೆ.

ಟ್ರಂಪ್, ರಷ್ಯಾವನ್ನು "ಜಿ 7 ಶೃಂಗ ಸಭೆಗೆ ವೀಕ್ಷಕ" ರಾಗಿ ಆಹ್ವಾನ ನೀಡುವುದಾಗಿ ಟ್ವೀಟ್ ಮಾಡಿದ್ದಾರೆ. ಇದರೊಂದಿಗೆ, ಆಸ್ಟ್ರೇಲಿಯಾ, ಇಸ್ರೇಲ್ ಮತ್ತು ಭಾರತ ದೇಶಗಳನ್ನು 'ವೀಕ್ಷಕ' ರಾಗಿ ಆಹ್ವಾನಿಸಲು ಬಯಸಿದ್ದಾರೆ. ಇದನ್ನು "ಜಿ 7 ಪ್ಲಸ್ " ಕಾರ್ಯವಿಧಾನ ವೆಂದು ಕ 'ರೆಯಲಾಗುತ್ತದೆ.ಶೃಂಗಸಭೆಗೆ 'ವೀಕ್ಷಕ'ರಾಗಿ ಇತರ ದೇಶಗಳನ್ನು ಆಮಂತ್ರಿಸಲುಆತಿಥ್ಯ ವಹಿಸುವ ದೇಶಕ್ಕೆ ಇರುವಅವಕಾಶವನ್ನು ಟ್ರಂಪ್ ಬಳಸುತ್ತಿದ್ದಾರೆ.

ಆದರೆ, ರಷ್ಯಾಕ್ಕೆ ಈ ಆಮಂತ್ರಣ ನುಂಗಲಾರದ ಕಹಿ ಮಾತ್ರೆ ಆಗಿದೆ. ಏಕೆಂದರೆ, ಹಿಂದೆ ಒಬ್ಬ ಪೂರ್ಣ ಸದಸ್ಯನಾಗಿದ್ದ ದೇಶವನ್ನು ಹೊರ ಹಾಕಿಈಗ "ವೀಕ್ಷಕ" ಎಂದು ಆಹ್ವಾನಿಸಲಾಗಿದೆ. ಪುಟಿನ್ ಕೂಡ, ಟ್ರಂಪ್ ರನ್ನು ಭೇಟಿಯಾಗಲು ಉತ್ಸುಕರಾಗಿದ್ದಾರೆ. ಶಸ್ತ್ರಾಸ್ತ್ರ ನಿಯಂತ್ರಣ ದಂತಹ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು, ಟ್ರಂಪ್ ರ ಹಸ್ತಕ್ಷೇಪದಿಂದ ಮಾತ್ರ ಸಾಧ್ಯ ಎಂದು ಅವರಿಗೆ ಗೊತ್ತಿದೆ ಹಾಗೂ ಮುಂದಿನ ಫೆಬ್ರವರಿ 5, 2021 ರಂದು, ಹೊಸ 'ಸ್ಟಾರ್ಟ್' ನವೀಕರಣಕ್ಕೆ ಬರಲಿದೆ. ಹಾಗೆಯೇ, ರಷ್ಯಾದ ರಾಜಕೀಯ ಪಂಡಿತರ ಪ್ರಕಾರ, ಟ್ರಂಪ್ ಎರಡನೆಯ ಬಾರಿಗೆ ಪುನರಾಯ್ಕೆಯಾಗುವುದು ಖಚಿತ. ಹಾಗಾಗಿ ರಷ್ಯಾ-ಅಮೆರಿಕಾ ಸಂಬಂಧಗಳನ್ನು ಸರಿಪಡಿಸಿಕೊಳ್ಳಲು ಐತಿಹಾಸಿಕ ಅವಕಾಶಗಳು ಒದಗಿ ಬರುತ್ತವೆ ಎಂಬುದು ರಷ್ಯಾದ ಲೆಕ್ಕಾಚಾರ.

ಸೆಪ್ಟೆಂಬರ್ ನಲ್ಲಿ ನಡೆವ ಜಿ 7 ಶೃಂಗ ಸಭೆ ಯಲ್ಲಿ, ಇತರ ಸದಸ್ಯ ದೇಶಗಳು ಯುಎಸ್-ರಷ್ಯಾಸಂಬಂಧಗಳ ಪುನಶ್ಚೇತನಕ್ಕೆ 'ಮೂಕ ಸಾಕ್ಷಿಗಳಾಗಿ ಬಹುದು ಎಂದು ಆತಂಕಿತವಾಗಿವೆ. ಸೆಪ್ಟೆಂಬರ್ ವೇಳೆಗೆ 9,500 ಅಮೆರಿಕನ್ ಸೈನಿಕರನ್ನು ಜರ್ಮನಿಯ ನೆಲೆಗಳಿಂದ ಹಿಂತೆಗೆದುಕೊಳ್ಳುವ ಯೋಜನೆಯನ್ನು ಅನುಮೋದಿಸಿದ್ದಾರೆ. ಪ್ರಸ್ತುತ ಜರ್ಮನಿ ಯುರೋಪ್ ನಲ್ಲಿ ಅತಿ ಹೆಚ್ಚು ಯುಎಸ್ ಪಡೆಗಳನ್ನು ಹೊಂದಿದೆ. ಇದು ಜರ್ಮನಿಯನ್ನು ಕಿರಿಕಿರಿ ಗೊಳಿಸಿದೆ. ಟ್ರಂಪ್ ರ ನಿರ್ಧಾರ ಗಳು ನ್ಯಾಟೋದಲ್ಲಿನ ಜಿ-7 ದೇಶಗಳ ಒಗ್ಗಟ್ಟನ್ನು ಒಡೆಯುತ್ತದೆ. ಅವರು ಯುರೋಪಿಯನ್ ಕೂಟ (ಇ.ಯು) ವಿರುದ್ಧ ಪ್ರತೀಕಾರ ತೀರಿಸಿಕೊಳ್ಳಲು ಹೊರಟಿದ್ದಾರೆ. ಏಕೆಂದರೆ, ಚೀನಾದ ಮೇಲೆ ಯುಎಸ್ ನ ಧೋರಣೆಗಳನ್ನು ಅನುಮೋದಿಸಿ ಅನುಸರಿಸಲು ನ್ಯಾಟೋ ಮತ್ತು ಬಹುತೇಕ ಜಿ-7 ದೇಶಗಳು ನಿರಾಕರಿಸಿವೆ. ಟ್ರಂಪ್ ಯೋಜನೆ ಅರ್ಥ ಮಾಡಿಕೊಂಡಿರುವ ಚೀನಾದ ಅಧ್ಯಕ್ಷ ಕ್ಸಿ ಜಿನ್ಪಿಂಗ್ ಜರ್ಮನಿ ಯ ಮಾರ್ಕೆಲ್ ಮತ್ತು ಫ್ರಾನ್ಸ್ ನ ಮ್ಯಾಕ್ರಾನ್ ಗೆ ದೂರವಾಣಿ ಕರೆ ಮಾಡಿ ಮಾತನಾಡಿದ್ದಾರೆ.

ರಶ್ಯ-ಚೀನಾ ವಿಭಜನೆಯ ತಂತ್ರ

ಪುಟಿನ್ ಗೆ ಟ್ರಂಪ್ ರವರು ಜಿ-7 ಗೆ ಆಹ್ವಾನ ನೀಡಿರುವುದು ಚೀನಾಕ್ಕೆ ಆಶ್ಚರ್ಯ ಉಂಟು ಮಾಡಿದೆ. ಆದರೆ ಈ ಆಹ್ವಾನದಿಂದ ಯುಎಸ್-ರಷ್ಯಾ ನಡುವಿನ ಉದ್ವಿಗ್ನತೆ ಶೀಘ್ರದಲ್ಲೇ ಕಡಿಮೆಗೊಳಿಸುತ್ತದೆ ಎಂಬ ನಿರೀಕ್ಷೆಯೇನು ಚೀನಾಗೇನು ಇಲ್ಲ. ಜಿ-7 ಶೃಂಗ ಸಭೆಯ ವಿಸ್ತರಣೆಯ ಟ್ರಂಪ್ ರ ಪ್ರಸ್ತಾಪವನ್ನು ರಶ್ಯ "ಸರಿಯಾದ ದಿಕ್ಕಿನಲ್ಲಿ ಒಂದು ಹೆಜ್ಜೆ" ಎಂದಿದೆ. ಆದರೆ, "ಚೀನಾದ ಭಾಗವಹಿಸುವಿಕೆ ಇಲ್ಲದೆ, ಅದು ಜಾಗತಿಕ ಮಹತ್ವದ ಗಂಭೀರ ಕಾರ್ಯಗಳನ್ನು ಕಾರ್ಯಗತಗೊಳಿಸಲು ಅಷ್ಟೇನೂ ಫಲಕಾರಿಯಾಗಲಾರದು" ಎಂದು ಹೇಳುವ ಮೂಲಕ ಚೀನಾಕ್ಕೆ ಆಗಬಹುದಾದ ಆತಂಕವನ್ನು ಶಮನ ಮಾಡಿದೆ.

ಈ ಆಮಂತ್ರಣದಿಂದ ವಾಷಿಂಗ್ಟನ್ ನೊಂದಿಗೆ ಸಮಾನ ಸಂಬಂಧ ವನ್ನು ಅಷ್ಟು ಸುಲಭವಾಗಿ, ಇಂದು ಅಥವಾ ಎಂದೆಂದಿಗೂ ನಿರೀಕ್ಷಿಸುವ ಭ್ರಮೆ ರಷ್ಯಾಕ್ಕೆ ಇಲ್ಲ. ರಶ್ಯದೊಂದಿಗಿನ ಯು.ಎಸ್ ನ ಸಂಬಂದಗಳನ್ನು ಮರುಹೊಂದಿಸುವುದಕ್ಕಿಂತ, "ಚೀನಾವನ್ನು ರಷ್ಯಾದಿಂದ ಪ್ರತ್ಯೇಕಿಸಲು" ಟ್ರಂಪ್ ಹೂಡಿರುವ ದೀರ್ಘಕಾಲೀನ ರಣನೀತಿ ಎಂದುರಶ್ಯ ಅರ್ಥೈಸಿದೆ. ಅದಕ್ಕಾಗಿಯೇ ಟ್ರಂಪ್ ಆಹ್ವಾನದ ಮರುದಿನವೇ ಯು.ಎಸ್ ಸಾಂಪ್ರದಾಯಿಕ ದಾಳಿಗೆ



ಅಣ್ವಸ್ತ್ರ ಪ್ರತಿದಾಳಿಯ ಹೊಸ ನೀತಿಯನ್ನು ಪ್ರಕಟಿಸಿದೆ. ಆದರೂ ರಶ್ಯ ಉತ್ತರ ಅಮೆರಿಕ-ಪಶ್ಚಿಮ ಯುರೋಪಿನ ಮೈತ್ರಿಕೂಟವನ್ನು ಒಡೆಯಲು ಮತ್ತು ಯುರೋಪಿಯನ್ ದೇಶಗಳೊಂದಿಗೆ ದ್ವಿಪಕ್ಷೀಯ ಸಂಬಂಧಗಳನ್ನು ಸ್ಥಾಪಿಸಲು ಸುಸಂಧಿ ಎಂದು ಬಗೆದಿದೆ. ಜಿ-7ಸೂರ್ಯ ಕಂತುತ್ತಿದೆ ಎಂದು ರಶ್ಯ-ಚೀನಾ ಗಳಿಗೆ ಗೊತ್ತಿದೆ. ತಮ್ಮ ವ್ಯೂಹಾತ್ಮಕ ಸಂಬಂಧಗಳನ್ನು ಕಾಪಿಟ್ಟುಕೊಂಡು ಉತ್ತರ ಅಮೆರಿಕ-ಪಶ್ಚಿಮ ಯುರೋಪಿನ ಮೈತ್ರಿಕೂಟವನ್ನು ಒಡೆಯುವ ಪ್ರತಿತಂತ್ರವನ್ನು ಅವು ಪ್ರಯತ್ನಿಸುತ್ತಿವೆ.

ಇನ್ನೊಂದು ಕಡೆ, ಯುಎಸ್ ನ ತನ್ನ ಎರಡು ವಿರೋಧಿ ಶಕ್ತಿಗಳನ್ನು ಎದುರಿಸಲು ಎರಡು ವಿಭಿನ್ನ ರಣನೀತಿಗಳನ್ನು ಅನುಸರಿಸುತ್ತಿದೆ. ಒಂದು ಕಡೆ ಚೀನಾವನ್ನು ಎದುರಿಸಲು ಆಕ್ರಮಣಕಾರಿ ಮಾದರಿಯನ್ನು, ಮತ್ತೊಂದು ಕಡೆ, ರಷ್ಯಾವನ್ನು ಸಮಾಧಾನ ಪಡಿಸಲು ಸಂಯಮದ ಮಾದರಿಯನ್ನು ಅನುಸರಿಸುತ್ತಿದೆ.

ಅಂತರಾಷ್ಟ್ರೀಯ ವ್ಯವಸ್ಥೆ ಯಲ್ಲಿ 'ಕೋವಿಡ್ ಹಿನ್ನೆಲೆಯಲ್ಲಿ ಚೀನಾದ ವಿರುದ್ಧ ಆಕ್ರಾಮಕ ನೀತಿಯನ್ನು ಅನುಸರಿಸಿ ಎಲ್ಲ ದೇಶಗಳನ್ನು ಇದಕ್ಕಾಗಿ ಅಣಿ ನೆರೆಸಬೇಕು. ರಷ್ಯಾದೊಂದಿಗೆ ವ್ಯವಹರಿಸುವಾಗ, ಜಾರ್ಜಿಯಾ ಮತ್ತು ಉಕ್ರೇನ್ ಗಳ ಕುರಿತಂತೆ ಮತ್ತು ಆಂತರಿಕ 'ಸರ್ವಾಧಿಕಾರಿ'ಕ್ರಮಗಳನ್ನು ಟೀಕಿಸುವಾಗ ಸಂಯಮವನ್ನು ತೋರಿಸಬೇಕಾಗುತ್ತದೆ. ಈ ಎರಡು ವಿಭಿನ್ನ ಕಾರ್ಯತಂತ್ರಗಳನ್ನು ಬಳಸುವ ಮೂಲಕ ಚೀನಾ-ರಷ್ಯಾ ವಿಭಜನೆ ಸಾಧಿಸಬಹುದು ಎಂದು ಟ್ರಂಪ್ ಹವಣಿಕೆ.

ಚೀನಾ ಈಗ ದೊಡ್ಡ ನೌಕಾಪಡೆಯ ಜೊತೆಗೆ ಪರಮಾಣು ಶಕ್ತಿಯಾಗಿ ಬೆಳೆದು ನಿಂತಿದೆ. ಬೀಜಿಂಗ್ ಪರಮಾಣು ಶಕ್ತಿ ಯಿಂದಾಗಿ ಮಾಸ್ಕೋ ಗೆ ಅಂಟಿಕೊಂಡಿದೆ ಎಂದು ಯು.ಎಸ್ ಅರ್ಥೈಸುತ್ತಿಲ್ಲ. ಮಿಲಿಟರಿ ಮತ್ತು ಆರ್ಥಿಕ ಶಕ್ತಿ ಗಿಂತ ಹೆಚ್ಚಾಗಿ, ಯುರೇಶಿಯಾ ಭೌಗೋಳಿಕತೆಯು ಚೀನಾ-ರಷ್ಯಾದ ಸಂಬಂಧವನ್ನು ನಿರ್ದೇಶೀಸುತ್ತಿದೆ. ಈ ಯುರೇಶಿಯನ್ ಭೂ ಸಂಪರ್ಕವನ್ನು ಯು.ಎಸ್ ತಡೆಯಲು ಬಯಸುತ್ತದೆ. ಆದ್ದರಿಂದ, ಚೀನಾ-ರಷ್ಯಾದ ಸಂಬಂಧದಲ್ಲಿ, ಭೌಗೋಳಿಕ ತೆಯ ಮಹತ್ವವೇ ಪ್ರಮುಖವಾಗುತ್ತದೆ. ಆದ್ದರಿಂದ, ಇವುಗಳ ನಡುವಿನ ಭೌಗೋಳಿಕ ಬದ್ಧತೆಯನ್ನು ಬೇರ್ಪಡಿಸಲು ಜಿ 7 ಅನ್ನು ಕೂಡ ಒಂದು ಅಸ್ತ್ರವನ್ನಾಗಿ ಬಳಸುತ್ತಿದೆ. ಶೀತ ಸಮರದಲ್ಲಿ ಸೋವಿಯೆಟ್-ಚೀನಾ ಕೂಟವನ್ನು ರಣನೀತಿ-ತಂತ್ರಗಳ ಮೂಲಕ ಮುರಿದು ಎರಡನ್ನೂ ದುರ್ಬಲಗೊಳಿಸಿತ್ತು. ಎರಡೂ ದೇಶಗಳ ಆಗಿನ ನಾಯಕತ್ವ ಈ ಯು.ಎಸ್ ತಂತ್ರವನ್ನು ಅರ್ಥ ಮಾಡಿಕೊಳ್ಳದೆ ಅದಕ್ಕೆ ಬಲಿ ಬಿದ್ದಿದ್ದವು. ಈಗಲೂ ಯು.ಎಸ್ ಅದೇ ತಂತ್ರವನ್ನು ಅನುಸರಿಸಲು ಪ್ರಯತ್ನಿಸುತ್ತಿದೆ. ಆಗ ಎರಡೂ ದೇಶಗಳು ಸಮಾಜವಾದಿ ಬಣಕ್ಕೆ ಸೇರಿದ್ದೂ ಬಲಿಯಾಗಿದ್ದವು. ಈಗ ಎರಡೂ ಭಿನ್ನ ವ್ಯವಸ್ಥೆಗಳನ್ನು ಹೊಂದಿರುವುದರಿಂದ ಅದು ಇನ್ನೂ ಸುಲಭ ಎಂದು ಯು.ಎಸ್ ಬಗೆದಿದೆ.

ಆದರೆ, ಚೀನಾ-ರಶ್ಯಗಳು ಬಲವಾದ ಆರ್ಥಿಕ ಸಂಪರ್ಕವನ್ನು ಹೊಂದಿವೆ. ದ್ವಿಪಕ್ಷೀಯ ವ್ಯಾಪಾರವು 100 ಬಿಲಿಯನ್ ವ್ಯಾಪ್ತಿಯಲ್ಲಿದೆ. ಮಿಲಿಟರಿ ಸಲಕರಣೆಗಳ ಉತ್ಪಾದನೆ ಮತ್ತು ಗುಪ್ತಚರ ರಂಗದಲ್ಲಿ ಉಭಯರು ಸಾಕಷ್ಟು ಸಹಕರಿಸುತ್ತಿದ್ದಾರೆ. ಯುಎಸ್ ಗೆ ಸಂಯೋಜಿತ ಪ್ರತಿರೋಧವನ್ನು ಒಡ್ಡಬಲ್ಲ ಶಕ್ತಿ ಈ ಎರಡರ ಉನ್ನತ ಮಟ್ಟದ ಸಂಯೋಜನೆಯ ಬದ್ಧತೆಯಲ್ಲಿದೆ. ಏಕಾಂಗಿಯಾಗಿ ಹೋರಾಡುವುದರಿಂದ, ಅವರನ್ನು ಯು.ಎಸ್ ಸೋಲಿಸುತ್ತದೆ ಎಂಬ ಅರಿವು ಅವರಿಗಿದೆ.

ಕೊರೋನಾ ವೈರಸ್ ದಾಳಿಯಿಂದ ಮತ್ತು ಅದರ ನೆಪದಲ್ಲಿ ಅದನ್ನು ಒಂಟಿಯಾಗಿಸುವ ಅಮೆರಿಕದ ಆರ್ಥಿಕ ದಾಳಿಯಿಂದ ಚೀನಾದ ಆರ್ಥಿಕ ಬೆಳವಣಿಗೆಗೆ ಅಡ್ಡಿ ಉಂಟಾಗುವುದನ್ನು ಅಲ್ಲಗಳೆಯುವಂತಿಲ್ಲ. ಹಲವು ದಶಕಗಳಲ್ಲಿ, ಮೊದಲ ಬಾರಿಗೆ ಚೀನಾ ಜಿಡಿಪಿ ಬೆಳವಣಿಗೆ ಶೇ.5 ಕ್ಕಿಂತ ಕಡಿಮೆ ದಾಖಲಿಸುವ ಸಾಧ್ಯತೆಯಿದೆ. ಹಾಗೆಯೇ, ಕಡಿಮೆ ತೈಲ ಬೆಲೆಗಳ ನಾಗಲೋಟ, ರಷ್ಯಾ ಆರ್ಥಿಕತೆಯ ಬೆಳವಣಿಗೆಯ ಮೇಲೆ ಪರಿಣಾಮ ಬೀರಲಿದೆ.

ಶೀತಸಮರದ ತಂತ್ರ ಈಗಲೂ ಫಲಿಸುವುದೇ?

ಈ ಎಲ್ಲಾ ಬೆಳವಣಿಗೆಯ ನಡುವೆಯೇ, ಚೀನಾವನ್ನು ರಷ್ಯಾದಿಂದ ಬೇರ್ಪಡಿಸಲು ಇದೊಂದು ಸೂಕ್ತ ಕ್ಷಣವೆಂದು ಯುಎಸ್ ಭಾವಿಸಿದೆ. ಮುಳುಗುತ್ತಿರುವ ಚೀನಾದ ಆರ್ಥಿಕ ಹಡಗನ್ನು ಮೇಲೆತ್ತಲು ಹೋಗದೆ, ಕೈ ಬಿಟ್ಟು ಬರುವಂತೆ ರಷ್ಯಾವನ್ನು ಜಿ-7 ಮೂಲಕ ಆಹ್ವಾನಿಸಿದೆ. ಆದರೆ, ಕೋವಿಡ್-19 ಬಿಕ್ಕಟ್ಟಿನ ಉದ್ದಕ್ಕೂ ಇಬ್ಬರೂ ಒಟ್ಟಾಗಿ ನಿಂತಿದ್ದಾರೆ. ಕೊವಿಡ್ ಸಂಬಂಧಿತ ಆರೋಪವನ್ನು ನಿವಾರಿಸಲು ರಷ್ಯಾ ರಾಜತಾಂತ್ರಿಕವಾಗಿ ಚೀನಾಕ್ಕೆ ಸಹಾಯ ಮಾಡಿದೆ.

ಈ ನಡುವೆ, ರಷ್ಯಾ ಮತ್ತು ಅಮೆರಿಕಾ ಸಂಬಂಧಗಳು ಮಂದಗತಿಯಲ್ಲಿವೆ. ಏಕೆಂದರೆ, ಅಧ್ಯಕ್ಷ ಪುಟಿನ್ ತುಂಬಾ ಮೂಗು ತೂರಿಸುತ್ತಾರೆ ಎಂದು ಯುಎಸ್ ನ ರಾಜಕೀಯ ವಲಯದ ಅಭಿಪ್ರಾಯ. ಅಮೆರಿಕಾದ ಈ ಹಿಂದಿನ ಚುನಾವಣೆಯಲ್ಲಿ ಚುನಾವಣಾ ವ್ಯವಸ್ಥೆಯಲ್ಲೂ ಮೂಗು ತೂರಿಸಿದ ಆರೋಪವನ್ನು ಪುಟಿನ್ ಹೊತ್ತಿದ್ದಾರೆ. ಅಮೆರಿಕಾದಲ್ಲಿ ಪ್ರಸ್ತುತ ನಡೆಯುತ್ತಿರುವ ಜನಾಂಗ ಗಲಭೆಗಳಿಗೆ ಹಲವರು ರಷ್ಯಾವನ್ನು ದೂಷಿಸಿದ್ದಾರೆ.

ಜಾಗತಿಕ ಭೌಗೋಳಿಕ ರಾಜಕೀಯ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಅನಿಶ್ಚಿತತೆಯ ಮಧ್ಯೆ, ಇತಿಹಾಸ ಮತ್ತು ಭೌಗೋಳಿಕ ಎರಡೂ ಮುಂದಿನ ದಿಗಳಲ್ಲಿ ರಷ್ಯಾ ಮತ್ತು ಚೀನಾ ಎರಡೂ ಮಾಡಿಕೊಳ್ಳುವ ಆಯ್ಕೆಗಳ ಮೇಲೆ ಅವಲಂಭಿತವಾಗಿದೆ. ಶೀತಸಮರದಲ್ಲಿ ಅಮೆರಿಕಾವು ಚೀನಾವನ್ನು ರಶ್ಯಾದಿಂದ ಪ್ರತ್ಯೇಕಿಸಿ ಅದಕ್ಕೆ ಪಾಶ್ಚಿಮಾತ್ಯ ಕೂಟದ ಜತೆ ಬೆರೆಯುವ ಅವಕಾಶ ಕಲ್ಪಿಸಿ ಐಕ್ಯತೆ ಮುರಿದಿತ್ತು. ಈಗ ಅದು ರಷ್ಯಾವನ್ನು ಚೀನಾದಿಂದ ದೂರವಿಟ್ಟು, ಬಹುತೇಕ ಪಶ್ಚಿಮದತ್ತಸೆಳೆಯುವ ಪ್ರಯತ್ನ ಮಾಡುತ್ತಿದೆ.

ಚೀನಾ-ರಶ್ಯಗಳನ್ನು ವಿಭಜಿಸುವಲ್ಲಿ ಅಮೆರಿಕ ಸಫಲವಾಗುವುದೇ? ಚೀನಾ-ರಶ್ಯ ವಿಭಜನೆಯಾಗದೆ ಜಿ-7ನ ಸೂರ್ಯಾಸ್ತವಾಗುವುದೇ? ಅಥವಾಜರ್ಮನಿ, ಫ್ರಾನ್ಸ್ ಗಳನ್ನು ಸೇರಿಸಿಕೊಂಡು ರಶ್ಯಾ-ಚೀನಗಳು ಯುರೇಶಿಯನ್ ವಿಸ್ತೃತ ಕೂಟ ಕಟ್ಟುವವೇ? ಈ ಪ್ರಶ್ನೆಗಳಿಗೆ ಜಿ-7 ಶೃಂಗಸಭೆ ಕೆಲವು ಉತ್ತರಗಳನ್ನು ನೀಡಬಹುದು. ಈ ನಿಟ್ಟಿನಲ್ಲಿ, ಅಂತರಾಷ್ಟ್ರೀಯ ಹಣಕಾಸು ನಿಧಿ, ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಒಪ್ಪಂದ, ನ್ಯಾಟೋ ಮತ್ತು ಇತರ ಅಂತಾರಾಷ್ಟ್ರೀಯ ಸಂಸ್ಥೆಗಳಿಗೆ ದಿಕ್ಸೂಚಿ ನೀಡಲು ಬಳಸುವ ಜಿ 7 ಗುಂಪಿನ ಮುಂದಿನ ಶೃಂಗ ಸಭೆಯಲ್ಲಿ ಕೈಗೊಳ್ಳುವ ನಿರ್ಧಾರಗಳಿಗೆ ಇನ್ನಿಲ್ಲದ ಮಹತ್ವ ಬಂದಿದೆ. ಚೀನಾ-ರಶ್ಯ ವಿಭಜನೆಯಾಗದೆ ಜಿ-7ನ ಸೂರ್ಯಾಸ್ತವಾದರೆ ಯು.ಎಸ್ ಒಂಟಿಯಾಗುವುದೇ? ಆಗ ಅದರ ಜೂನಿಯರ್ ಪಾರ್ಟನರ್ ಆಗಿರುವ ಭಾರತದ ಪರಿಸ್ಥಿತಿ ಏನು?

JANASHAKTHI KANNADA VARA PATRIKE JUNE 22-28, 2020 Price: Rs. 10/- Date of Publication: 19 JUNE 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಕೊರೊನಾ ನಿಯಂತ್ರಿಸುವಲ್ಲಿ ಮೋದಿ ಸರ್ಕಾರ ವಿಫಲ: ರಾಜ್ಯದಲ್ಲಿ ವ್ಯಾಪಕ ಪ್ರತಿಭಟನೆ

ಪುಟ 8 ರಿಂದ

ತಾಲೂಕು ಕೇಂದ್ರಗಳಲ್ಲಿ ತಲಾ ಒಂದು ಪ್ರತಿಭಟನೆ ನಡೆದಿದೆ.

ಕಲಬುರ್ಗಿ ಜಿಲ್ಲೆಯಲ್ಲಿ 6 ತಾಲೂಕುಗಳು ಮತ್ತು ಕಲ್ಬುರ್ಗಿ ನಗರದಲ್ಲಿ ಒಟ್ಟಿಗೆ 22 ಸ್ಥಳಗಳಲ್ಲಿ ಪ್ರತಿಭಟನೆಗಳು ನಡೆದಿರುವುದಾಗಿ ತಿಳಿದು ಬಂದಿದೆ. ಜೇವರ್ಗಿ ತಾಲೂಕು ಮತ್ತು 5 ಗ್ರಾಮ ಪಂಚಾಯತ್ ಕಚೇರಿಗಳ ಎದುರು, ಚಿಂಚೋಳಿ ತಾಲೂಕು ಮತ್ತು 4 ಗ್ರಾಮ ಪಂಚಾಯತ್ ಕಚೇರಿಗಳ ಎದುರು, ಆಳಂದ ತಾಲೂಕು ಮತ್ತು 1 ಗ್ರಾಮ ಪಂಚಾಯತ್ ಕಚೇರಿಗಳ ಎದುರು, ಚಿತ್ತಾಪುರ, ಶಹಾಬಾದ್, ಕಾಳಗಿ ತಾಲೂಕು ಕಚೇರಿಗಳ ಎದುರು, ಹಾಗೂ ಕಲಬುರ್ಗಿ ನಗರದಲ್ಲಿ 6 ಕಡೆ ಪ್ರತಿಭಟನೆಗಳು ನಡೆದಿವೆ. 19 ಮನರೇಗಾ ಕೆಲಸ ನಡೆಯುವ ಕೇಂದ್ರಗಳಲ್ಲಿ ಸಹ ಪ್ರತಿಭಟನೆಗಳು ನಡೆದವು ಎಂದು ವರದಿಯಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಆರು ತಾಲೂಕುಗಳಲ್ಲಿ ಒಟ್ಟು 22 ಸ್ಥಳಗಳಲ್ಲಿ ಪ್ರತಿಭಟನೆ ನಡೆದಿದೆ. ಎಲ್ಲ 6 ತಾಲೂಕು ಕೇಂದ್ರಗಳಲ್ಲಿ ತಾಲೂಕು ಸಮಿತಿಗಳು ಮತ್ತು 16 ಶಾಖೆಗಳು ತಮ್ಮ ಪ್ರದೇಶಗಳಲ್ಲಿ ಪ್ರತಿಭಟನೆಯನ್ನು ಸಂಘಟಿಸಿದ್ದವು. ಸಿರಗುಪ್ಪದ 5, ಹಗರಿಬೊಮ್ಮನಹಳ್ಳಿ ಮತ್ತು ಸೊಂಡೂರಿನ ತಲಾ 4, ಕುರಗೋಡಿನ 2 ಹಾಗೂ ಹೊಸಪೇಟೆ ಮತ್ತು ಬಳ್ಳಾರಿ ನಗರ ಸಮಿತಿಗಳು ಪ್ರತಿಭಟನೆಯನ್ನು ಸಂಘಟಿಸಿದ್ದವು.

ಕೋಲಾರ ಜಿಲ್ಲೆಯ ಆರು – ಕೋಲಾರ (5), ಶ್ರೀನಿವಾಸಪುರ (3), ಬಂಗಾರಪೇಟೆ (2), ಕೆ.ಜಿ.ಎಫ್ (2), ಮುಳಬಾಗಿಲು (1) ಮತ್ತು ಮಾಲೂರು (1) – ತಾಲೂಕುಗಳಲ್ಲಿ ಒಟ್ಟು 14 ಸ್ಥಳಗಳಲ್ಲಿ ಪ್ರತಿಭಟನೆಗಳನ್ನು ಸಂಘಟಿಸಲಾಗಿತ್ತು.

ರಾಯಚೂರು, ಬೆಳಗಾವಿ, ಮೈಸೂರು, ಹಾಸನ, ಉ.ಕ., ತುಮಕೂರು ಜಿಲ್ಲೆಗಳ ತಲಾ 4 ಜಿಲ್ಲಾ/ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ, ಕೊಪ್ಪಳ ಮತ್ತು ಉಡುಪಿ ಜಿಲ್ಲೆಗಳ 3 ಜಿಲ್ಲಾ/ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 2 ಕಡೆ ಪ್ರತಿಭಟನೆ ನಡೆದಿದೆ.

ವಿಜಯಪುರ, ಯಾದಗೀರ, ಕೊಡಗು, ಧಾರವಾಡ, ಹಾವೇರಿ, ಗದಗ (ಗಜೇಂದ್ರಗಡ), ಶಿವಮೊಗ್ಗ ಜಿಲ್ಲೆಗಳಲ್ಲಿ ತಲಾ 1 ಕಡೆ ಪ್ರತಿಭಟನೆಗಳು ನಡೆದಿವೆ.


ಚಿಕ್ಕಬಳ್ಳಾಪುರ


ರಾಯಚೂರ್



ಕಲಬುರಗಿ



ಯಾದಗಿರಿ


ಧಾರವಾಡ


ಮಂಡ್ಯ



ಹಾಸನ


ಕೊಡಗು



ಶಿವಮೊಗ್ಗ



ಬೆಳಗಾವಿ


ದಕ್ಷಿಣ ಕನ್ನಡ


ಬಳ್ಳಾರಿ


ತುಮಕೂರು


ರಾಯಚೂರು


ಟಿನ್ ಫ್ಯಾಕ್ಟರಿ, ಬೆಂಗಳೂರು

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**